## ಅಧ್ಯಾಯ 1

# ಕ್ರಿಸ್ತನ ಸುವಾರ್ತೆಯ ಕುರಿತು ಪೌಲನ ಆತ್ಮಕಥಾ ರೂಪಕವಾದ ಪ್ರತಿವಾದ

## (ಭಾಗ 1)

ಪೌಲನು ಗಲಾತ್ಯದಲ್ಲಿನ ಸಭೆಗಳಿಗೆ ಕ್ಲುಪ್ತವಾಗಿ ವಂದನೆಗಳನ್ನು ತಿಳಿಸುವ ಮೂಲಕ ತನ್ನ ಪತ್ರಿಕೆಯನ್ನು ಆರಂಭಿಸುತ್ತಾನೆ (1:1–5). ಆತನು ಅವರಿಗಾಗಿ ಯಾವದೇ ಪ್ರಾರ್ಥನೆಯನ್ನು ಸೇರ್ಪಡೆಗೊಳಿಸುವದಿಲ್ಲ ಮತ್ತು ತಕ್ಷಣವೇ ತಾನು ಸಾರಿದ ಸುವಾರ್ತೆಗಿಂತ ಬೇರೆಯಾದ ಸುವಾರ್ತೆಯನ್ನು ಸಾರುವವರನ್ನು ಕಠಿಣವಾಗಿ ಗದರಿಸುತ್ತಾನೆ (1:6–10). ಈ ವಿಧದಲ್ಲಿ, ಆತನು ತನ್ನ ಅಪೊಸ್ತಲತ್ವ ಹಾಗೂ ತನಗೆ ಪವಿತ್ರಾತ್ಮನು ಪ್ರಕಟಗೊಳಿಸಿದ್ದ ಸತ್ಯ ಸುವಾರ್ತೆಯ ಕುರಿತು ವ್ಯಾಪಕವಾದ ಪ್ರತಿವಾದವನ್ನು ಮುಂದಿಡುತ್ತಾನೆ (1:11–24).

### ಆರಂಭಿಕ ವಂದನೆಗಳು (1:1-5)

**[1]ಮನುಷ್ಯರ ಕಡೆಯಿಂದಾಗಲಿ ಮನುಷ್ಯನ ಮುಖಾಂತರದಿಂದಾಗಲಿ ಅಪೊಸ್ತಲನಾಗಿರದೆ
ಯೇಸು ಕ್ರಿಸ್ತನ ಮುಖಾಂತರವೂ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ತಂದೆಯಾದ
ದೇವರಿಂದಲೂ ಅಪೊಸ್ತಲೋದ್ಯೋಗವನ್ನು ಹೊಂದಿದ ಪೌಲನೆಂಬ ನಾನೂ [2]ನನ್ನ
ಜೊತೆಯಲ್ಲಿರುವ ಎಲ್ಲಾ ಸಹೋದರರೂ ಗಲಾತ್ಯದಲ್ಲಿರುವ ಸಭೆಗಳಿಗೆ ಬರೆಯುವದೇನಂದರೆ -
[3]ತಂದೆಯಾದ ದೇವರಿಂದಲೂ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ
ಶಾಂತಿಯೂ ಆಗಲಿ. [4]ಈತನು ನಮ್ಮನ್ನು ಕೆಟ್ಟದ್ದಾಗಿರುವ ಈಗಿನ ದುಷ್ಟಯುಗದೊಳಗಿಂದ
ಬಿಡಿಸಬೇಕೆಂದು ನಮ್ಮ ತಂದೆಯಾದ ದೇವರ ಚಿತ್ತಕ್ಕೆ ಅನುಸಾರವಾಗಿ ನಮ್ಮ ಪಾಪಗಳ
ದೆಸೆಯಿಂದ ತನ್ನನ್ನು ಮರಣಕ್ಕೆ ಒಪ್ಪಿಸಿದನು. [5]ದೇವರಿಗೆ ಯುಗಯುಗಾಂತರಗಳಲ್ಲಿಯೂ
ಸ್ತೋತ್ರ. ಆಮೆನ್.**

**ವಚನ 1.** ಪೌಲನು ತನ್ನ ವಿಶಿಷ್ಟವಾದ ಪೌಲನ ಶೈಲಿಯಲ್ಲೇ ಪ್ರಾರಂಭಗೊಳಿಸಿ, ತನ್ನನ್ನು **ಅಪೊಸ್ತಲೋದ್ಯೋಗವನ್ನು ಹೊಂದಿದ ಪೌಲ** ಎಂದು ಪರಿಚಯಿಸಿಕೊಳ್ಳುತ್ತಾನೆ (ನೋಡಿರಿ ರೋಮಾ 1:1; 1 ಕೊರಿಂಥ 1:1; 2 ಕೊರಿಂಥ 1:1; ಎಫೆಸ 1:1; ಕೊಲೊಸ್ಸೆ 1:1; 1 ತಿಮೊಥೆ 1:1; 2 ತಿಮೊಥೆ 1:1; ತೀತನಿಗೆ 1:1). ಈ ವರ್ಣನೆಯು ಪರಿಸ್ಥಿತಿಗೆ ಸಮರ್ಪಕವಾಗಿತ್ತು, ಯಾಕೆಂದರೆ ಗಲಾತ್ಯದ ಸಭೆಗಳಲ್ಲಿನ ಕೆಲವರು ಪೌಲನ ಅಪೊಸ್ತಲತ್ವದ ಕುರಿತು ಪ್ರಶ್ನೆಯನ್ನು ಎತ್ತಿದ್ದರು – ಅದೇ ರೀತಿಯಲ್ಲಿಯೇ ಕೊರಿಂಥದಲ್ಲಿ ಇನ್ನು ಕೆಲವರು ಎಬ್ಬಿಸಿದ್ದರು (1 ಕೊರಿಂಥ 9; 2 ಕೊರಿಂಥ

10-13). ಪೌಲನಿಗೆ ತನ್ನ ಅಪೊಸ್ತಲನದ ಕುರಿತು ಸಂದೇಹ ಉದ್ಭವವಾಗುವ ಸಾಧ್ಯತೆಯಿರುತ್ತದೆಂಬುದು ತಿಳಿದಿತ್ತು ಯಾಕೆಂದರೆ ಕರ್ತನು ಭೂಲೋಕದಲ್ಲಿ ಸೇವೆ ಮಾಡಿದ್ದ ವೇಳೆ ಪೌಲನು ಆತನೊಂದಿಗೆ ವೈಯಕ್ತಿಕವಾಗಿ ತಿರುಗಾಡಿರಲಿಲ್ಲ. ಹೇಗೂ, "ಕಟ್ಟಕಡೆಗೆ ದಿನತುಂಬದೆ ಹುಟ್ಟಿದವನಂತಿರುವ" (1 ಕೊರಿಂಥ 15:8) ಆತನು, ದಮಸ್ಕಕ್ಕೆ ಹೋಗುವ ಮಾರ್ಗದಲ್ಲಿ ಕ್ರಿಸ್ತನ ಮಹಿಮೆಕರವಾದ ಪ್ರತ್ಯಕ್ಷತೆಯನ್ನು ಅನುಭವ ಮಾಡಿದ್ದನು (ಅಪೊಸ್ತಲರ ಕೃತ್ಯಗಳು 19:1-19; 22:6-16; 26:12-18).[1] ಆತನು ಎಲ್ಲಾ ಜನರಿಗೂ, ವಿಶೇಷವಾಗಿ ಅನ್ಯಜನರಿಗೆ ತಾನು ಕಂಡು ಕೇಳಿದ್ದರ ವಿಷಯದಲ್ಲಿ ಸಾಕ್ಷಿಯಾಗಿರುವದಕ್ಕಾಗಿ ಕರೆಯಲ್ಪಟ್ಟಿದ್ದೇನೆಂಬುದು ಚೆನ್ನಾಗಿ ಬಲ್ಲವನಾಗಿದ್ದನು.

ಪೌಲನು ಒಬ್ಬ ಪ್ರಮಾಣಪೂರಿತ "ಅಪೊಸ್ತಲ," ಒಬ್ಬ ದೈವಿಕವಾಗಿ ಆದೇಶಿಸಲ್ಪಟ್ಟ ಯೇಸು ಕ್ರಿಸ್ತನ ನಿಯೋಗಿ ಆಗಿದ್ದನು (ನೋಡಿರಿ 1:11, 12, 15-17). ಆತನು, ಬೇರೆ ಅಪೊಸ್ತಲರ ಹಾಗೆಯೇ, ಈ ಆದೇಶವನ್ನು "ಪರಲೋಕದಲ್ಲಿಯೂ ಭೂಲೋಕದಲ್ಲಿ ಎಲ್ಲಾ ಅಧಿಕಾರ . . ." (ಮತ್ತಾಯ 28:18) ಯೇಸುವಿನಿಂದಲೇ ಪಡೆದುಕೊಂಡಿದ್ದನು. ಆತನು, ಉಳಿದವರಂತೆಯೇ, ಪವಿತ್ರಾತ್ಮನಿಂದ ಪ್ರೇರಿತನೂ ಬಲಗೊಳಿಸಲ್ಪಟ್ಟವನೂ ಆಗಿದ್ದನು. ಖಂಡಿತವಾಗಿಯೂ, ಆತನು ಕ್ರಿಸ್ತನ "ರಾಯಭಾರಿಗಳಲ್ಲಿ" ಒಬ್ಬನೆಂದು ಎಣಿಸಲ್ಪಟ್ಟಿದ್ದನು, ಅವರಿಗೆ "ಸಮಾಧಾನ ವಿಷಯವಾದ ಸೇವೆ" ಕೊಡಲ್ಪಟ್ಟಿತ್ತು (2 ಕೊರಿಂಥ 5:18-20).

"ಅಪೊಸ್ತಲೋದ್ಯೋಗವನ್ನು ಹೊಂದಿದ ಪೌಲನೆಂಬ ನಾನು" ಎಂಬ ಆರಂಭಿಕ ಪದಗುಚ್ಛದ ಬಳಿಕ, ಈ ಪ್ರಕ್ಷೇಪ ಕಲಮು ಬರುತ್ತದೆ: **ಮನುಷ್ಯರ ಕಡೆಯಿಂದಾಗಲಿ ಮನುಷ್ಯನ ಮುಖಾಂತರದಿಂದಾಗಲಿ ಅಪೊಸ್ತಲನಾಗಿರದೆ ಯೇಸು ಕ್ರಿಸ್ತನ ಮುಖಾಂತರವೂ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ತಂದೆಯಾದ ದೇವರಿಂದಲೂ.** ಬಹಳ ಒತ್ತು ಕೊಡುವವನಾಗಿ, ಆತನು ಅಪೊಸ್ತಲನಾಗಿ ಕರೆಯಲ್ಪಟ್ಟಿದ್ದು ಯಾವದೇ ವಿಧದಲ್ಲಿಯೂ ಮನುಷ್ಯ ಸಂಕಲ್ಪದ ಮೇಲೆ ಆಧಾರವಾಗಿರುವೇ ಇಲ್ಲ ಎಂಬುದಾಗಿ ಖಡಾಖಂಡಿತವಾಗಿ ಹೇಳಿದನು. ಸಕಾರಾತ್ಮಕ ಪರ್ಯಾಯವು ಏನೆಂದರೆ ಆತನ ಕರೆಯುವಿಕೆಯು ದೇವತ್ವದಿಂದಲೇ ಉಗಮವಾಗಿತ್ತು ಎಂಬುದೆ; ಆತನು ಒಬ್ಬ ಅಪೊಸ್ತಲನಾಗಿರಬೇಕೆಂದು ಯೇಸು ಕ್ರಿಸ್ತನ ಕರೆ ಹಾಗೂ ತಂದೆಯಾದ ದೇವರ ಚಿತ್ತದಿಂದ ಆದೇಶಿಸಲ್ಪಟ್ಟಿದ್ದನು.

ದಮಸ್ಕರ ಮಾರ್ಗದಲ್ಲಿ ಕರ್ತನನ್ನು ನೋಡಿದ ಬಳಿಕ, ಪೌಲನಿಗೆ (ಸೌಲನು) ಪಟ್ಟಣದೊಳಗೆ ಹೋಗಬೇಕೆಂದು ಮತ್ತು ಆತನು ಏನು ಮಾಡಬೇಕೆಂಬುದರ ಕುರಿತು ಉಪದೇಶಿಸಲಾಗುವದು ಎಂದು ನಿರ್ದೇಶಿಸಲ್ಪಟ್ಟನು ಎಂಬುದು ಸತ್ಯವೇ ಆಗಿರುತ್ತದೆ (ಅಪೊಸ್ತಲರ ಕೃತ್ಯಗಳು 9:3-6). ಹಾಗಿದ್ದರೂ, ಆತನಿಗೆ ಈ ಅಪ್ಪಣೆಗಳನ್ನು ಕೊಡುವದಕ್ಕಾಗಿ ಬಳಸಿಕೊಳ್ಳಲ್ಪಟ್ಟ ಮಾನವ ಸಾಧನವಾದ ಅನನೀಯನು, ಆರಂಭದಲ್ಲಿ ಈ ಪಾತ್ರವನ್ನು ನಿರ್ವಹಿಸುವದಕ್ಕೆ ಎಷ್ಟೊಂದು ಮನಸ್ಸಿಲ್ಲದವನಾಗಿದ್ದನೆಂದರೆ ಆತನು ಏನು ಮಾಡತಕ್ಕದ್ದು ಎಂಬ ವಿಷಯದಲ್ಲಿ ಕರ್ತನೊಂದಿಗೆ ವಾಗ್ವಾದ ಮಾಡಿದನು (ಅಪೊಸ್ತಲರ ಕೃತ್ಯಗಳು 9:10-14). ನಿರ್ಧರಿಸಲ್ಪಟ್ಟಿರುವ ಪ್ರಕಾರ ಈ ಕ್ರೈಸ್ತರ ಅಪಾಯಕಾರಿ ಹಿಂಸಕನ ಮುಂದೆ ಹೋಗುವದು ಅನನೀಯನ ಇಷ್ಟವಾಗಿರಲಿಲ್ಲ. ಹೇಗೂ, ಇದು ದೇವರ ಯೋಜನೆಗೆ ಅನುಗುಣವಾಗಿರುತ್ತದೆಂಬುದು ಆತನಿಗೆ ಸ್ಪಷ್ಟವಾದಾಗ, ಅನನೀಯನು ಕರ್ತನ ಚಿತ್ತಕ್ಕೆ ಅಧೀನಪಡಿಸಿಕೊಂಡನು ಮತ್ತು ಪೌಲನನ್ನು ದೀಕ್ಷಾಸ್ನಾನ ನೀರಿನ ಬಳಿಗೆ ನಡಿಸಿದನು (ಅಪೊಸ್ತಲರ ಕೃತ್ಯಗಳು 22:12-16). ಆ ಸಂದರ್ಭದಲ್ಲಿ, ಅನನೀಯನು ಹೀಗೆ ಹೇಳಿದನು, "ನಮ್ಮ ಪಿತೃಗಳ ದೇವರು . . . ನಿನ್ನನ್ನು ನೇಮಿಸಿದ್ದಾನೆ" (ಅಪೊಸ್ತಲರ ಕೃತ್ಯಗಳು 22:14;

ನೋಡಿರಿ 1 ಕೊರಿಂಥ 1:1; 2 ಕೊರಿಂಥ 1:1; ಗಲಾತ್ಯ 1:15-17).

ಪೌಲನು "ತಂದೆಯಾದ ದೇವರನ್ನು" (ಯೇಸು ಕ್ರಿಸ್ತನನ್ನು) **ಸತ್ತವರೊಳಗಿಂದ ಎಬ್ಬಿಸಿದ**ವನು ಎಂದು ಹೇಳುತ್ತಾನೆ. ಕ್ರೈಸ್ತ ಸಂದೇಶಕ್ಕೆ ಪುನರುತ್ಥಾನಕ್ಕಿಂತಲೂ ಸಾರಭೂತವಾದದ್ದು ಬೇರೆ ಇನ್ನಾವದಿರುತ್ತದೆ? ಯೇಸುವು ಎಲ್ಲಾ ಮಾನವ ಚರಿತ್ರೆಯಲ್ಲಿಯೇ ನಿರ್ಣಾಯಕವಾದ ಈ ಘಟನೆಯ ಕುರಿತಾಗಿ ತನ್ನ ಶಿಷ್ಯರಿಗೆ ಮುಂತಿಳಿಸುತ್ತಲೇ ಬಂದಾಗ್ಯೂ (ಮಾರ್ಕ 8:31; 9:9, 31; 10:34), ಅವರಿಗೆ ಪಂಚಾಶತ್ತಮ ದಿನದಂದು ಪವಿತ್ರಾತ್ಮನು ಅನುಗ್ರಹಿಸಲ್ಪಡುವ ತನಕವೂ ಆತನು ಹೇಳುತ್ತಿರುವ ಮಾತಿನ ಅರ್ಥವೇನೆಂಬುದು ನಿಜವಾಗಿಯೂ ಅರ್ಥವೇ ಆಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 2:22-24, 29-33; ನೋಡಿರಿ ಯೋಹಾನ 7:39; 12:16; 14:26). ಯೇಸುವಿನ ಪುನರುತ್ಥಾನದ ವಿಷಯದಲ್ಲಿ ಸಾಕ್ಷಿಗಳಾಗಿರುವದು ಖಂಡಿತವಾಗಿಯೂ ಅಪೊಸ್ತಲರಗಿದ್ದ ಒಂದು ಪ್ರಮುಖ (ಅದೊಂದೇ ಪ್ರಮುಖ ಅಲ್ಲದಿದ್ದರೂ) ಪಾತ್ರವಾಗಿತ್ತು (ಅಪೊಸ್ತಲರ ಕೃತ್ಯಗಳು 1:8, 21-26; 2:22-24, 29-33; 3:14, 15; 5:30-32; 10:39-43).

ಪೌಲನ ಪತ್ರಿಕೆಗಳಲ್ಲಿ, ಯೇಸುವು ದೇವಕುಮಾರನು ಎಂಬುದಕ್ಕೆ ಆತನ ಪುನರುತ್ಥಾನವು ಒಂದು ಪ್ರಶ್ನಾತೀತವಾದ ಪುರಾವೆಯಾಗಿರುತ್ತದೆ (ರೋಮಾ 1:4; ಕೊಲೊಸ್ಸೆ 1:18). ಅಷ್ಟುಮಾತ್ರವಲ್ಲದೆ, ಕ್ರೈಸ್ತರು ಆತನ ಸಂಗಡ ಎಬ್ಬಿಸಲ್ಪಡುವರು ಎಂಬುದಕ್ಕೆ ಅದು ಖಾತ್ರಿಯಾಗಿರುತ್ತದೆ (ರೋಮಾ 8:11; 1 ಕೊರಿಂಥ 15:21-24; 1 ಥೆಸಲೋನಿಕ 4:13-18). ಪೌಲನಿಗಾದರೋ, "ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನೇ" ಸಂದೇಶವಾಗಿದ್ದನು - "ದೇವರ ಶಕ್ತಿಯೂ ದೇವರ ಜ್ಞಾನವೂ" ಆಗಿದ್ದನು (1 ಕೊರಿಂಥ 1:23, 24). ಆತನು ಕೊರಿಂಥದವರಿಗೆ ಭೇಟಿ ಕೊಟ್ಟ ಆರಂಭದಲ್ಲಿ ತಾನು ಒಂದೇ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು ಎಂಬುದನ್ನು ಅವರಿಗೆ ತಿಳಿಸಿದನು: "ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು" (1 ಕೊರಿಂಥ 2:2). ಹೇಗೂ, ಅಪೊಸ್ತಲನ ಸಂದೇಶವು ಶಿಲುಬೆಯಲ್ಲಿಯೇ ಅಂತ್ಯಗೊಳ್ಳಲಿಲ್ಲ. ಆತನು ರೋಮಾಪುರದಲ್ಲಿರುವ ಕ್ರೈಸ್ತರಿಗೆ ರಕ್ಷಣೆಯು ಪುನರುತ್ಥಾನದ ಮೇಲೆ ಇಡುವ ನಂಬಿಕೆಯನ್ನು ಅವಲಂಭಿಸಿರುತ್ತದೆಂದು ಜ್ಞಾಪಿಸಿದನು. ಆತನು ಹೀಗೆ ಬರೆದನು, ". . . ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ" (ರೋಮಾ 10:9). ತಾನು ಸಲುಹಿದ ಯುವ ತಿಮೊಥೆಯನಿಗೆ ನುಡಿದ ಅಂತಿಮ ಮಾತುಗಳಲ್ಲಿ, ಆತನಿಗೆ ಬುದ್ಧಿ ಹೇಳುವದನ್ನು ಅತ್ಯಾವಶ್ಯಕವೆಂದು ಪೌಲನು ಪರಿಗಣಿಸಿದನು: "ಸತ್ತವರೊಳಗಿಂದ ಎಬ್ಬಿಸಲ್ಪಟ್ಟವನೂ ದಾವೀದನ ವಂಶದವನೂ ಆಗಿರುವ ಯೇಸು ಕ್ರಿಸ್ತನನ್ನು ಜ್ಞಾಪಕಮಾಡಿಕೋ; ಇದೇ ನಾನು ಸಾರುವ ಸುವಾರ್ತೆ. ಇದರಲ್ಲಿ ನಾನು ಕಷ್ಟವನ್ನನುಭವಿಸಿ ದುಷ್ಕರ್ಮಿಯಂತೆ ಸಂಕೋಲೆಯಿಂದ ಕಟ್ಟಲ್ಪಟ್ಟವನಾಗಿದ್ದೇನೆ" (2 ತಿಮೊಥೆ 2:8, 9a).

**ವಚನ 2a.** ಪೌಲನು ವಂದನೆಗಳೊಳಗೆ ತನ್ನ ಜೊತೆಯಲ್ಲಿದ್ದ **ಎಲ್ಲಾ ಸಹೋದರರ**ನ್ನು ಸೇರಿಸಿದನು. "ಸಹೋದರರು" (ἀδελφοί, *adelphoi*), ಅಥವಾ "ಅಣ್ಣತಮ್ಮಂದಿರು" (NIV), ಎಂಬುದು ಹೊಸ ಒಡಂಬಡಿಕೆಯಲ್ಲಿ ವಿವಿಧ ರೀತಿಗಳಲ್ಲಿ ಬಳಸಲ್ಪಟ್ಟಿರುವ ಪದವಾಗಿದೆ. (1) ಅದು ಒಂದು ಕುಟುಂಬದಲ್ಲಿ ಒಡಹುಟ್ಟಿದ ಗಂಡು ಮಗನನ್ನು, ಉದಾಹರಣೆಗೆ ಯೇಸುವಿನ ಸಹೋದರರನ್ನು ಸೂಚಿಸಬಹುದು (ಮತ್ತಾಯ 13:55). (2) ಕೆಲವು ಸಾರಿ ಈ ಪದವು ಯೆಹೂದಿ ಸಹೋದರರನ್ನು, ಅಂದರೆ ಹುದುವಾದ ಜನಾಂಗೀಯ ಸಂತಾನದಿಂದ ಬಂದಂಥ

ಜೊತೆಯ ಇಸ್ರಾಯೇಲ್ಯರನ್ನು ಸೂಚಿಸಬಹುದಾಗಿದೆ (ರೋಮಾ 9:1-5).[2] (3) "ಸಹೋದರರು" ಎಂಬುದು ಜೊತೆಯ ಕ್ರೈಸ್ತರನ್ನು, ಅವರು ಯೆಹೂದ್ಯರಾಗಿರಲಿ, ಅಥವಾ ಅನ್ಯಜನರಾಗಲಿ, ಗಂಡಾಗಲಿ ಅಥವಾ ಹೆಣ್ಣಾಗಲಿ ಎಲ್ಲಾ ಕ್ರೈಸ್ತರನ್ನು ಸೂಚಿಸಬಹುದಾಗಿದೆ (ನೋಡಿರಿ 3:26-29; ಎಫೆಸ 2:11-22). ಈ ಕೊನೆಯ ಅರ್ಥವು ಹೊಸ ಒಡಂಬಡಿಕೆಯಲ್ಲಿ ಅತ್ಯಂಥ ಸರ್ವಸಾಮಾನ್ಯವಾಗಿರುತ್ತದೆ.

ಪೌಲನು ಈ ಪತ್ರಿಕೆಯನ್ನು ಬರೆದ ವೇಳೆ ಅತನ ಜೊತೆಯಲ್ಲಿದ್ದ ಸಹೋದರರ ಗುರುತು ಸ್ಪಷ್ಟವಾಗಿರುವದಿಲ್ಲ, ಯಾಕೆಂದರೆ ಪತ್ರಿಕೆಯು ಬರೆಯಲ್ಪಟ್ಟ ದಿನಾಂಕ ಮತ್ತು ಸ್ಥಳಗಳೆರಡನ್ನೂ ನಿಶ್ಚಯವಾಗಿ ಸಾಭಿತುಪಡಿಸುವದಕ್ಕೆ ಸಾಧ್ಯವಿರುವದಿಲ್ಲ. ಪತ್ರಿಕೆಯು ಮೊದಲನೆಯ ಸುವಾರ್ತಾ ಪ್ರಯಾಣದ ಬಳಿಕ, ಸುಮಾರು ಕ್ರಿ.ಶ. 48-49 ವೇಳೆ ಬರೆಯಲ್ಪಟ್ಟಿದ್ದರೆ, ಪೌಲನ ಸಂಗಡ ಇದ್ದ ಸಹೋದರರಲ್ಲಿ ಬಹುಶಃ ಬಾರ್ನಬ ಹಾಗೂ ಅಂತಿಯೋಕ್ಯದ ಸಭೆಯಲ್ಲಿದ್ದ ಬೇರೆ ಕೆಲವರು ಸೇರಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 14:26-28).

ಪೌಲನಲ್ಲಿ ಅನೇಕ ಮೆಚ್ಚತಕ್ಕ ಪ್ರತಿಭೆಗಳೊಳಗೆ, ಆತನಿಗೆ ತನ್ನೊಂದಿಗೆ ಸುವಾರ್ತೆಯನ್ನು ಹರಡಿಸುವದರಲ್ಲಿ ಸೇವೆಯನ್ನು ಮಾಡಲು ಮನಸ್ಸುಳ್ಳವರಾಗಿದ್ದ ಹಲವಾರು ಪುರುಷರನ್ನು ಮತ್ತು ಕೆಲವು ಸ್ತ್ರೀಯರನ್ನು ತನ್ನ ಸುತ್ತಲು ಕೂಡಿಸಿಕೊಳ್ಳುವ ಸಾಮರ್ಥ್ಯವು ಇತ್ತು.[3] ಕೆಲವರು ಆತನೊಂದಿಗೆ ವಾಕ್ಯ ಸಾರುವ ಸೇವೆಯಲ್ಲಿ ಪಾಲುಗಾರರಾಗಿದ್ದರು (ಉದಾಹರಣೆಗೆ, ಬಾರ್ನಬ ಮತ್ತು ಸೀಲ). ಇನ್ನು ಕೆಲವರು ಆತನು ನಿರ್ದಿಷ್ಟ ಸ್ಥಳವನ್ನು ಬಿಟ್ಟು ಮುಂದಕ್ಕೆ ಹೋಗಬೇಕಾದ ಸಂದರ್ಭ ಬಂದರೆ ಆತನು ಹಿಂದಕ್ಕೆ ಬಿಟ್ಟು ಹೋಗುವ ಕೆಲಸವನ್ನು ಮುಂದುವರೆಸುವದಕ್ಕೆ ಮನಸ್ಸುಳ್ಳವರಾಗಿದ್ದರು (ಉದಾಹರಣೆಗೆ, ಲೂಕನು ಫಿಲಿಪ್ಪಿಯಲ್ಲಿ ಉಳಿದುಕೊಂಡನು[4]). ಕೆಲವರು ಆತನೊಂದಿಗೆ ಸಹಾಯಕರಾಗಿ ಸೇವೆ ಮಾಡಿದರು (ಅಪೊಸ್ತಲರ ಕೃತ್ಯಗಳು 13:5; 24:23; 2 ತಿಮೊಥೆ 4:11). ಇನ್ನೂ ಸ್ವಲ್ಪ ಜನರು ಸಂದೇಶಕರಾಗಿ ಅಥವಾ ಓಲೆಕಾರರಾಗಿ ಕೆಲಸ ಮಾಡಿದರೆ (ಎಫೆಸ 6:21; ಕೊಲೊಸ್ಸೆ 4:7), ಬೇರೆ ಕೆಲವರು ಯೂದಾಯದಲ್ಲಿ ಪೌಲನು ಬಡವರಿಗೋಸ್ಕರ ಸಂಗ್ರಹಿಸುತ್ತಿದ್ದ ಕಾಣಿಕೆಯನ್ನು ತೆಗೆದುಕೊಂಡು ಪ್ರಯಾಣಿಸಿದರು (ಅಪೊಸ್ತಲರ ಕೃತ್ಯಗಳು 20:4; 2 ಕೊರಿಂಥ 8:16-24). "ಪ್ರಿಯ ವೈದ್ಯನಾದ" ಲೂಕನು, ಪೌಲನ ಪ್ರಯಾಸಕರ ಸುವಾರ್ತಾ ಪ್ರಯಾಣಗಳ ವೇಳೆಯಲ್ಲಿಯೂ ಆತನು ವೃದ್ಧನಾಗಿ ಕಠಿಣ ಸೆರೆವಾಸಗಳನ್ನು ಅನುಭವಿಸುತ್ತಿರುವಾಗಲೂ ಆತನಿಗೆ ವೈಯಕ್ತಿಕ ವೈದ್ಯನಾಗಿ ಸೇವೆಯನ್ನು ಮಾಡಿರುವ ಸಾಧ್ಯತೆ ಸಹ ಇರುತ್ತದೆ (ಕೊಲೊಸ್ಸೆ 4:14; ಫಿಲೆಮೋನ 24; 2 ತಿಮೊಥೆ 4:11).

**ವಚನ 2b.** ಪೌಲನು ತನ್ನ ಪತ್ರಿಕೆಯನ್ನು **ಗಲಾತ್ಯದಲ್ಲಿರುವ ಸಭೆಗಳಿಗೆ** ಉದ್ದೇಶಿಸಿ ಬರೆದನು. ಈ ಸಭೆಗಳು ಯಾವ ಸ್ಥಳದಲ್ಲಿದ್ದವು ಎಂಬ ವಿಷಯವಾಗಿ ಎರಡು ಮೂಲಭೂತ ಪ್ರಶ್ನೆಗಳು ಉದ್ಭವವಾಗಿರುತ್ತವೆ. "ಉತ್ತರ ಗಲಾತ್ಯ ಊಹೆ"ಯು ಉತ್ತರ-ಕೇಂದ್ರಿಯ ಆಸ್ಯ ಸೀಮೆಯಲ್ಲಿನ ಮಿತವಾದ ಕ್ಷೇತ್ರದಲ್ಲಿದ್ದ ಜನಾಂಗೀಯ ಗಲಾತ್ಯ ಪಟ್ಟಣಗಳ ಕಡೆಗೆ ಬೆರಳು ತೋರಿಸುತ್ತದೆ. ಈ ಕ್ಷೇತ್ರಗಳಲ್ಲಿ ರೋಮನ್ ಪ್ರಾಂತ್ಯವಾದ ಗೌಲ (ಆಧುನಿಕ ಫ್ರಾನ್ಸ್ ದೇಶ) ದಿಂದ ವಲಸೆ ಬಂದಿದ್ದವರು ನೆಲೆಸಿದ್ದರು. ಹೀಗಿರುವದಾದಲ್ಲಿ, ಈ ಸಭೆಗಳು Pessinus, Tavium, ಮತ್ತು Ancyra (ಆಧುನಿಕ ಅಂಕಾರಾ) ಪಟ್ಟಣಗಳಲ್ಲಿ ಇದ್ದಿರಬಹುದಾಗಿದೆ. ಇನ್ನೊಂದು ಕಡೆಯಲ್ಲಿ, "ದಕ್ಷಿಣ ಗಲಾತ್ಯ ಊಹೆ"ಯು ಅಂತಿಯೋಕ್ಯ, ಇಕೋನ್ಯ, ಲುಸ್ತ್ರ ಹಾಗೂ ದೆರ್ಬೆ ಪಟ್ಟಣಗಳ ಕಡೆಗೆ ಬೆರಳು ತೋರಿಸುತ್ತದೆ. ಈ ಪಟ್ಟಣಗಳಿಗೆ ಮೊದಲು ಪೌಲ ಹಾಗೂ ಆತನ ಸಂಗಡಿಗರು ಆರಂಭಿಕ ಸುವಾರ್ತಾ ಪ್ರಯಾಣ ಮಾಡಿದ ಸಂದರ್ಭದಲ್ಲಿ ಸುವಾರ್ತೆಯು ಸಾರಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 13; 14). "ದಕ್ಷಿಣ ಗಲಾತ್ಯ ಊಹೆ"ಗೆ ಪುರಾವೆಯು

ಬಹಳ ಬಲವಾಗಿದೆ, ಯಾಕೆಂದರೆ ಉತ್ತರ ದಿಕ್ಕಿನಲ್ಲಿರುವ ಪಟ್ಟಣಗಳ ಹೆಸರುಗಳು ಬೈಬಲ್ ವಾಕ್ಯದಲ್ಲಿ ಪ್ರಸ್ತಾಪಿಸಲ್ಪಟ್ಟಿರುವದೇ ಇಲ್ಲ. ಪೌಲನು ಗಲಾತ್ಯದ ಉತ್ತರ ಭಾಗದಲ್ಲಿ ಸುವಾರ್ತೆಯನ್ನು ಸಾರಿದ್ದರೆ, ಈ ವಾಸ್ತವಾಂಶವು ಆತನ ಬರಹಗಳಲ್ಲಿ ಮತ್ತು/ಅಥವಾ ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪೌಲನ ಪ್ರಯಾಣಗಳ ಕುರಿತು ಲೂಕನು ಬರೆಯುವಾಗ ಪ್ರಸ್ತಾಪಿಸಲ್ಪಟ್ಟಿರುವ ಸಾಧ್ಯತೆಯಿರುತ್ತಿತ್ತು. (ಹೆಚ್ಚಿನ ಮಾಹಿತಿಗಾಗಿ, ನೋಡಿರಿ *ಪರಿಚಯ: ಪತ್ರಿಕೆಯನ್ನು ಸ್ವೀಕರಿಸಿದವರು,* ಪುಟಗಳು 1-6.)

**ವಚನ 3.** ಪೌಲನು ಗಲಾತ್ಯದಲ್ಲಿರುವ ಸಭೆಗಳನ್ನು ಉದ್ದೇಶಿಸಿ ಬರೆಯುತ್ತಾ, ಈ ವಂದನೆಗಳನ್ನು ಆತನು ಅವರಿಗೆ ತಿಳಿಸಿದನು: **ತಂದೆಯಾದ ದೇವರಿಂದಲೂ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ.** ಈ ಮಾತುಗಳು ಪೌಲನು ತನ್ನ ಪತ್ರಿಕೆಗಳಲ್ಲಿ ರೂಢಿಯಾಗಿ ಬಳಸುವ ವಂದನೆಯಾಗಿರುತ್ತವೆ (ರೋಮಾ 1:7; 1 ಕೊರಿಂಥ 1:3; 2 ಕೊರಿಂಥ 1:2; ಎಫೆಸ 1:2; ಫಿಲಿಪ್ಪಿ 1:2; 2 ಥೆಸಲೋನಿಕ 1:2; ಫಿಲೆಮೋನ 3).

ಪೌಲನು ಬಳಸಿರುವ ಪ್ರಕಾರ, "ಕೃಪೆ" ಎಂಬುದು χαίρειν (*chairein*) ಎಂಬ ಗ್ರೀಕ್ ಪದದ ಸಾಮಾನ್ಯ ಕ್ರೈಸ್ತ ಬಳಕೆಯಾಗಿತ್ತು, ಅದರ ಅಕ್ಷರಶಃ ಅರ್ಥವು "ಸಂತೋಷಿಸಿರಿ" ಎಂದಾಗಿರುತ್ತದೆ. ಇದು ಅನ್ಯಜನರೊಳಗೆ ವಂದನೆಯನ್ನು ತಿಳಿಸುವಾಗ ಸಂಪ್ರದಾಯಿಕವಾಗಿ ಬಳಸಲ್ಪಡುವಾಗ, ಅದರ ಅರ್ಥವು "ವಂದನೆಗಳು" ಎಂದಷ್ಟೇ ಆಗಿರುತ್ತಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 15:23; 23:26; ಯಾಕೋಬ 1:1). "ಕೃಪೆ" (χάρις, *charis*) ಎಂಬ ಪದವು, ಇನ್ನೊಂದು ಕಡೆಯಲ್ಲಿ ಮಹತ್ವಪೂರ್ಣತೆಯಿಂದ ತುಂಬಿರುತ್ತದೆ. ಅದು ದೇವರ ಪ್ರೀತಿಯನ್ನು ತಿಳಿಸುತ್ತದೆ, ಅದು ಮಾತ್ರವೇ ಮಾನವರನ್ನು ನಾಶನದಿಂದ ತಪ್ಪಿಸಿ ರಕ್ಷಿಸಬಲ್ಲದು. ಈ ಆದರಣೆಯುಂಟು ಮಾಡುವ ಪದವು ಒಬ್ಬ ಆಲೋಚನೆಗಳನ್ನು ಆತ್ಮೀಕ ಮಂಡಲದ ಮಹಿಮೆಯೊಳಗೆ ಕರೆ ತರುತ್ತದೆ. ಇದು ಕ್ರಿಸ್ತನ ಮೂಲಕವಾಗಿ ಪ್ರಕಟಗೊಂಡಿರುವ ದೇವರ ಮರ್ಮಗಳನ್ನು ನೆನಪಿಗೆ ತರುತ್ತದೆ.

"ಕೃಪೆ" ಎಂಬ ಪದದ ಜೊತೆಗೆ, ಪೌಲನು ಸಂಪ್ರದಾಯಿಕವಾದ ಯೆಹೂದಿ ವಂದನೆಯಾದ "ಶಾಂತಿ," εἰρήνη (*eirēnē*) ಎಂಬದನ್ನು ಸೇರಿಸುತ್ತಾನೆ, ಅದು ಇಬ್ರಿಯ/ಅರಾಮಿಕ್ ಪದವಾದ שָׁלוֹם (*shalom*) ಎಂಬುದನ್ನು ಪ್ರತಿನಿಧಿಸುತ್ತದೆ. ಈ ಎರಡು ವಂದನೆಗಳನ್ನು ಒಟ್ಟುಗೂಡಿಸುವದು "ಪೌಲನ ಬರಹಗಳಲ್ಲಿ ಹಾಗೂ ಪೌಲನ ಬರಹಗಳ ನಂತರದಲ್ಲಿ . . . ಒಂದು ಹೊಸ ಹಾಗೂ ವೈಶಿಷ್ಟ ಬೆಳವಣಿಗೆ"[5] ಎಂದು ಕರೆಯಲ್ಪಟ್ಟಿದೆ. "ಶಾಂತಿ" ಎಂಬುದು ಕೇವಲ ಯೆಹೂದಿ ಸಂಪ್ರದಾಯಿಕ ವಂದನೆ ಆಗಿದೆ, ವಿಶೇಷವಾಗಿ ಈ ಸಮ್ಮಿಲನದಲ್ಲಿ ಹಾಗೂ ಸನ್ನಿವೇಶದಲ್ಲಿ ಬಳಸಲ್ಪಟ್ಟಿದೆ ಎಂದಷ್ಟೇ ಒಬ್ಬನು ಯೋಚಿಸಕೂಡದು. ಪೌಲನ ಪತ್ರಿಕೆಗಳು ಓದಲ್ಪಡುತ್ತಿದ್ದ ವೇಳೆ, ಕ್ರೈಸ್ತರು ಸ್ವಾಭಾವಿಕವಾಗಿಯೇ ಶಾಂತಿ ಎಂಬುದನ್ನು ಕ್ರಿಸ್ತನಲ್ಲಿ ಸಿಕ್ಕುವ ರಕ್ಷಣೆಯ ಮುಖಾಂತರವಾಗಿ ದೇವರೊಂದಿಗೆ ಸಮಾಧಾನಗೊಂಡಿರುವದು ಎಂಬರ್ಥದಲ್ಲಿ ಯೋಚಿಸಿರುತ್ತಿದ್ದರು. ಅಂತೂ, "ಕೃಪೆ" ಮತ್ತು "ಶಾಂತಿ" ವಂದನೆಯು ಅಂತಿಮವಾಗಿ "ತಂದೆಯಾದ ದೇವರಿಂದಲೂ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಲೂ" ಕೊಡಲ್ಪಟ್ಟಿರುತ್ತವಷ್ಟೆ. ಪೌಲನು ಬೇರೊಂದು ಸ್ಥಳದಲ್ಲಿ ಯೆಹೂದ್ಯರು ಹಾಗೂ ಅನ್ಯಜನರ ವಿಷಯವಾಗಿ ಹೀಗೆ ಬರೆದನು:

> ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ. ನಿಮ್ಮನ್ನೂ ನಮ್ಮನ್ನೂ ಒಂದು ಮಾಡಿದವನಾದ ಆತನೇ

> ನಮಗೆ ಸಮಾಧಾನಕರ್ತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದುಹಾಕಿ ಇದ್ದ ದ್ವೇಷವನ್ನು ಮುಗಿಸಿ ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿಹಾಕಿದನು. ಆತನು ಸಮಾಧಾನಮಾಡುವವನಾಗಿ ಉಭಯರನ್ನೂ ತನ್ನಲ್ಲಿ ಒಬ್ಬ ನೂತನಪುರುಷನನ್ನಾಗಿ ನಿರ್ಮಿಸಿದ್ದಾನೆ (ಎಫೆಸ 2:13-15; ನೋಡಿರಿ ಗಲಾತ್ಯ 3:28).

**ವಚನ 4.** ಯೇಸುವನ್ನು **ಈತನು . . . ನಮ್ಮ ತಂದೆಯಾದ ದೇವರ ಚಿತ್ತಕ್ಕೆ ಅನುಸಾರವಾಗಿ ನಮ್ಮ ಪಾಪಗಳ ದೆಸೆಯಿಂದ ತನ್ನನ್ನು ಮರಣಕ್ಕೆ ಒಪ್ಪಿಸಿದನು.** ದೇವರ ಪ್ರೀತಿಯು ಮನುಷ್ಯನಿಗೆ ರಕ್ಷಣೆಯನ್ನುಂಟು ಮಾಡುವದಕ್ಕೋಸ್ಕರ ತನ್ನ ಒಬ್ಬನೇ ಮಗನನ್ನು ಕೊಡುವದರಲ್ಲಿ ವ್ಯಕ್ತಪಡಿಸಲ್ಪಟ್ಟಿರುವಷ್ಟು ಸ್ಪಷ್ಟವಾಗಿ ಬೇರೆ ಇನ್ನಾವದರಲ್ಲಿಯೂ ವ್ಯಕ್ತವಾಗಿರುವದಿಲ್ಲ (ಯೋಹಾನ 3:16; ರೋಮಾ 5:8). ಈ ಪ್ರಸ್ತುತ ಸಂದರ್ಭದಲ್ಲಿ, ಕ್ರಿಸ್ತನ ಪ್ರೀತಿಯು ದೃಶ್ಯದಲ್ಲಿರುತ್ತದೆ, ಆದರೆ ಶಾಸ್ತ್ರಗಳಲ್ಲಿ ತಂದೆಯ ಚಿತ್ತ ಹಾಗೂ ಮಗನ ಮನಃಪೂರ್ವಕತೆಗಳು ಎಷ್ಟೊಂದು ಒಂದಕ್ಕೊಂದು ಹೆಣೆದುಕೊಂಡಿರುತ್ತವೆಂದರೆ ನಿಜವಾದ ವ್ಯತ್ಯಾಸವನ್ನು ಗುರುತಿಸುವದು ಹೆಚ್ಚುಕಡಿಮೆ ಅಸಾಧ್ಯವೇ ಆಗಿರುತ್ತದೆ.

ಯೇಸುವು ದೈವಿಕ ಪ್ರೀತಿಯ ಸರ್ವಶ್ರೇಷ್ಠ ವ್ಯಕ್ತಪಡಿಸುವಿಕೆಯಾಗಿ ಕೊಂಡನಾದರೂ (ನೋಡಿರಿ 1 ಯೋಹಾನ 3:16), ಆತನು ಸನ್ನಿಹಿತವಾಗಿದ್ದ ಮರಣದ ವಿರುದ್ಧ ಬಲವಾಗಿ ಹೋರಾಡಿದನು ಮತ್ತು ಬೇರೊಂದು ದಾರಿ ಇರಬಹುದಲ್ಲಾ ಎಂಬುದಾಗಿ ಪ್ರಾರ್ಥನೆಯಲ್ಲಿ ವೇದನೆಯನ್ನು ಅನುಭವಿಸಿದನು. ಬೇರೆ ಇನ್ನಾವ ದಾರಿಯೂ ಇರಲಿಲ್ಲವಾದ್ದರಿಂದ, ಆತನು ತಂದೆಯ ಚಿತ್ತವನ್ನು ಅಂಗೀಕರಿಸಿಕೊಂಡನು (ಮತ್ತಾಯ 26:36-46; ಲೂಕ 22:39-46). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳಿದನು, "ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು" (ಇಬ್ರಿಯ 5:8). ಆತ್ಮೀಕ ರಂಗದಲ್ಲಿ, ಅದು ವ್ಯಾಪಕವಾಗಿ ಹೆಚ್ಚು ಭಯಂಕರವಾಗಿದ್ದಿರಬಹುದು, ಏನೆಂದರೆ, "ದೇವರ ಪರಿಶುದ್ಧನು" ಇನ್ನೇನು ಮರಣಿಸಲಿದ್ದನು, ಪಾಪದ ಮೈದಾಳಿದವನಾಗಿ ಮತ್ತು ಮಾನವ ಜನಾಂಗದ ಪಾಪಗಳಿಗೋಸ್ಕರ ಭಯಾನಕ ದಂಡನೆಯನ್ನು ಅನುಭವಿಸುವ ಮೂಲಕ ಶಾಪ ಸಹ ಆಗಲಿದ್ದನು (ಮಾರ್ಕ 1:24; 2 ಕೊರಿಂಥ 5:21; ಗಲಾತ್ಯ 3:13).

ಕ್ರಿಸ್ತನ ಯಜ್ಞದ ಅಂತಿಮ ಗುರಿಯು **ನಮ್ಮನ್ನು ಕೆಟ್ಟದ್ದಾಗಿರುವ ಈಗಿನ ದುಷ್ಟಯುಗದೊಳಗಿಂದ ಬಿಡಿಸಬೇಕೆಂದು** ಆಗಿತ್ತು. "ಬಿಡಿಸಬೇಕೆಂದು" (ἐξαιρέω, *exaireō*) ಎಂಬುದು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ವಿವಿಧ ರೂಪಗಳಲ್ಲಿ ಐದು ಸಾರಿ ಕಾಣಿಸಿಕೊಳ್ಳುತ್ತದೆ (ಅಪೊಸ್ತಲರ ಕೃತ್ಯಗಳು 7:10, 34; 12:11; 23:27; 26:17), "ಪ್ರತಿಯೊಂದು ಬಳಕೆಯು ಅಂತಿಮ ಕ್ಷಣದಲ್ಲಿ ಒಬ್ಬರನ್ನು ಕಾಪಾಡುವ ಒಂದು ನಾಟಕೀಯವಾದ ಕ್ರಿಯೆಯನ್ನು ದೃಷ್ಟಾಂತಪಡಿಸುತ್ತದೆ."[6]

"ಈಗಿನ ದುಷ್ಟಯುಗ" ಎಂಬ ಪದಗುಚ್ಛದ ಅರ್ಥವೇನಾಗಿರುತ್ತದೆ? "ಯುಗ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ αἰών (*aiōn*) ಎಂದಾಗಿದೆ, ಅದು ಒಂದು ಕಾಲಾವಧಿಯನ್ನು (ಒಂದು "epoch" ಅಥವಾ "eon") ಅಥವಾ ಭೌತಿಕ ಲೋಕವನ್ನು ಸೂಚಿಸಬಹುದಾಗಿದೆ. ಅದು ಇತಿಹಾಸದಲ್ಲಿನ ನಿರ್ದಿಷ್ಟ ಕಾಲಾವಧಿಯ ವೈಶಿಷ್ಟತೆಗಳನ್ನು ಸೂಚಿಸಬಹುದಾದರೂ, ಅದು ಎಂದಿಗೂ ಅಂಥ ಕಾಲಾವಧಿಯಲ್ಲಿ ವಾಸಿಸಿದ ಜನರನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುವದಿಲ್ಲ.[7] ಈ ಸನ್ನಿವೇಶದಲ್ಲಿ, "ಪೌಲನು [ತಿಳಿಸಿದ] ಈ ಬಿಡಿಸುವಿಕೆಯು ಭೌತಿಕ ಲೋಕದಿಂದ ಬಿಡಿಸುವಿಕೆಯಲ್ಲ ಆದರೆ ಅದರಲ್ಲಿ ದೊರೆತನ ಮಾಡುವ ಕೆಟ್ಟತನದಿಂದಲೇ

ಆಗಿದೆ."[8] ಈ ಭಾವನೆಯು ಯೋಹಾನ 17:15ರಲ್ಲಿ ಯೇಸುವು ಮಾಡಿದ ಪ್ರಾರ್ಥನೆಯೊಂದಿಗೆ ಹೊಂದಿಕೆಯಾಗುತ್ತದೆ: "ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವದಿಲ್ಲ; ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ" (ಅಥವಾ ಸರಳವಾಗಿ ಹೇಳುವದಾದರೆ "ಕೆಟ್ಟತನದಿಂದ"). ಬಿಡುಗಡೆಯು "ಶೋಧನೆ, ಪಾಪ, ಮತ್ತು ಕಾನೂನಾತ್ಮಕ ದಂಡನೆಯ ತೀರ್ಪು ಇವುಗಳಿಂದ."[9]

**ವಚನ 5.** ಪೌಲನು ತನ್ನ ವಂದನೆಯನ್ನು ಒಂದು ಕ್ಲುಪ್ತ ಸ್ತೋತ್ರಾರ್ಪಣೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ, ಅದು ಗಲಾತ್ಯದವರಿಗೆ ಪತ್ರಿಕೆಗೆ ವಿಶಿಷ್ಟವಾಗಿರುತ್ತದೆ. ಆತನು ಹೀಗೆ ಬರೆದನು, **ದೇವರಿಗೆ ಯುಗಯುಗಾಂತರಗಳಲ್ಲಿಯೂ ಸ್ತೋತ್ರ. ಆಮೆನ್.** ಈ ಸ್ತೋತ್ರಾರ್ಪಣೆಯು ಆತನು ಸಂಬೋಧಿಸುತ್ತಿರುವ ಕ್ರೈಸ್ತರಿಗಾಗಿ ರೂಢಿಯಾಗಿ ಕೃತಜ್ಞತಾಸ್ತುತಿಯನ್ನು ಮಾಡುತ್ತಿದ್ದದ್ದಕ್ಕೆ ಪರ್ಯಾಯವಾಗಿ ಬಳಸಲ್ಪಟ್ಟಿರಬಹುದಾಗಿದೆ (ನೋಡಿರಿ ರೋಮಾ 1:8; 1 ಕೊರಿಂಥ 1:4; ಫಿಲಿಪ್ಪಿ 1:3; ಕೊಲೊಸ್ಸೆ 1:3; 1 ಥೆಸಲೋನಿಕ 1:2; 2 ಥೆಸಲೋನಿಕ 1:3; ಫಿಲೆಮೋನ 4). ಸರಳವಾಗಿ ಹೇಳುವದಾದರೆ, ಗಲಾತ್ಯದ ಸಹೋದರರ ವಿಷಯದಲ್ಲಿ ಸ್ತೋತ್ರ ಮಾಡುವಂಥ ವಿಷಯಗಳು ಆತನಿಗೆ ಇಲ್ಲದ ಕಾರಣ, ಆತನು ತನ್ನ ಸ್ತುತಿಗಳನ್ನು ದೇವರಿಗೆ ಸಲ್ಲಿಸಿದನು. ಇನ್ನೊಂದು ಸಾಧ್ಯತೆಯು ಏನೆಂದರೆ ಇದು 1:4ರಲ್ಲಿನ ಸುವಾರ್ತೆಯ ಸಾರಾಂಶದಿಂದ ಪ್ರಚೋದಿಸಲ್ಪಟ್ಟಿರಬಹುದು.

5ನೇ ವಚನದಲ್ಲಿನ "ಆತನಿಗೆ" (ᾧ, *hō*) ಎಂಬುದಕ್ಕೆ ಸಮೀಪದ ಪೂರ್ವಗಾಮಿ ಪದಪುಂಜವೆಂದರೆ 4ನೇ ವಚನದಲ್ಲಿರುವ "ನಮ್ಮ ತಂದೆಯಾದ ದೇವರು" ಎಂಬುದೆ. 5ನೇ ವಚನದಲ್ಲಿನ "ಸ್ತೋತ್ರ" ಎಂಬುದು ತಂದೆಯಾದ ದೇವರಿಗೆ ಸಲ್ಲಿಸಿದ್ದಾಗಿದೆ. "ಆತನಿಗೆ" ಪೂರ್ವಗಾಮಿ ಪದಪುಂಜವು ಏನೇ ಆಗಿದ್ದರೂ, ತಂದೆಯ ಮಹಿಮೆಯು ಮಗನೊಂದಿಗೆ ಹಂಚಿಕೊಂಡದ್ದಾಗಿದೆ. ಯೇಸುವು ನಮ್ಮ ಪಾಪಗಳಿಗಾಗಿ ಶ್ರಮೆಯನ್ನು ಅನುಭವಿಸಿ ಮರಣಿಸಿದನಾದ್ದರಿಂದ, ಆತನು ಈಗ "ಪ್ರಭಾವವನ್ನೂ ಮಾನವನ್ನೂ ಕಿರೀಟವಾಗಿ ಹೊಂದಿರುವ"ನು (ಇಬ್ರಿಯ 2:9). ಯೇಸುವು ಭೂಲೋಕದಲ್ಲಿ ಸೇವೆ ಮಾಡಿದ ಸಂದರ್ಭದಲ್ಲಿ, ಆತನು ಭೂಲೋಕದಲ್ಲಿ ಸಾಧಿಸಬೇಕಾದ ಧ್ಯೇಯವನ್ನು ಅಂಗೀಕರಿಸಿದ ವೇಳೆ ಬಿಟ್ಟು ಕೊಟ್ಟ ಮಹಿಮೆಯನ್ನು ಪುನಃ ಕೊಡಬೇಕೆಂದು ಪ್ರಾರ್ಥಿಸಿದನು: "ಈಗ ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು; ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು" (ಯೋಹಾನ 17:5). ಯೇಸುವು ತನ್ನ ತಂದೆಯೊಂದಿಗೆ "ಲೋಕ ಉಂಟಾಗುವದಕ್ಕೆ ಮುಂಚೆ" ಎಷ್ಟು eons ವರೆಗೆ ಪಾಲು ಹೊಂದಿದ್ದನು?

4ನೇ ವಚನದಲ್ಲಿ "ಈಗಿನ ದುಷ್ಟಯುಗ" ಉಲ್ಲೇಖಿಸಿದ ಬಳಿಕ, ಗ್ರೀಕ್ ಪದವಾದ *aiōn* ("ಯುಗ") ಎಂಬುದು 5ನೇ ವಚನದಲ್ಲಿ ಬಳಸಲ್ಪಟ್ಟಿದೆ, "ಯುಗಯುಗಾಂತರಗಳಲ್ಲಿಯೂ" (εἰς τοὺς αἰῶνας τῶν αἰώνων, *eis tous aiōnas tōn aiōnōn*) ಎಂಬ ಪದವನ್ನು ಒತ್ತಿ ಹೇಳುತ್ತದೆ. ಈ ಪದಗುಚ್ಛವನ್ನು ಅಕ್ಷರಶಃ "ಯುಗಗಳ ಯುಗಗಳಲ್ಲಿಯೂ" ಎಂದು ಅನುವಾದಿಸಬಹುದಾಗಿದೆ, ಇದು "ಭವಿಷ್ಯದ ಅಂತ್ಯವಿಲ್ಲದ ಯುಗಗಳಲ್ಲಿಯೂ" ಎಂಬ ವಿಚಾರವಾಗಿರುತ್ತದೆ. ಗುಣಾತ್ಮಕವಾಗಿ ಹೇಳುವದಾದರೆ, ಇಲ್ಲಿ ವಿಚಾರವು "ಬರಲಿರುವ ಹೋಲಿಸಲಸಾಧ್ಯವಾದ ಮಹಿಮಕರವಾದ ಎಲ್ಲಾ ಯುಗಗಳಲ್ಲಿಯೂ" ಎಂದಾಗಿರುತ್ತದೆ.

# ಬೇರೆ ಸುವಾರ್ತೆಗೆ ಪೌಲನು ವಿರೋಧಿಸಿದ್ದು (1:6-10)

## ಬೇರೆ ಸುವಾರ್ತೆ ಸಾರುವವರನ್ನು ಖಂಡಿಸಿದ್ದು (1:6-9)

**[6]ಕ್ರಿಸ್ತನ ಕೃಪೆಯಿಂದ ನಿಮ್ಮನ್ನು ಕರೆದಾತನನ್ನು ನೀವು ಇಷ್ಟು ಬೇಗನೆ ಬಿಟ್ಟು ಬೇರೆ
ಸುವಾರ್ತೆಯನ್ನು ಹಿಡಿದಿರುವದಕ್ಕೆ ಆಶ್ಚರ್ಯಪಡುತ್ತೇನೆ. [7]ಅದು ಸುವಾರ್ತೆಯೇ ಅಲ್ಲ, ಆದರೆ
ಕೆಲವರು ನಿಮ್ಮಲ್ಲಿ ಭೇದವನ್ನು ಹುಟ್ಟಿಸುತ್ತಾ ಕ್ರಿಸ್ತನ ಸುವಾರ್ತೆಯನ್ನು ಮಾರ್ಪಡಿಸುವದಕ್ಕೆ
ಅಪೇಕ್ಷಿಸುತ್ತಾ ಇದ್ದಾರೆ. [8]ಆದರೂ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು
ನಾವೇ ಆಗಲಿ ಪರಲೋಕದಿಂದ ಬಂದ ದೇವದೂತನೇ ಆಗಲಿ ನಿಮಗೆ ಸಾರಿದರೆ
ಶಾಪಗ್ರಸ್ತನಾಗಲಿ. [9]ನೀವು ಸ್ವೀಕರಿಸಿದ ಸುವಾರ್ತೆಗೆ ವಿರುದ್ಧವಾದದ್ದನ್ನು ಯಾವನಾದರೂ
ನಿಮಗೆ ಸಾರಿದರೆ ಅವನು ಶಾಪಗ್ರಸ್ತನಾಗಲಿ ಎಂದು ನಾವು ಮೊದಲು ಹೇಳಿದ್ದಂತೆಯೇ
ಈಗಲೂ ನಾನು ತಿರಿಗಿ ಹೇಳುತ್ತೇನೆ.**

ಪೌಲನು ತನ್ನ ಪತ್ರಿಕೆಯು ಮುಖ್ಯಭಾಗವನ್ನು ಬರೆಯಲು ಆರಂಭಿಸುತ್ತಿದ್ದಂತೆ, ಆತನು ಬೇರೆ ಸುವಾರ್ತೆ ಸಾರುವವರ ವಿಷಯದಲ್ಲಿ ಕ್ರೈಸ್ತರನ್ನು ಎಚ್ಚರಿಸಲಾರಂಭಿಸಿದನು. ಆತನು ತತ್ಪರಿಣಾಮವಾಗಿ ಹೇಳಿದ್ದೇನೆಂದರೆ, “ಬೇರೆ ಇನ್ನಾವ ಸುವಾರ್ತೆಯೂ ಇರುವದಿಲ್ಲ!”

**ವಚನ 6.** ಗಲಾತ್ಯದವರು ಸಾಗಿದ್ದ ದಿಕ್ಕನ್ನು ಕಂಡು ಪೌಲನು ಸಂಪೂರ್ಣ ಅಚ್ಚರಿಗೊಂಡಿದ್ದನು. **ಆಶ್ಚರ್ಯಪಡುತ್ತೇನೆ** ಎಂಬುದು ಗ್ರೀಕ್ ಭಾಷೆಯ θαυμάζω (*thaumazō*) ಎಂಬ ಪದದ ಅನುವಾದವಾಗಿದೆ. ಬೇರೆ ತರ್ಜುಮೆಗಳಲ್ಲಿ “ನನಗೆ ಅಚ್ಚರಿಯಾಗುತ್ತದೆ” (KJV; NKJV), “ನಾನು ಚಕಿತಗೊಳ್ಳುತ್ತೇನೆ” (NIV; NRSV), “ನಾನು ಆಘಾತಗೊಳ್ಳುತ್ತೇನೆ” (CEV; NLT). ಈ *thaumazō* ಎಂಬ ಪದವು ಒಂದು ಸಕಾರಾತ್ಮಕ ಮಹತ್ವವನ್ನು ಹೊಂದಿದೆಯೋ ಅಥವಾ ನಕಾರಾತ್ಮಕ ಮಹತ್ವವನ್ನು ಹೊಂದಿದೆಯೋ ಎಂಬುದು ಸನ್ನಿವೇಶದ ಮೇಲೆ ಆಧಾರವಾಗಿರುತ್ತದೆ. ಈ ಸಂದರ್ಭದಲ್ಲಿ, ಅದು ನಕಾರಾತ್ಮಕವನ್ನು ಸೂಚಿಸುತ್ತಿದೆ.

ಗಲಾತ್ಯದವರಿಗೆ ಅಷ್ಟೊಂದು ಗ್ರಹಿಕೆಯೂ ಇಲ್ಲದಿರುವದನ್ನು ಕಂಡು ಪೌಲನು ಮೂಕವಿಸ್ಮರಗೊಂಡಿದ್ದನು. ಈ ಪತ್ರಿಕೆಯನ್ನು ಬರೆಯುದಕ್ಕೆ ಸ್ವಲ್ಪ ಮುಂಚೆಯಷ್ಟೇ, ಆತನು ಅವರ ಮಧ್ಯದಲ್ಲಿರುವ ವೇಳೆ, ಈ ಸಹೋದರರು ಆತನನ್ನು (ಆತನ ಸಂದೇಶದ ಸಮೇತವಾಗಿ) ಸ್ವೀಕರಿಸಿಕೊಂಡಿದ್ದರು. 4:15ರಲ್ಲಿ, ಆತನು ಅವರ ತ್ಯಾಗಮಯ ಪ್ರೀತಿಯ ಕುರಿತಾಗಿ ಬರೆಯುತ್ತಾನೆ: “ಆಗ ನಮಗೆ ಶುಭವಾಯಿತೆಂದು ನೀವು ಅಂದುಕೊಂಡಿರಲ್ಲಾ; ಆ ಶುಭವು ಎಲ್ಲಿ ಹೋಯಿತು? ಸಾಧ್ಯವಾಗಿದ್ದರೆ ನಿಮ್ಮ ಕಣ್ಣುಗಳನ್ನಾದರೂ ಕಿತ್ತು ನನಗೆ ಕೊಡುತ್ತಿದ್ದಿರೆಂದು ನಿಮ್ಮನ್ನು ಕುರಿತು ಸಾಕ್ಷಿಹೇಳುತ್ತೇನೆ.” ಹಾಗಿದ್ದರೂ, ಕೆಲವರು ಆತನಿಗೆ ಮತ್ತು ಶುದ್ಧ ಸುವಾರ್ತೆಗೆ ವಿರುದ್ಧವಾಗಿ ತಿರುಗಿಕೊಂಡಿದ್ದರು. 3:1ರಲ್ಲಿ, ಆತನು ಹೀಗೆ ಕೇಳುತ್ತಾನೆ, “ಎಲೈ ಬುದ್ಧಿಯಿಲ್ಲದ ಗಲಾತ್ಯದವರೇ, ಯಾರು ನಿಮ್ಮನ್ನು ಮರುಳುಗೊಳಿಸಿದರು? ಯೇಸು ಕ್ರಿಸ್ತನು ಶಿಲುಬೆಗೆ ಹಾಕಿಸಿಕೊಂಡವನಾಗಿ ನಿಮ್ಮ ಕಣ್ಣೆದುರಿನಲ್ಲಿ ವರ್ಣಿಸಲ್ಪಟ್ಟನಲ್ಲವೇ.” ಅವರು ಪವಿತ್ರಾತ್ಮನನ್ನು ಸ್ವೀಕರಿಸಿಕೊಂಡಿದ್ದರು ಮತ್ತು ದೇವರು ಅವರ ಮಧ್ಯದಲ್ಲಿ ಅದ್ಭುತಗಳನ್ನು ಮಾಡಿದ್ದನು (3:3, 5). ಅವರು ಹೇಗೆ ವಿಮುಖರಾಗಲು ಸಾಧ್ಯವಾಗಿತ್ತು?

**ಇಷ್ಟು ಬೇಗನೆ** (οὕτως ταχέως, *houtōs tacheōs*) ಎಂಬ ಪದಗಳು ಗಲಾತ್ಯದವರಿಗೆ

ಪತ್ರಿಕೆಯು ಮುಂಚಿನ ದಿನಾಂಕದಲ್ಲಿಯೇ ಬರೆಯಲ್ಪಟ್ಟಿರಬಹುದು ಎಂಬ ಪುರಾವೆಗೆ ಬೆಂಬಲವನ್ನು ಕೊಡುತ್ತವೆ. ಈ ಪದಗುಚ್ಛದಿಂದಲೇ ಒಂದು ನಿರ್ಧಾರಕ್ಕೆ ಬರಲು ಆಗದಿರಬಹುದಾದರೂ, ಗಲಾತ್ಯದವರಿಗೆ ಪತ್ರಿಕೆಯು ಮೊದಲ ಸುವಾರ್ತೆ ಪ್ರಯಾಣ ಮುಗಿದ ತಕ್ಷಣದಲ್ಲಿಯೇ ಬರೆಯಲ್ಪಟ್ಟಿತು - ಗಲಾತ್ಯದಲ್ಲಿನ ಸಭೆಗಳು ಸ್ಥಾಪಿಸಲ್ಪಟ್ಟು ಬಹಳ ಕಾಲದ ಬಳಿಕ ಅಲ್ಲ - ಎಂದು ಒಬ್ಬನು ಭಾವಿಸುವದಾದರೆ "ಇಷ್ಟು ಬೇಗನೆ" ಎಂಬುದು ಹೆಚ್ಚು ಅರ್ಥವನ್ನು ಕೊಡುವದಾಗಿದೆ (ಅಪೊಸ್ತಲರ ಕೃತ್ಯಗಳು 13; 14). ಈ ಪುರಾವೆಗೆ ಇನ್ನಷ್ಟು ಕೂಡಿಸಿ ಹೇಳುವದಾದರೆ, ಮೊದಲ ಸುವಾರ್ತಾ ಪ್ರಯಾಣದಲ್ಲಿ ಪೌಲನ ಸಂಗಡ ಹೋದ ಬಾರ್ನಬನು ಗಲಾತ್ಯದವರಿಗೆ ಪತ್ರಿಕೆಯಲ್ಲಿ ಮೂರು ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತಾನೆ (2:1, 9, 13). ಹೇಗೂ, ಎರಡನೆಯ ಸುವಾರ್ತಾ ಪ್ರಯಾಣದಲ್ಲಿ ಪೌಲನ ಜೊತೆಗೆಲಸದವನಾಗಿದ್ದ ಸೀಲನ ಹೆಸರು (ಅಪೊಸ್ತಲರ ಕೃತ್ಯಗಳು 15:40), ಪತ್ರಿಕೆಯಲ್ಲಿ ಎಂದಿಗೂ ಕಾಣಿಸಿಕೊಳ್ಳುವದಿಲ್ಲ. ಪತ್ರಿಕೆಯು ಒಂದು ಮುಂಚಿನ ದಿನಾಂಕದಲ್ಲಿ ಬರೆಯಲ್ಪಟ್ಟಿತು ಎಂಬುದಕ್ಕೆ ಈ ವಾಸ್ತವಾಂಶವನ್ನು ಇನ್ನಷ್ಟು ಪುರಾವೆಯನ್ನಾಗಿ ಪರಿಗಣಿಸಬಹುದು. (ಹೆಚ್ಚಿನ ಮಾಹಿತಿಗಾಗಿ, ನೋಡಿರಿ *ಪರಿಚಯ: ದಿನಾಂಕ ಮತ್ತು ಬರೆದ ಸ್ಥಳ,* ಪುಟಗಳು 7-8.)

ಪರಿವರ್ತನೆಗೊಂಡಾದ ಬಳಿಕ, ಇಷ್ಟೊಂದು ಬೇಗನೆ ಗಲಾತ್ಯದ ಕ್ರೈಸ್ತರು ಕ್ರಿಸ್ತನನ್ನು **ಬಿಟ್ಟು** ಹೋಗಿದ್ದರೆಂಬುದಕ್ಕಾಗಿ ಪೌಲನು ಆಶ್ಚರ್ಯಗೊಂಡಿದ್ದನು. "ಬಿಟ್ಟು" ಎಂಬುದು μετατίθημι (*metatithēmi*) ಎಂಬ ಪದದಿಂದ ಬಂದದ್ದಾಗಿದ್ದು, "ವಿಮುಖವಾಗು" ಅಥವಾ "ನಂಬಿಕೆ ಭ್ರಷ್ಟವಾಗು" ಎಂದರ್ಥವಾಗಿದೆ. ನಿಶ್ಚಯವಾಗಿಯೂ, ಕ್ರಿಸ್ತನಿಂದ ವಿಮುಖರಾಗಬೇಕೆಂಬುದು ಸಹೋದರರ ಉದ್ದೇಶವಾಗಿರಲಿಲ್ಲ, ತಾವು ಹಾಗೆ ಮಾಡುತ್ತಿರುವರೆಂಬ ಅರುಹು ಸಹ ಅವರಿಗಿರಲಿಲ್ಲ. ಹೇಗೂ, ಕ್ರಿಸ್ತನಲ್ಲಿ ದೇವರು ಏರ್ಪಡಿಸಿರುವ ವಿಮೋಚನಾಕಾರ್ಯದ ಯೋಜನೆಗಳಲ್ಲಿ ನೇಮನಿಷ್ಠೆಗಳನ್ನು ಸೇರ್ಪಡೆಗೊಳಿಸುವದು ಧರ್ಮಭ್ರಷ್ಟತೆಗೆ ಸಮಾನವಾಗಿರುತ್ತದೆಂಬುದನ್ನು ಪೌಲನು ಅವರಿಗೆ ಸ್ಪಷ್ಟಗೊಳಿಸಿದನು (5:4). ಪುನಃ ಧರ್ಮಶಾಸ್ತ್ರಕ್ಕೆ ಹಿಂದಿರುಗುವದು ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ತೀವ್ರವಾಗಿ ಬದಲಾವಣೆಗೊಂಡಂತೆ ಆಗಿರುತ್ತದೆ: ಕ್ರಿಸ್ತನಲ್ಲಿರುವ ಕೃಪೆಯಿಂದ ಬಿದ್ದು ಹೋಗಿ ಧರ್ಮಶಾಸ್ತ್ರಕ್ಕನುಸಾರವಾದ ನೀತಿ ಕ್ರಿಯೆಗಳ ವ್ಯವಸ್ಥೆಗೆ ಹಿಂದಿರುಗುವಿಕೆಯಾಗಿತ್ತು (3:11, 12; ನೋಡಿರಿ ವಿಮೋಚನಕಾಂಡ 19:5, 8; ಯಾಜಕಕಾಂಡ 18:4, 5). ಧರ್ಮಶಾಸ್ತ್ರದ ಅನುಗುಣವಾದ ನೀತಿಯು ನಿಜವಾದ, ತಕ್ಕಂತೆ ಸಂಪಾದಿಸಿಕೊಂಡು ಸ್ವನೀತಿಯಾಗಿತ್ತು (ರೋಮಾ 10:1-5; ಫಿಲಿಪ್ಪಿ 3:8, 9[10]).

ಗಲಾತ್ಯದವರಿಗೆ ಪತ್ರಿಕೆಯಲ್ಲಿ, ಸನ್ನಿವೇಶವು ನಿರಂತರವಾಗಿ ಯೆಹೂದೀಕರಣಗೊಳಿಸುವ ವ್ಯಕ್ತಿಗಳ ಸಮಸ್ಯೆಯೊಂದಿಗೆ ಸಂಬಂಧಿಸಿದ್ದಾಗಿದೆ, ಅವರು "ತೊಳೆಯಲ್ಪಡದ" ಅನ್ಯಜನರು, ಧರ್ಮಶಾಸ್ತ್ರದ ನಿಯಮಗಳನ್ನು ಅನುಸರಿಸದೆಯೇ, ನೇರವಾಗಿ ಕ್ರಿಸ್ತನಲ್ಲಿ ದೊರಕುವ ನೀತಿಯನ್ನು ಹೊಂದಿಕೊಳ್ಳಬಲ್ಲರೆಂಬುದನ್ನು ಊಹಿಸಿಕೊಳ್ಳಲಾಗಲಿಲ್ಲ (ನೋಡಿರಿ ಅಪೊಸ್ತಲರ ಕೃತ್ಯಗಳು 15:1). ಗಲಾತ್ಯವದವರಿಗೆ ಬರೆದ ಇಡೀ ಪತ್ರಿಕೆಯು ಈ ಹಿನ್ನಲೆಯೊಂದಿಗೆ ಬರೆಯಲ್ಪಟ್ಟಿದೆ. O. Palmer Robertsonನು ನಂಬಿದ್ದೇನೆಂದರೆ, ಪೌಲನು ತನ್ನ ಪತ್ರಿಕೆಯಲ್ಲಿ ಹಳೆಯ ಹಾಗೂ ಹೊಸ ಒಡಂಬಡಿಕೆಗಳ ನಡುವಿನ ವ್ಯತ್ಯಾಸವನ್ನು ಕುರಿತು ಬರೆಯುವವನಾಗಿದ್ದಾನೆ: "ಇಡೀ ಚರ್ಚೆಯಲ್ಲಿ ಪೌಲನ ಅಂತಿಮ ಉದ್ದೇಶವು [ಏನಾಗಿತ್ತೆಂದರೆ] ಪ್ರಸ್ತುತಕಾಲದ ಯೆಹೂದಿಕರಣಗೊಳಿಸುವವರ ನೇಮನಿಷ್ಠೆವಾದಕ್ಕೆ ವಿರುದ್ಧವಾಗಿ ಹೊಸ ಒಡಂಬಡಿಕೆಯ ಕೃಪಾವಂತಿಕೆಯನ್ನು ಹೋಲಿಕೆ ಮಾಡುವದೇ ಆಗಿತ್ತು (ಗಲಾತ್ಯ 2:14-16; 3:1;

4:31–5:2)."[11]

ಧರ್ಮಶಾಸ್ತ್ರವನ್ನು ಅನುಸರಿಸುವದಕ್ಕೆ ಅಪೇಕ್ಷಿಸುವ ಮೂಲಕ, ಗಲಾತ್ಯವರು [ತಮ್ಮನ್ನು] **ಕ್ರಿಸ್ತನ ಕೃಪೆಯಿಂದ ಕರೆದಾತನನ್ನು** ಬಿಟ್ಟು ಹೋಗುವವರಾಗಿದ್ದರು. NASBಯಲ್ಲಿ "ಇಂದ" ಎಂದು ಅನುವಾದಿಸಲ್ಪಟ್ಟಿರುವ ἐν (*en*) ಎಂಬ ಉಪಸರ್ಗವು "ಯಲ್ಲಿ" (ASV; NKJV) ಎಂದು ಅನುವಾದಿಸಲ್ಪಡಬಹುದಾಗಿದೆ. ಹೇಗೂ, *en* ಎಂಬದು ಕೃಪೆಯನ್ನು ರಕ್ಷಣೆಯ ಸಾಧನವೆಂದು ಗುರುತಿಸುವ ಸಾಧ್ಯತೆಯಿರುತ್ತದೆ, ಆದ್ದರಿಂದ "ಯಿಂದ" ಎಂಬುದು ಸರಿಯಾದದ್ದು. ಕ್ರೈಸ್ತನು ದೇವರ ಚಿತ್ತಾನುಸಾರವಾಗಿ ಕ್ರಿಸ್ತನ ಕೃಪೆಯಿಂದ ಕರೆಯಲ್ಪಟ್ಟವನಾಗಿದ್ದಾನೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಕ್ರೈಸ್ತ ಯುಗದಲ್ಲಿದ ದೇವರ ಮಹಾಯಾಜಕನಾಗಿರುವದಕ್ಕೆ ಕ್ರಿಸ್ತನು ಕರೆಯಲ್ಪಟ್ಟದ್ದನ್ನು ಬಣ್ಣಿಸುತ್ತಾನೆ: "ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ; ಆರೋನನು ಸಹ ದೇವರಿಂದಲೇ ನೇಮಿಸಲ್ಪಟ್ಟು ಆ ಗೌರವವನ್ನು ವಹಿಸಿಕೊಂಡನಲ್ಲಾ" (ಇಬ್ರಿಯ 5:4). ಪೌಲನು ತಿಮೊಥೆಯನಿಗೆ ಬರೆದದ್ದೇನೆಂದರೆ ದೇವರು "ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು" (2 ತಿಮೊಥೆ 1:9). ಕರೆಯುವಿಕೆ ಕುರಿತು ಒಂದು ಸಂಪೂರ್ಣ ದೈವಶಾಸ್ತ್ರವು ಹಳೆಯ ಮತ್ತು ಹೊಸ ಎರಡೂ ಒಡಂಬಡಿಕೆಗಳಲ್ಲಿ ಕಂಡು ಬರುತ್ತದೆ. ದೇವಜನತ್ವಕ್ಕೆ ನಮಗಿರುವ ಕರೆಯುವಿಕೆಯು ಅನಾದಿಕಾಲದಲ್ಲಿ ಆತನ "ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ" ಆಗಿರುತ್ತದೆಂಬ ಭಾವನೆಯು ನಮ್ಮನ್ನು ಭಯ ಹಾಗೂ ಭಕ್ತಿಯಿಂದ ತುಂಬಿಸತಕ್ಕದ್ದಾಗಿದೆ.

ಗಲಾತ್ಯದವರು "ಕ್ರಿಸ್ತನ ಕೃಪೆಯಿಂದ . . . ಕರೆ"ಯಲ್ಪಟ್ಟಿದ್ದರಾದರೂ, ಕೆಲವರು ಕ್ರಿಸ್ತನನ್ನು ಬಿಟ್ಟು **ಬೇರೆ ಸುವಾರ್ತೆಯನ್ನು ಹಿಡಿದಿರುವ**ವರಾಗಿದ್ದರು (εἰς ἕτερον εὐαγγέλιον, *eis heteron euangelion*). εἰς (*eis*) ಎಂಬುದರ ಅರ್ಥವು "ಗೋಸ್ಕರ," "ಒಳಗೆ," ಅಥವಾ "ಉದ್ದೇಶಕ್ಕೋಸ್ಕರ" ಎಂದಾಗಿರಬಲ್ಲದು. ಈ ಸನ್ನಿವೇಶದಲ್ಲಿ, ಇಲ್ಲಿರುವ ವಿಚಾರವು ಏನೆಂದರೆ ಒಂದು ಸಂಗತಿಯನ್ನು ಮತ್ತೊಂದು ಸಂಗತಿ*ಗೋಸ್ಕರವಾಗಿ* ಸಂಪೂರ್ಣ ತೊರೆದು ಬಿಡುವಿಕೆ, ಪುರುಷನು ಮತ್ತೊಬ್ಬ ಹೆಂಗಸಿ*ಗೋಸ್ಕರ* ಒಬ್ಬ ಹೆಂಗಸನ್ನು ತೊರೆದು ಬಿಡುವ (ಅಥವಾ ವಿಚ್ಛೇದನ ಕೊಡುವದು) ರೀತಿಯಲ್ಲಿಯೇ. ಧರ್ಮಶಾಸ್ತ್ರದ ಸೂತ್ರಗಳನ್ನು ಸುವಾರ್ತೆಯೊಳಗೆ ಸೇರ್ಪಡೆಗೊಳಿಸುವದರ ಬದಲಿಗೆ ಅಂತಹ ವಿನಾಶಕರ ಫಲ ಸಿಕ್ಕುತ್ತದೆಂದು ಬಹುಶಃ ಗಲಾತ್ಯದವರು ಗ್ರಹಿಸಿರಲಿಕ್ಕಿಲ್ಲ. ಹಾಗಿದ್ದರೂ, ಅಂಥ ಕೃತ್ಯವು ಯಾವ ನೇಮನಿಷ್ಠೆಯ ವ್ಯವಸ್ಥೆಯಿಂದ ಯಾವದೇ ವ್ಯಕ್ತಿಯೂ ರಕ್ಷಿಸಲ್ಪಡುವಕ್ಕೆ ಸಾಧ್ಯವೇ ಇಲ್ಲದ ಅದನ್ನು ಪಡೆದುಕೊಳ್ಳಲು ಕ್ರಿಸ್ತನಲ್ಲಿ ದೊರಕಿರುವ ರಕ್ಷಣೆಯನ್ನು ವಿನಿಮಯ ಮಾಡಿಕೊಂಡಂತೆಯೇ ಹೊರತು ಮತ್ತೇನೂ ಆಗಿರುವದಿಲ್ಲ ಎಂಬುದನ್ನು ಅವರಿಗೆ ಸ್ಪಷ್ಟಗೊಳಿಸಿದನು (3:10–12).

**ವಚನ 7.** ಈ "ಬೇರೆ ಸುವಾರ್ತೆ"ಯು (1:6) **ಸುವಾರ್ತೆಯೇ ಅಲ್ಲ**. ತಾಂತ್ರಿಕವಾಗಿ ಹೇಳುವದಾದರೆ, "ಬೇರೆ" ಎಂಬದಕ್ಕಿರುವ ಗ್ರೀಕ್ ಪದವು (ἕτερος, *heteros*) ಭಿನ್ನ ಅಥವಾ ಬೇರೆ ರೀತಿಯದ್ದನ್ನು ಸೂಚಿಸಬಹುದಾಗಿದೆ. "ಬೇರೊಂದು" (ἄλλος, *allos*) ಎಂಬುದು ಅನೇಕ ಸಾರಿ "ಹೆಚ್ಚುವರಿಯಾದದ್ದು" ಎಂಬರ್ಥವನ್ನು ಕೊಡುತ್ತದೆ. ಕೆಲವು ಸಾರಿ ಶೈಲಿಯಲ್ಲಿನ ವ್ಯತ್ಯಾಸಗಳನ್ನು ಸೂಚಿಸಲು ಈ ಎರಡು ಗ್ರೀಕ್ ಪದಗಳು ಸಮಾನಾರ್ಥವಾಗಿ ಬಳಸಲ್ಪಟ್ಟಿರುತ್ತವೆ.[12] ಬಹುಶಃ ಪೌಲನ ಉದ್ದೇಶವು ಇಲ್ಲಿ ಅವುಗಳ ಅರ್ಥಗಳ ನಡುವೆ ಯಾವದೇ ದೊಡ್ಡ ವ್ಯತ್ಯಾಸವಿದೆ ಎಂದಾಗಿರಲಿಲ್ಲ. ಇಲ್ಲಿ ತಿಳಿಸಲಿಚ್ಛಿಸುವ ಅಂಶವು ಏನೆಂದರೆ -

ಎರಡರೊಳಗೆ ಯಾವ ಪದವು ಬಳಸಲ್ಪಟ್ಟಿದ್ದರೂ - ಆತನು ಮೂಲತಃ ಗಲಾತ್ಯದಲ್ಲಿ ಸಾರಿದ ಸುವಾರ್ತೆಯನ್ನು ("ಶುಭವರ್ತಮಾನ") ಬೇರೆ ಏನೇ ಇದ್ದರೂ ಅದು "ನಿಜವಾಗಿಯೂ" ಶುಭವರ್ತಮಾನ ಅಲ್ಲವೇ ಅಲ್ಲ ಎಂಬುದೆ. "ನಿಜವಾಗಿಯೂ" ಎಂಬ ಪದವು ಮೂಲ ವಾಕ್ಯದಲ್ಲಿರುವದಿಲ್ಲ, ಅದು NASBಯಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುವದು ವಾಕ್ಯಭಾಗದ ಅರ್ಥಕ್ಕೆ ಉತ್ತಮವಾಗಿ ಸರಿ ಹೊಂದುತ್ತದೆ.

ದುರಂತರಕ ಸ್ಥಿತಿಯು ವಚನದ ಉಳಿದ ಭಾಗದಲ್ಲಿ ಕಾಣಿಸುತ್ತದೆ: **ಆದರೆ ಕೆಲವರು ನಿಮ್ಮಲ್ಲಿ ಭೇದವನ್ನು ಹುಟ್ಟಿಸುತ್ತಾ ಕ್ರಿಸ್ತನ ಸುವಾರ್ತೆಯನ್ನು ಮಾರ್ಪಡಿಸುವದಕ್ಕೆ ಅಪೇಕ್ಷಿಸುತ್ತಾ ಇದ್ದಾರೆ.** "ಕೆಲವರು" ಎಂಬುದು ಪೌಲನ ವಿರೋಧಿಗಳಾದ ಯೆಹೂದಿಕರಣಗೊಳಿಸುವವರನ್ನು ಸೂಚಿಸುತ್ತದೆ. ಈ ವ್ಯಕ್ತಿಗಳು ಯೆರೂಸಲೇಮಿನಲ್ಲಿ ಪೌಲನು ಎದುರಿಸಿದ್ದ ವ್ಯಕ್ತಿಗಳಂತೆಯೇ ಆಗಿದ್ದರು, ಅವರನ್ನು ಆತನು 2:4ರಲ್ಲಿ ಬಣ್ಣಿಸುತ್ತಾನೆ, "ಸಭೆಗೆ ಕಳ್ಳತನದಿಂದ ಸೇರಿಕೊಂಡ ಸುಳ್ಳು ಸಹೋದರರು ಅಲ್ಲಿ ಇದ್ದದರಿಂದ ಬಲಾತ್ಕಾರ ನಡೆದೀತೆಂಬ ಭಯವಿತ್ತು. ಅವರು ನಮ್ಮನ್ನೂ ದಾಸತ್ವದೊಳಗೆ ಸಿಕ್ಕಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿ ನಮಗೆ ದೊರಕಿರುವ ಸ್ವಾತಂತ್ರ್ಯವನ್ನು ಗೂಢವಾಗಿ ವಿಚಾರಿಸುವದಕ್ಕೆ ಮರಸಿಕೊಂಡು ಬಂದವರು" (ನೋಡಿರಿ 4:17; 5:10; 6:12, 13). ಅಲ್ಲದೆ ಅಂಥ ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಗಲಾತ್ಯದವರಲ್ಲಿ "ಭೇದವನ್ನು ಹುಟ್ಟಿಸುತ್ತಿದ್ದರು." "ಭೇದವನ್ನು ಹುಟ್ಟಿಸು" ಎಂಬದು ಗ್ರೀಕ್ ಭಾಷೆಯ ταράσσω (*tarassō*) ಎಂಬ ಪದದಿಂದ ಬರುತ್ತದೆ, ಅದರರ್ಥವು "ಆಂತರ್ಯದಲ್ಲಿ ಅಲ್ಲೋಲಕಲ್ಲೋಲ ಉಂಟು ಮಾಡು, ಪ್ರಚೋದಿಸು, ಗೊಂದಲವನ್ನೆಬ್ಬಿಸು, ಅಸ್ತವ್ಯಸ್ತಗೊಳಿಸು, ಗಲಿಬಿಲಿಯಲ್ಲಿ ಬೀಳಿಸು"13 ಎಂದಾಗಿರುತ್ತದೆ. ಈ ಪದವು ಅಪೊಸ್ತಲರ ಕೃತ್ಯಗಳು 15:24ರಲ್ಲಿ ಯೆರೂಸಲೇಮಿನೊಳಗೆ ನಡೆದ ಸಮಾಲೋಚನಾ ಸಭೆಯ ಫಲಿತವಾಗಿ ಅನ್ಯಜನಾಂಗದ ಸಹೋದರರಿಗೆ ಬರೆದ ಪತ್ರದಲ್ಲಿ ಸಹ ಕಾಣಿಸಿಕೊಳ್ಳುತ್ತದೆ: "ಅದಾಗಿ ನಮ್ಮೊಳಗಿಂದ ಹೋದ ಕೆಲವರು ನಮ್ಮಿಂದ ಏನೂ ಅಪ್ಪಣೆಹೊಂದದೆ ತಮ್ಮ ಮಾತುಗಳಿಂದ ನಿಮ್ಮಲ್ಲಿ ಅಸಮಾಧಾನವನ್ನು ಹುಟ್ಟಿಸಿ ನಿಮ್ಮ ಮನಸ್ಸುಗಳನ್ನು ಕಳವಳಗೊಳಿಸಿದ್ದಾರೆಂಬದನ್ನು [ತಾರಾಸ್ಸೋ] ಕೇಳಿದ್ದರಿಂದ."

ಯೆಹೂದಿಕರಣಗೊಳಿಸುವವರು ತಮ್ಮ ಸಂದೇಶ ಮೂಲಕವಾಗಿ, "ಕ್ರಿಸ್ತನ ಸುವಾರ್ತೆಯನ್ನು ಮಾರ್ಪಡಿಸು[ತ್ತಿದ್ದಾರೆ]ವದಕ್ಕೆ" ಪ್ರಯತ್ನಿಸುತ್ತಿದ್ದರು. "ಮಾರ್ಪಡಿಸುವದಕ್ಕೆ" ಎಂಬುದಾಗಿ ಪೌಲನು ಬಳಸಿರುವ ಪದವನ್ನು (μεταστρέφω, *metastrephō*) "ಬದಲಾಯಿಸು" ಅಥವಾ "ತಿದ್ದು" ಎಂದು ಅನುವಾದಿಸಬಹುದಾಗಿದೆ. ಈ ಪದವು ಹೊಸ ಒಡಂಬಡಿಕೆಯೊಳಗೆ ಬೇರೆ ಎರಡು ವಾಕ್ಯಭಾಗಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆ ವಾಕ್ಯಗಳಲ್ಲಿ, ಒಂದು ಸಂಗತಿಯು ಸಂಪೂರ್ಣ ವಿರುದ್ಧವಾಗಿ ಮಾರ್ಪಡಿಸಲ್ಪಡುತ್ತಿದೆ. ಸೆಪ್ಟುಜಿಯಂಟ್ (LXX)ನಲ್ಲಿ ಇರುವ ಯೋವೇ 2:31ನ್ನು ಉಲ್ಲೇಖಿಸುತ್ತಾ, ಪೇತ್ರನು ಅಪೊಸ್ತಲರ ಕೃತ್ಯಗಳು 2:20ರಲ್ಲಿ ಹೀಗೆ ಹೇಳಿದನು, "ಸೂರ್ಯನು ಕತ್ತ*ಲಾಗುವನು*, ಚಂದ್ರನು ರಕ್ತವಾಗುವನು" (ಒತ್ತಿ ಹೇಳಿದ್ದು ನನ್ನದು). ಯಾಕೋಬ 4:9 ಹೀಗೆ ಹೇಳುತ್ತದೆ, "ನಗುವದನ್ನು *ಬಿಟ್ಟು* ಗೋಳಾಡಿರಿ; ಸಂತೋಷವನ್ನು ಬಿಟ್ಟು ಮನಗುಂದಿದವರಾಗಿರಿ" (ಒತ್ತಿ ಹೇಳಿದ್ದು ನನ್ನದು). ಈ ವಾಕ್ಯಭಾಗಗಳು "ಮಾರ್ಪಡಿಸು" ಎಂಬುದಕ್ಕಿರುವ ಗ್ರೀಕ್ ಪದವು ಬಣ್ಣಿಸಿರುವಂಥ ಮಹಾ ರೂಪಾಂತರವನ್ನು ದೃಷ್ಟಾಂತಪಡಿಸುತ್ತವೆ.

ಕ್ರಿಸ್ತನಲ್ಲಿರುವ ಸ್ವಾತಂತ್ರ್ಯದಲ್ಲಿ ಪಾಲುಗಾರರಾಗಿರುವವರ ಮೇಲೆ ಧರ್ಮಶಾಸ್ತ್ರದ ನಿಮಯಗಳನ್ನು ಒತ್ತಾಯ ಪಡಿಸುವದು ನಿಜಕ್ಕೂ ಒಂದು ತೀವ್ರಕರವಾದ ಭ್ರಷ್ಟತೆಯೇ

ಆಗಿರುತ್ತದೆ. ಯೋವೇಲ 2:31ರಲ್ಲಿ ಬಣ್ಣಿಸಲ್ಪಟ್ಟಿರುವ ಅತಿರೇಕದಂತೆಯೇ, ಕ್ರೈಸ್ತರಿಗೆ ಧರ್ಮಶಾಸ್ತ್ರ ಕೈಕೊಂಡು ನಡೆಯಬೇಕೆಂದು ಕಡ್ಡಾಯಗೊಳಿಸುವದು ಅವರನ್ನು "ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶ" ದಿಂದ ಅವರನ್ನು ವಿಮುಖಗೊಳಿಸಿ "ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿ"ದ್ದಾನೋ ಅಂಥವರ ನಿರೀಕ್ಷೆಯಿಲ್ಲದ ಅಂಧಕಾರದ ಕಡೆಗೆ ತಿರುಗಿಕೊಳ್ಳುವಂತೆ ಮಾಡಿದ ಹಾಗಾಗುತ್ತದೆ (2 ಕೊರಿಂಥ 4:4).

ಧರ್ಮಶಾಸ್ತ್ರದಲ್ಲಿ ಆಳವಾಗಿ ಬೇರೂರಿದ್ದ ಹಾಗೂ ಅನ್ಯಜನರೊಂದಿಗೆ ಸಂಬಂಧವಿಟ್ಟುಕೊಳ್ಳಬಾರದೆಂದು ನಿಷೇಧಿಸಲ್ಪಟ್ಟಿದ್ದ ಯೆಹೂದ್ಯ ಕ್ರೈಸ್ತನೊಬ್ಬನು, ಆ ಅನ್ಯಜನಾಂಗದವರನ್ನು ಕೀಳಾಗಿ ಕಾಣಬೇಕೆಂಬ ಶೋಧನೆಗೊಳಗಾಗಬಹುದಿತ್ತು ಎಂಬುದನ್ನು ಒಬ್ಬನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಆತನು "ಕುರುಡರಿಗೆ ದಾರಿತೋರಿಸುವವನೂ ಕತ್ತಲೆಯಲ್ಲಿರುವವರಿಗೆ ಬೆಳಕೂ ತಿಳುವಳಿಕೆಯಿಲ್ಲದವರಿಗೆ ಶಿಕ್ಷಕನೂ ಬಾಲಕರಿಗೆ ಉಪಾಧ್ಯಾಯನೂ" ಆಗಿರುವದರಲ್ಲಿ ಆತ್ಮವಿಶ್ವಾಸವನ್ನು ಅನುಭವಿಸಲಿದ್ದನು (ರೋಮಾ 2:19, 20). ಆತನು ಕೊನೆಗೆ "ಧರ್ಮೋಪದೇಶಕರಾಗಿರಬೇಕೆಂದಿದ್ದರೂ ತಾವು ಹೇಳುವದಾಗಲಿ ತಾವು ದೃಢವಾಗಿ ಮಾತಾಡುವ ವಿಷಯವಾಗಲಿ ಇಂಥದೆಂದು ತಿಳಿಯದವರಾಗಿ"ರುವ ವ್ಯಕ್ತಿಗಳಲ್ಲೊಬ್ಬನಾಗಿ ಪರಿಗಣಿಸಲ್ಪಡಬಹುದಿತ್ತು (1 ತಿಮೊಥೆ 1:7).

ಕ್ರಿಸ್ತನಲ್ಲಿ ನಂಬಿಕೆಯಿಡುವವರಾದ ಬಳಿಕ, ಯೆಹೂದಿಕರಣಗೊಳಿಸುವ ಸಹೋದರರನ್ನು ಅವಿಶ್ವಾಸಿಗಳ ವರ್ಗಕ್ಕೆ ಸೇರಿಸಕೂಡದು. ಹಾಗಿದ್ದರೂ, ಅನ್ಯಜನರನ್ನು ತಮಗೆ ಸಮಾನರೆಂದು ಅಂಗೀಕರಿಸಿಕೊಳ್ಳಲು ಅನೇಕ ಯೆಹೂದ್ಯರಿಗಿದ್ದ ಅಸಮರ್ಥತೆಯು ಪೌಲನ ದಿನಗಳಲ್ಲಿ ಸಭೆಯ ಅತ್ಯಂಥ ವ್ಯಾಪಿಸಿಕೊಂಡಿದ್ದ ಸಮಸ್ಯೆಗಳಲ್ಲೊಂದಾಗಿತ್ತು (ನೋಡಿರಿ 2:11, 12; ಅಪೊಸ್ತಲರ ಕೃತ್ಯಗಳು 11:1-3).

**ವಚನ 8.** ಅಪೊಸ್ತಲನು ನಿಜವಾದ ಸುವಾರ್ತೆಯನ್ನು ಯಾವದೇ ಕಾರಣಕ್ಕೂ ತಿದ್ದುವದಕ್ಕೆ ಸಾಧ್ಯವಿರಲಿಲ್ಲ. ಒಂದು ದೃಢವಾದ ನಿರ್ಧಾರದೊಂದಿಗೆ, ಆತನು ಹೀಗೆ ಘೋಷಿಸಿದನು, **ಆದರೂ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು ನಾವೇ ಆಗಲಿ ಪರಲೋಕದಿಂದ ಬಂದ ದೇವದೂತನೇ ಆಗಲಿ ನಿಮಗೆ ಸಾರಿದರೆ ಶಾಪಗ್ರಸ್ತನಾಗಲಿ.** ಶರತ್ತುಬದ್ಧ ವಾಕ್ಯಸಾಲುಗಳಲ್ಲಿ ಹಲವಾರು ವಿವಿಧ ಪದರಚನೆಗಳು ("ಆದರೆ" ಎಂಬ ಕಲಂಗಳೊಂದಿದೆ) ಗ್ರೀಕ್ ಸಾಮಾನ್ಯ ಭಾಷೆಯಲ್ಲಿ ಇರುತ್ತವೆ. ನಿರ್ದಿಷ್ಟವಾಗಿ ಈ ಪದವು - ಸಂಭವನಾರ್ಥಕ ಕ್ರಿಯಾಪದದೊಂದಿಗೆ ಇರುವ ἐάν (*ean*) - ಒಂದು ಅಸಂಭವನೀಯ ಘಟನೆಯನ್ನು ಸೂಚಿಸುತ್ತದೆ. "ನಾವು" ಎಂಬ ಬಹುವಚನದ ನಾಮಪದವನ್ನು ಬಳಸುವ ಮೂಲಕ, ಪೌಲನು ತನ್ನ ಹಾಗೂ ಬಾರ್ನಬನನ್ನು, ಗಲಾತ್ಯದಲ್ಲಿನ ಆರಂಭಿಕ ಸುವಾರ್ತಾ ಸೇವೆಯಲ್ಲಿದ್ದ ಜೊತೆಗೆ ಕೆಲಸಗಾರರನ್ನು ಉಲ್ಲೇಖಿಸಿ ಹೇಳುತ್ತಿದ್ದಾನೆ. ಗಲಾತ್ಯದವರು ಒಂದು ಬೇರೆ ಸುವಾರ್ತೆ ಸಾರುವನ್ನು ಕಲ್ಪಿಸಿಕೊಳ್ಳುವರೆಂಬುದು ಊಹಿಸಲಾಗದ್ದು ಎಂಬುದೆ.[14] ಪೌಲನು "ಪರಲೋಕದಿಂದ ಬಂದ ದೇವದೂತನು" ಎಂದು ಉಲ್ಲೇಖಿಸಿದ್ದು ಒಂದು ಅತಿಶಯೋಕ್ತಿಯಾಗಿರಬಹುದಾಗಿದೆ, ಅದು 1 ಕೊರಿಂಥ 13:1ರಲ್ಲಿರುವ "ದೇವದೂತರ ಭಾಷೆಗಳನ್ನೂ . . ." ಎಂಬುದರ ರೀತಿಯಲ್ಲಿಯೇ ಅಗಿರುತ್ತದೆ. ಬೇರೆ ಸುವಾರ್ತೆಯನ್ನು ಸಾರಿದರೆ ಅಂಥ ಪರಲೋಕದಿಂದ ಬಂದ ಸಂದೇಶಕನು ಸಹ ಈ ದೇವರ ಶಾಪಕ್ಕೆ ಅಧೀನನಾಗುವನು ಎಂದು ಹೇಳುತ್ತಾನೆ!

ಪೌಲನು ಬಳಸಿದ "ದೂತನೇ ಆಗಲಿ" ಎಂಬುದು ಸಂಭವಿಸುವಂಥ ಖಚಿತವಾದ

ಫಲಿತವನ್ನು ಒತ್ತಿ ಹೇಳುತ್ತದೆ; ಅದು ಸುವಾರ್ತೆಯ ಸಂದೇಶವನ್ನು ಬದಲಾಯಿಸುವದಕ್ಕೆ ಪ್ರಯತ್ನಿಸುವ ಯಾವನೆ ಆಗಲಿ ಆತನ ಮೇಲೆ ದೇವರ ಶಾಪ (ἀνάθεμα, *anathema*) ಬರುವದನ್ನು ಬಲಗೊಳಿಸುತ್ತದೆ. ಈ ಶಾಪಕ್ಕೊಳಗಾಗುವ ಬೆದರಿಕೆಯು ಜಗದುತ್ಪತ್ತಿಗೆ ಮುಂಚೆನಿಂದಲೂ ದೇವರ ಹೃದಯದಲ್ಲಿ ಮರೆಯಾಗಿದ್ದ ಮರ್ಮದ, ರಕ್ಷಣೆಯನ್ನುಂಟು ಮಾಡುವ ಸುವಾರ್ತೆಯ ಶ್ರೇಷ್ಠ ಮೌಲ್ಯವನ್ನು ಕುರಿತು ಒತ್ತಿ ಹೇಳುತ್ತದೆ (ನೋಡಿರಿ ಎಫೆಸ 3:9). ಈ ಸಂದೇಶವು ನಾಶನದಲ್ಲಿರುವವರ ರಕ್ಷಣೆಗಾಗಿ ಪೂರ್ವದಲ್ಲೇ ಮಾಡಿದ ಯೋಜನೆ, ತನ್ನ ಮಗನಲ್ಲಿ ಸಾಕಾರಗೊಂಡ ಸೃಷ್ಟಿಯಲ್ಲಿದ್ದಂಥ ಕೇಂದ್ರಿಯ ಉದ್ದೇಶವಾಗಿರುತ್ತದೆ. ಇದು ಆತನ ಪ್ರೀತಿ, ಕೃಪೆ, ಮತ್ತು ಕರುಣೆಗಳ ಕುರಿತಾದ ಸ್ವ-ಪ್ರಕಟಣೆ ಆಗಿರುತ್ತದೆ. ಕ್ರಿಸ್ತನಲ್ಲಿಯೇ ಪ್ರತ್ಯೇಕವಾಗಿ ಸಿಕ್ಕುವಂಥ ಈ "ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳ"ನ್ನು ಒಬ್ಬನು ಅಕ್ರಮವಾಗಿ ತಿದ್ದುವ ಕೆಲಸವನ್ನು ಮಾಡಬಾರದು (ಯೋಹಾನ 6:68)!

"ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು" ಎಂಬ ಪದಗುಚ್ಛದಲ್ಲಿನ "ವಿರುದ್ಧವಾದದ್ದನ್ನು" ಎಂಬುದು παρά (*para*) ಎಂಬ ಉಪಸರ್ಗದ ಅನುವಾದವಾಗಿದೆ. ಈ ಪದಕ್ಕೆ "ಅದಲ್ಲದೆ," "ಅದನ್ನು ಮೀರಿ," "ಅದರ ಬದಲಾಗಿ," "ಅದಕ್ಕಿಂತ ಹೆಚ್ಚಾಗಿ," ಅಥವಾ "ಅದಲ್ಲದೆ ಬೇರೆಯದನ್ನು" ಎಂದು ಅನುವಾದಗಳನ್ನು ಮಾಡಬಹುದಾಗಿದೆ. ಈ ಸನ್ನಿವೇಶದಲ್ಲಿ, ಪೌಲನ ತಾತ್ಪರ್ಯವು ಸ್ಪಷ್ಟವಾಗಿರುತ್ತದೆ: ಒಬ್ಬನು ದೇವರ ವಾಕ್ಯಕ್ಕೆ "ಕೂಡಿಸುವದನ್ನಾಗಲಿ" ಅಥವಾ "ತೆಗೆದುಬಿಡುವದನ್ನಾಗಲಿ" ಎಂದಿಗೂ ಮಾಡಬಾರದು. ಈ ಎಚ್ಚರಿಕೆಯು ಹಳೆಯ ಒಡಂಬಡಿಕೆಯಲ್ಲಿ ಮಾತ್ರವಲ್ಲದೆ ಹೊಸ ಒಡಂಬಡಿಕೆಯಲ್ಲಿ ಸಹ ಸಿಕ್ಕುತ್ತದೆ (ಧರ್ಮೋಪದೇಶಕಾಂಡ 4:2; 12:32; ಜ್ಞಾನೋಕ್ತಿ 30:5, 6; ಪ್ರಕಟನೆ 22:18, 19). ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿನ ಅತ್ಯಂಥ ಮುಖ್ಯವಾದ ಅಂಶವೆಂದರೆ ಅದು ಸುವಾರ್ತೆಯಲ್ಲಿ ಧರ್ಮಶಾಸ್ತ್ರದ ಸೂತ್ರಗಳನ್ನು ಸೇರ್ಪಡೆಗೊಳಿಸುವದು ನಿಷೇಧಿಸಲ್ಪಟ್ಟಿದೆ ಎಂಬುದೆ.

NASBನು 8ನೇ ವಚನದ ಕಡೇ ಭಾಗವನ್ನು ಹೀಗೆ ಭಾವಾನುವಾದ ಮಾಡಿರುತ್ತದೆ "ಅಂಥವನು ಶಾಪಗ್ರಸ್ಥನಾಗಬೇಕು!" ἔστω (*estō*) ಎಂಬ ಕ್ರಿಯಾಪದವು εἰμί (*eimi*) ಎಂಬ ಕ್ರಿಯಾಪದದ ಆಜ್ಞಾರ್ಥಕ ಪದವಾಗಿದೆ, ಮತ್ತು ಅದನ್ನು ಆಂಗ್ಲದಲ್ಲಿ ಯಥಾಃರೀತಿ ಪುನರುತ್ಪತ್ತಿಸುವದು ಕಷ್ಟಕರವಾಗಿರುತ್ತದೆ. ಬಹುಶಃ ಅದಕ್ಕೆ ಉತ್ತಮವಾದ ಅನುವಾದವೆಂದರೆ "ಅಂಥವನು ಶಾಪಗ್ರಸ್ಥನಾಗಲಿ!" ಎಂಬುದೆ. ಇದು ಕೇವಲ ಪೌಲನಿಗಿದ್ದ ಒಂದು ಆಶಯ ಮಾತ್ರವೇ ಆಗಿರಲಿಲ್ಲ.[15] ಬದಲಾಗಿ, ಪೌಲನು ದೈವಿಕವಾಗಿ ನೇಮಕಗೊಳಿಸಲ್ಪಟ್ಟಿದ್ದ ಸ್ವತಃ ಕರ್ತನ ರಾಯಭಾರಿಯೇ ಆಗಿದ್ದರಿಂದ (1:1), ಆತನು ಈ ಶಾಪವನ್ನು ಉಚ್ಛರಿಸಿದಾಗ, ಅದಕ್ಕೆ ಸ್ವತಃ ದೇವರೇ ಘೋಷಿಸಿರುವಷ್ಟರ ಮಟ್ಟಿಗೆ ಸಕಲ ಶಕ್ತಿಯಿತ್ತು.

**ವಚನ 9.** ಪೌಲನು 8ನೇ ವಚನದಲ್ಲಿನ ಸಂದೇಶವನ್ನು ಪುನರುಚ್ಚರಿಸುತ್ತಾನೆ: **ನೀವು ಸ್ವೀಕರಿಸಿದ ಸುವಾರ್ತೆಗೆ ವಿರುದ್ಧವಾದದ್ದನ್ನು ಯಾವನಾದರೂ ನಿಮಗೆ ಸಾರಿದರೆ ಅವನು ಶಾಪಗ್ರಸ್ತನಾಗಲಿ ಎಂದು ನಾವು ಮೊದಲು ಹೇಳಿದ್ದಂತೆಯೇ ಈಗಲೂ ನಾನು ತಿರಿಗಿ ಹೇಳುತ್ತೇನೆ.** ಈ ಪುನರಾವರ್ತನೆಯು ಪೌಲ ಹಾಗೂ ಬಾರ್ನಬರು ಈ ಸಭೆಗಳಿಗೆ ಸಾರಿದ ಸುವಾರ್ತೆಯನ್ನು ಯಾವದೇ ವಿಧದಲ್ಲಿ ಬದಲಾಯಿಸುವದನ್ನು ಆತನು ಹೇಗೆ ಗಂಭೀರವಾಗಿ ಪರಿಗಣಿಸಿದ್ದನೆಂಬುದನ್ನು ತೋರಿಸುತ್ತದೆ. ನಾವು ಹೊಸ ಒಡಂಬಡಿಕೆಯಲ್ಲಿ ಪ್ರಭಾವಶಾಲಿಯಾದ ಮಾತುಗಳಿಗಾಗಿ ಹುಡುಕಾಡುವಾಗ, 8 ಮತ್ತು 9 ವಚನಗಳಿಗೆ ಸರಿಸಮಾನವಾಗಬಲ್ಲಂತಹ ವಾಕ್ಯಭಾಗಗಳು ಕೆಲವೇ ಕೆಲವು ಇರುತ್ತವೆ. ಹಾಗಾದರೆ

ಸಾಂಸ್ಕೃತಿಕ ಪರಿಗಣನೆಗಳಾಗಲಿ, ಇಷ್ಟೊಂದು ಶತಮಾನಗಳಿಂದ ಪಕ್ಕಕ್ಕೆ ಹೋಗಿರುವಿಕೆಯಾಗಲಿ, ಮತ್ತು ಇತ್ತೀಚಿನ ದೈವಶಾಸ್ತ್ರೀಕವಾದ ಗೀಳುಗಳಾಗಲಿ ಪೌಲನ ಮಾತುಗಳ ಶಕ್ತಿ ಹಾಗೂ ಅಂತಿಮತೆಯನ್ನು ಬದಲಾಯಿಸಲಾರವು. ಸುವಾರ್ತೆಯನ್ನು ಬದಲಾಯಿಸುವದೆಂದರೆ ಶಾಪಕ್ಕೊಳಗಾಗುವಿಕೆಯೇ ಆಗಿದೆ! ಈ ಉಪದೇಶವನ್ನು ಅಸಡ್ಡೆ ಮಾಡುವವರಿಗೆಲ್ಲಾ ವಿನಾಶವು ಕಾದಿರುತ್ತದೆ.

## ಮನುಷ್ಯರನ್ನಲದೆ, ದೇವರನ್ನೇ ಮೆಚ್ಚಿಸಬೇಕೆಂಬ ಪೌಲನ ಬಯಕೆ (1:10)

**10ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ? ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ? ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ.**

**ವಚನ 10.** ಪೌಲನು ತನ್ನ ವಿರೋಧಿಗಳಾದ ಯೆಹೂದಿಕರಣಗೊಳಿಸುವ ವ್ಯಕ್ತಿಗಳಿಂದ ವಿವಿಧ ಕೋನಗಳಲ್ಲಿ ಆಕ್ರಮಣಕ್ಕೆ ಗುರಿಯಾಗಿದ್ದನು. ಆತನು ಹೀಗೆ ಕೇಳಿದನು, **ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ? ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ?** ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಪೌಲನ ಮೇಲೆ ಆತನು ಧರ್ಮಶಾಸ್ತ್ರ ಪ್ರಾಮುಖ್ಯವಾದ ಅಂಶಗಳನ್ನು - ವಿಶೇಷವಾಗಿ ಅನ್ಯಜನರಿಗೆ ಅಸಹ್ಯ ಹುಟ್ಟಿಸುವಂಥ ಸಂಗತಿಗಳನ್ನು - ಕೈ ಬಿಟ್ಟು ತನ್ನ ಶ್ರೋತೃಗಳಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ಸುವಾರ್ತೆಯನ್ನು ರೂಪಿಸಿರುತ್ತಾನೆಂದು ಆರೋಪ ಮಾಡುತ್ತಿದ್ದರು. ಒಬ್ಬನು ತಮ್ಮೊಂದಿಗೆ - ಇಸ್ರಾಯೇಲಿನ ಪುರಾತನ ನಂಬಿಕೆಯ ಪ್ರತಿಪಾದಕರು - ಅನ್ಯೋನ್ಯತೆಯಲ್ಲಿ ಸೇರಿಸಿಕೊಳ್ಳಬೇಕಾದರೆ ಈ ಕಟ್ಟಳೆಗಳನ್ನು ಕೈಕೊಂಡು ನಡೆಯುವದು ಅತ್ಯಾವಶ್ಯಕವಾಗಿವೆ ಎಂದು ಯೆಹೂದಿಕರಣಗೊಳಿಸುವವರು ಭಾವಿಸಿಕೊಂಡಿದ್ದರು.

ಒಬ್ಬನು ಯೆಹೂದಿಕರಣಗೊಳಿಸುವವರ ಮನಃಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಇಸ್ರಾಯೇಲ್ಯರು ಪ್ರತ್ಯೇಕವಾದ ಒಡಂಬಡಿಕೆಯ ಜನಾಂಗವಾಗಿರಬೇಕೆಂದು ಎಲ್ಲಾ ಜನಾಂಗಗಳೊಳಗಿಂದ ಆರಿಸಿಕೊಳ್ಳಲ್ಪಟ್ಟಿದ್ದರೆಂಬುದನ್ನು ನೆನಪಿಟ್ಟುಕೊಳ್ಳತಕ್ಕದ್ದು (ವಿಮೋಚನಕಾಂಡ 19:5, 6). ಕೋರ್ನೇಲ್ಯನ ಮನೆಯವರು ಪರಿವರ್ತನೆಗೊಳ್ಳುವರೊಂದಿಗೆ ಆರಂಭಗೊಂಡು, ಅನ್ಯಜನರು ಸ್ವೀಕರಿಸಿಕೊಳ್ಳಲ್ಪಟ್ಟಿದ್ದು ಯೆರೂಸಲೇಮಿನಲ್ಲಿನ ಸಭೆಗೆ ಆಘಾತವುಂಟು ಮಾಡಿತ್ತು (ಅಪೊಸ್ತಲರ ಕೃತ್ಯಗಳು 11:1-3). ಈ ಘಟನೆಯೊಂದಿಗೆ ಸಂಬಂಧ ಹೊಂದಿರುವ ಪ್ರಕೃತಾತೀತವಾದ ವಿದ್ಯಾಮಾನದ ಹೊರತಾಗಿಯೂ, ಪೇತ್ರನು ಸ್ವತಃ ತನ್ನ ಪ್ರತಿವಾದ ಮಾಡುವದಕ್ಕೆ ಕಷ್ಟಪಟ್ಟನೆಂದು ತೋರುತ್ತದೆ: "ದೇವರನ್ನು ತಡೆಯುವದಕ್ಕೆ ನಾನು ಶಕ್ತನೋ?" (ಅಪೊಸ್ತಲರ ಕೃತ್ಯಗಳು 11:17). ಅಲ್ಲದೆ, ಸಭೆಯು ಪೇತ್ರನ ಸಾಕ್ಷಿಯನ್ನು ಅಂಗೀಕರಿಸಿಕೊಂಡಿದ್ದು ಮತ್ತು ಅದಕ್ಕೆ ಸ್ಪಷ್ಟವಾದ ಪ್ರಾಮುಖ್ಯತೆಯು ಕೊಡಲ್ಪಟ್ಟಿರುವದು ಒಲ್ಲದ ಮನಸ್ಸನಿಂದ ಎಂದು ಕಾಣಿಸುತ್ತದೆ; ಯಾಕೆಂದರೆ "ಹೀಗೆಂದ ಮಾತುಗಳನ್ನು ಆ ಸುನ್ನತಿಯವರು ಕೇಳಿ ಆಕ್ಷೇಪಣೆ ಮಾಡುವದನ್ನು ಬಿಟ್ಟು [ἡσυχάζω, *hēsuchazō*[16]] - ಹಾಗಾದರೆ ದೇವರು ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ ಎಂದು ದೇವರನ್ನು ಕೊಂಡಾಡಿದರು" (ಅಪೊಸ್ತಲರ ಕೃತ್ಯಗಳು 11:18).

ಸಭೆಯು ಅನ್ಯಜನರಿಗೆ ಸುವಾರ್ತೆಯು ಸಾರಲ್ಪಡುವದನ್ನು ತತ್ವದಲ್ಲಿ ಅಂಗೀಕರಿಸಿತ್ತಾದರೂ, ಆ ಸುವಾರ್ತಾ ಧ್ಯೇಯವು ಎಷ್ಟೊಂದು ಯಶಸ್ವಿಯಾಗುವದು ಎಂಬುದನ್ನು ಕಲ್ಪನೆ ಮಾಡಿಕೊಂಡಿರಲಿಲ್ಲ. ಅಷ್ಟುಮಾತ್ರವಲ್ಲದೆ, ಕೆಲವು ಯೆಹೂದಿ ಕ್ರೈಸ್ತರು

ಧರ್ಮಶಾಸ್ತ್ರದ ಕಟ್ಟಳೆಗಳಿಗೆ ವಿಧೇಯರಾಗುವ ಹೊರತಾಗಿ ಅನ್ಯಜನಾಂಗದ ವಿಶ್ವಾಸಿಗಳನ್ನು ಸಮಾನರೆಂದು ಅಂಗೀಕರಿಸಿಕೊಳ್ಳುವದನ್ನು ವಿರೋಧಿಸುತ್ತಲೇ ಬಂದರು. ಪೌಲನು ಸಂಬಂಧವನ್ನು ಹೊಂದಿದ್ದ ರೋಮನ್ ಸಾಮ್ರಾಜ್ಯದುದ್ದಕ್ಕೂ ಇರುವ ಎಲ್ಲಾ ಸಭೆಗಳಲ್ಲಿಯೂ ಇದೇ ಸಮಸ್ಯೆಯು ಇತ್ತು (2:11-14; 5:1-6; ರೋಮಾ 2:25-29; 3:19-31; ಫಿಲಿಪ್ಪಿ 3:1-3; ಕೊಲೊಸ್ಸೆ 2:8-17). ಯಾವ ಯೆರೂಸಲೇಮಿನಿಂತ ಅಪೊಸ್ತಲರ ಹಾಗೂ ಹಿರಿಯರ ಸಮಾಲೋಚನಾ ಸಭೆಯಲ್ಲಿ ಮಾಡಲ್ಪಟ್ಟ ಕಟ್ಟಪ್ಪಣೆಯು ಕ್ರಮೇಣದಲ್ಲಿ ಹೊರಟಿತ್ತೋ (ಅಪೊಸ್ತಲರ ಕೃತ್ಯಗಳು 15:22-29), ಆ ಯೆರೂಸಲೇಮಿನಲ್ಲಿ ಸಹ ಯೆಹೂದಿ ಕ್ರೈಸ್ತರು ಧರ್ಮಶಾಸ್ತ್ರಕ್ಕೆ ಸಮರ್ಪಿತರಾಗಿದ್ದರು ಮತ್ತು ಮುಂಬರುವ ಅನೇಕ ವರ್ಷಗಳ ಕಾಲ ಅನ್ಯಜನರೊಂದಿಗೆ ಅನ್ಯೋನ್ಯತೆಯಿಟ್ಟುಕೊಳ್ಳುವದನ್ನು ವಿರೋಧಿಸುತ್ತಾ ಬಂದರು (ಅಪೊಸ್ತಲರ ಕೃತ್ಯಗಳು 21:20-26).

ಪೌಲನು ಅನ್ಯಜನರಿಗೆ ಜಿಗುಪ್ಸೆ ತರುವ ಸುನ್ನತಿಯ ವಿಷಯವನ್ನು ಕೈ ಬಿಡುವ ಮೂಲಕ ಅನ್ಯಜನರ ಕಟಾಕ್ಷವನ್ನು ಗಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆಂದು ಆರೋಪಕ್ಕೆ ಒಳಗಾಗಿದ್ದನು.[17] ವಾಸ್ತವಿಕದಲ್ಲಿ, ಕ್ರೈಸ್ತೇತರ ಯೆಹೂದ್ಯರಿಂದಾಗುವ ಹಿಂಸೆಯಿಂದ ತಪ್ಪಿಸಿಕೊಳ್ಳುವದಕ್ಕೋಸ್ಕರ ಅವರ ದೃಷ್ಟಿಯಲ್ಲಿ ಕಟಾಕ್ಷವನ್ನು ಗಳಿಸಿಕೊಳ್ಳಲು ಪ್ರಯತ್ನಿಸುವವರು ಆತನ ಯೆಹೂದಿ ಕ್ರೈಸ್ತ ವಿರೋಧಿಗಳೇ ಆಗಿದ್ದರು. ಇದು 6:12ನೇ ವಚನದಿಂದ ಸ್ಪಷ್ಟವಾಗುತ್ತದೆ, ಅದು ಹೀಗೆ ಹೇಳುತ್ತದೆ, “ಬಹಿರಾಚಾರಗಳಿಂದ ಮಾನಪಡೆಯಬೇಕೆಂದಿರುವವರು ಸುನ್ನತಿಮಾಡಿಸಿಕೊಳ್ಳಿರಿ ಎಂಬದಾಗಿ ನಿಮ್ಮನ್ನು ಬಲಾತ್ಕರಿಸುತ್ತಾರೆ. ತಮಗೆ ಕ್ರಿಸ್ತನ ಶಿಲುಬೆಯ ದೆಸೆಯಿಂದ ಹಿಂಸೆಯಾಗಬಾರದೆಂಬದೊಂದೇ ಅವರ ಉದ್ದೇಶ.” (6:12, 13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.)

ಯೆಹೂದ್ಯರ ಮನಸ್ಸಿನ ಪ್ರಕಾರವಾದರೋ, ಸುನ್ನತಿ ಎಂಬುದು ಸ್ವತಃ “ಒಡಂಬಡಿಕೆಯ ಗುರುತು” ಆಗಿ ಪ್ರಾಮುಖ್ಯವಾಗಿತ್ತು - ಮೊದಲು ಅಬ್ರಹಾಮನೊಂದಿಗೆ, ಬಳಿಕ ಇಸ್ರಾಯೇಲ್ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆ (ಆದಿಕಾಂಡ 17:10, 11; ಯಾಜಕಕಾಂಡ 12:1-3; ಅಪೊಸ್ತಲರ ಕೃತ್ಯಗಳು 7:8). ಒಂದು ಧಾರ್ಮಿಕ ಆಚಾರದ, ಶಸ್ತ್ರಚಿಕಿತ್ಸೆಯ ಕಾರ್ಯಕ್ಕಿಂತ ಅಧಿಕವಾಗಿ, ಅದು ಮೋಶೆಯ ಧರ್ಮಶಾಸ್ತ್ರದೊಂದಿಗೆ ಇರುವ ಒಂದು ಅತ್ಯಾವಶ್ಯಕ ಸಂಬಂಧವಾಗಿರುತ್ತದೆ. ಆದದರಿಂದ, ಯೆಹೂದಿ ಕ್ರೈಸ್ತರಲ್ಲಿ ಅನೇಕರು ಅದನ್ನು ರಕ್ಷಣೆಗೋಸ್ಕರ ಅಗತ್ಯವಾದದ್ದೆಂದು ಕಂಡರು (ಅಪೊಸ್ತಲರ ಕೃತ್ಯಗಳು 15:1, 5). ಗಲಾತ್ಯದವರಿಗೆ ಬರೆದ ಪತ್ರಿಕೆಯೊಳಗೆ ಅನಂತರದಲ್ಲಿ, ಪೌಲನು ಈ ಅಭಿಪ್ರಾಯವನ್ನು ಅಲ್ಲಗಳೆಯುತ್ತಾನೆ (5:1-4).

ಅಪೊಸ್ತಲನು ತಾನೇ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಹೀಗೆ ಹೇಳಿದನು, **ನಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ? ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ.** ತಾನು ಮಾಡಿದ ಸೇವೆಯುದ್ದಕ್ಕೂ, ದೇವರ ಸೇವೆಯನ್ನೇ ಮಾಡಬೇಕೆಂಬುದಾಗಿ ಪೌಲನಿಗಿದ್ದ ಗುರಿಯ ಫಲಿತವಾಗಿ ಕ್ರಿಸ್ತನು ಹಾಗೂ ಸಭೆಯೊಂದಿಗೆ ಹಗೆತನವುಳ್ಳವರ ಸಂಗಡ ಅನೇಕ ಸಂಘರ್ಷಗಳನ್ನು ಅನುಭವಿಸಬೇಕಾಗಿತ್ತು. ಆತನು “ಕ್ರಿಸ್ತನ ದಾಸನಾಗಿ” ಇಲ್ಲದೆ ಹೋಗಿದ್ದರೆ (ನೋಡಿರಿ ರೋಮಾ 1:1; ಫಿಲಿಪ್ಪಿ 1:1) ಅನೇಕ ಹಿಂಸೆಗಳಿಂದ ಮತ್ತು ಕಠಿಣ ಪರಿಸ್ಥಿತಿಗಳನ್ನು ಅನುಭವಿಸುವದರಿಂದ ತಪ್ಪಿಸಿಕೊಳ್ಳಬಹುದಿತ್ತು (ನೋಡಿರಿ 2 ಕೊರಿಂಥ 11:23-28). “ದಾಸನು” ಎಂಬುದಕ್ಕೆ ಗ್ರೀಕ್ ಪದವು δοῦλος (*doulos*) ಎಂದಾಗಿದ್ದು, ಅದರ ಅಕ್ಷರಶಃ ಅರ್ಥವು “ಗುಲಾಮ” ಎಂದಾಗಿರುತ್ತದೆ. ಈ ಪದವು ಪೌಲನು ಕ್ರಿಸ್ತನಿಗೆ ಹೊಂದಿದ್ದ ಅಚಲವಾದ ನಿಷ್ಠೆಯನ್ನು ಎತ್ತಿ

ತೋರಿಸುತ್ತದೆ.

ಪೌಲನ ಉತ್ತರದಲ್ಲಿದ್ದ "ಇನ್ನೂ" (ἔτι, *eti*) ಎಂಬ ಪದವು ಸೂಚಿಸುವದೇನೆಂದರೆ, ಆತನು ಪರಿವರ್ತನೆಗೊಳ್ಳುವ ಮುಂಚೆ, ಆತನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸಿದ್ದನು - ಆದರೆ ಇನ್ನು ಮೇಲೆ ಆತನು ಹಾಗೆ ಮಾಡುವವನಾಗಿರಲಿಲ್ಲ ಎಂಬುದೆ.[18] ಈ ಯೋಚನೆಯು ಪೌಲನು ಒಬ್ಬ ಕ್ರೈಸ್ತನಾಗುವ ಮುಂಚೆಯ ಕುರಿತು ತಿಳಿಸುವ ಇತರ ವಾಕ್ಯಭಾಗಗಳೊಂದಿಗೆ ಹೇಗೆ ಸಂಬಂಧ ಹೊಂದಿರುತ್ತದೆ?

ಒಂದಕ್ಕಿಂತಲೂ ಅಧಿಕ ಸಂದರ್ಭಗಳಲ್ಲಿ, ಕ್ರೈಸ್ತರನ್ನು ಹಿಂಸಿಸುತ್ತಿದ್ದ ವೇಳೆಯಲ್ಲಿ ಸಹ, ಅಪೊಸ್ತಲನು ದೇವರ ಕಡೆಗೆ ಒಳ್ಳೇ ಮನಸ್ಸಾಕ್ಷಿಯನ್ನು ಹೊಂದಿದ್ದೆನು ಎಂದು ಘೋಷಿಸುತ್ತಾನೆ (ಅಪೊಸ್ತಲರ ಕೃತ್ಯಗಳು 23:1; 26:9). ಹೇಗೂ, ಆ ಸಂದರ್ಭದಲ್ಲಿ ಆತನ ಮನಸ್ಸಾಕ್ಷಿಯು ಆತನ ಕೆಲವೊಂದು ಚಟುವಟಿಕೆಗಳ ವಿಷಯದಲ್ಲಿ ಹೋರಾಟ ಅನುಭವಿಸುವದಕ್ಕೆ ಆರಂಭಿಸಿತ್ತೋ ಎಂದು ಒಬ್ಬನು ಚಕಿತಗೊಳ್ಳಬಹುದು. ಅಂಥ ಪ್ರಶ್ನೆಯು ಪೌಲನ ಸ್ವಾಭಾವಿಕವಾದ ಪ್ರಕೃತಿಯನ್ನು ಒಳಗೊಂಡಿರುತ್ತದೆ. ಒಬ್ಬನು ಆತನ ಬಲವಾದ ಮನವರಿಕೆಗಳನ್ನು ಮತ್ತು ಸಮರ್ಪಿತವಾದ ವೈರಾಗ್ಯವನ್ನು ಪ್ರಶ್ನಿಸಲು ಸಾಧ್ಯವಿಲ್ಲವಾದರೂ, ಪೌಲನ ಬರಹಗಳಲ್ಲಿ ಆತನಿಗೆ ಕೋಮಲದಿಂದ ಹಾಗೂ ಕನಿಕರದಿಂದ ನಡೆದುಕೊಳ್ಳುವ ಬಹಳ ಸಾಮರ್ಥ್ಯವು ಇರುತ್ತದೆಂಬುದನ್ನು ಗ್ರಹಿಸಿಕೊಳ್ಳುವದಕ್ಕೆ ಆತನು ವಿಫಲನಾಗಲೂ ಸಾಧ್ಯವಿಲ್ಲ (4:19, 20; 1 ಥೆಸಲೋನಿಕ 2:7, 8). ಬಹುಶಃ, ಈ ಸಮಯದ ವೇಳೆ, ಪೌಲನು ಬೇರೆಯವರು ಶ್ರಮೆಗಳಿಗೆ ಗುರಿಯಾಗುತ್ತಿರುವದನ್ನು ಕಣ್ಣಾರೆ ನೋಡುತ್ತಿರುವ ವೇಳೆ - ವಿಶೇಷವಾಗಿ ತಾನು ಸ್ವತಃ ಅವರಿಗೆ ನೋವು ಹಾಗೂ ಪೀಡೆಯನ್ನು ಉಂಟು ಮಾಡುತ್ತಿದ್ದರೂ ತಮ್ಮ ನಂಬಿಕೆಯಲ್ಲಿ ದೃಢವಾಗಿ ನಿಂತುಕೊಂಡವರನ್ನು ನೋಡುವ ವೇಳೆ - ತನ್ನಲ್ಲಿ ಬಾಧೆ ಪಡುವದಕ್ಕೆ ಆರಂಭಿಸಿರಬಹುದಾಗಿದೆ. ವಿಶೇಷವಾಗಿ ಸ್ತೇಫನನಿಗೆ ಕಲ್ಲೇಸುವ ಪ್ರಕರಣದಲ್ಲಿ ಇದು ಸತ್ಯವಾಗಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 6:8-8:1), ಆತನು ಮಾಡಿದ್ದ ವಾದಗಳು ಪೌಲನ ಮನಸ್ಸಿನಲ್ಲಿ ಮರುಕಳಿಸುತ್ತಲೇ ಇದ್ದಿರಬಹುದಾಗಿದೆ. ಬಹುಶಃ ಆತನೊಳಗೆ ನಡೆಯುತ್ತಿದ್ದ ಈ ಸಂಘರ್ಷವೇ ದಮಸ್ಕದ ದಾರಿಯಲ್ಲಿ ಯೇಸುವು ಪೌಲನಿಗೆ (ಸೌಲ ಎಂದು ಸಹ ಪರಿಚಿತನು) ನುಡಿದ ಮಾತುಗಳಿಗೆ ಹಿನ್ನಲೆಯನ್ನು ಒದಗಿಸರಬಹುದಾಗಿದೆ: "ಮುಳ್ಳುಗೋಲನ್ನು ಒದೆಯುವದು ನಿನಗೆ ಕಷ್ಟ" (ಅಪೊಸ್ತಲರ ಕೃತ್ಯಗಳು 26:14).

ಪೌಲನು ನಿಸ್ಸಂಶಯವಾಗಿಯೂ ತಾನು ದೇವರ ಸೇವೆಯನ್ನೇ ಮಾಡುತ್ತಿದ್ದೇನೆಂದು ಭಾವಿಸಿಕೊಂಡಿದ್ದನಾದರೂ, ಬಹುಶಃ ಆತನಿಗೆ ಅವನ ಸಮಕಾಲೀನರಿಂದ ಸಿಕ್ಕುತ್ತಿದ್ದ ಮೆಚ್ಚುಗೆಯು ಭಾಗಶಃ ಸ್ಫೂರ್ತಿಯಾಗಿರಬಹುದಾಗಿದೆ. ಬೇರೆಯವರಿಗಿಂತ ಭಿನ್ನವಾಗಿ ಕಾಣಿಸಿಕೊಳ್ಳಬೇಕೆಂಬ ಬಯಕೆಯು ಸಹ ಯೌವನಸ್ಥನಾದ ಪೌಲನ ಕುರಿತಾದ ಹೊಸ ಒಡಂಬಡಿಕೆಯು ನೀಡುವ ಬಣ್ಣನೆಗಳಿಗೆ ಸೂಕ್ತವಾಗಿ ಹೊಂದಿಕೊಳ್ಳುತ್ತದೆ. ಆತನು ಒಂದು ಉತ್ತಮ ಕುಟುಂಬದಲ್ಲಿ ಒಬ್ಬ ಸ್ವತಂತ್ರನಾಗಿ ಹುಟ್ಟಿದ ರೋಮನ್ ಪೌರನು ಮಾತ್ರವಲ್ಲದೆ ಒಬ್ಬ ಪ್ರಖ್ಯಾತ ರಬ್ಬಿಯ (ಗಮಲಿಯೇಲ) ಕೈಕೆಳಗೆ ಓದುತ್ತಿದ್ದ ಒಬ್ಬ ತಾರಾ ವಿದ್ಯಾರ್ಥಿಯಾಗಿದ್ದನು, ತನ್ನ ಸಮಪ್ರಾಯದವರೊಳಗೆ ಎಲ್ಲರಿಗಿಂತ ಉತ್ತಮವಾಗಿ ಸಾಧನೆ ಮಾಡುವವನಾಗಿದ್ದನು (1:14; ಅಪೊಸ್ತಲರ ಕೃತ್ಯಗಳು 22:3, 27, 28). ಕ್ರೈಸ್ತರನ್ನು ಹುಡುಕಿ ಕಂಡು ಹಿಡಿದು ಅವರನ್ನು ಹಿಂಸಿಸುವದಕ್ಕೆ ಅಧಿಕಾರದ ಪತ್ರವನ್ನು ಕೊಡಬೇಕೆಂದು ಆತನ ಸ್ವಯಂಪ್ರೇರಿತನಾಗಿಯೇ ಮುಂದಾಗಿದ್ದನು (ಅಪೊಸ್ತಲರ ಕೃತ್ಯಗಳು 9:1, 2). ಬಹುಶಃ ಆತನು ಯೆಹೂದಿಮತದೊಳಗೆ

ನಂಬಿಕೆಯನ್ನು ಕಾಪಾಡುವದಕ್ಕೆ ಹೋರಾಡುವ ಒಬ್ಬ ಶ್ರೇಷ್ಠ ಹೋರಾಟಗಾರನೆಂದು ಪರಿಚಿತನಾಗಬೇಕೆಂದು ಬಯಸಿರಬಹುದು.

## ಪೌಲನಿಗಾದ ದೈವಿಕ ಕರೆ ಹಾಗೂ ಆರಂಭಿಕ ಸೇವೆ (1:11-24)

1:11–2:21ರಲ್ಲಿ ಕಥನದಲ್ಲಿ, ಪೌಲನು ತನ್ನ ಅಪೊಸ್ತಲತ್ವವನ್ನು ಹಾಗೂ ತಾನು ಸಾರಿದ ಸುವಾರ್ತೆಯ ಪರವಾಗಿ ಪ್ರತಿವಾದವನ್ನು ಮಾಡಿದನು. ಆತನು ಗಲಾತ್ಯದವರಿಗೆ ಮೂಲತಃ ಸಾರಿದ ಸಂದೇಶವು ಮನುಷ್ಯರಿಂದ ಬಂದದ್ದಲ್ಲ, ಆದರೆ ದೇವರಿಂದಲೇ ಬಂದದ್ದೆಂಬುದನ್ನು ಸ್ಥಾಪಿಸುವದೇ ಆತನ ಉದ್ದೇಶವಾಗಿತ್ತು. ವಿಭಾಗದ ಮೊದಲ ಭಾಗವಾದ 1:11–24ರಲ್ಲಿ, ಪೌಲನಿಗೆ ಉಂಟಾದ ದೈವಿಕ ಕರೆ ಹಾಗೂ ಆತನು ಆರಂಭಿಕ ವರ್ಷಗಳಲ್ಲಿ ಮಾಡಿದ ಸೇವೆಯ ವಿವರವಿರುತ್ತದೆ.

### ಪ್ರಕಟನೆಯ ಮೂಲಕ ಸ್ವೀಕರಿಸಿಕೊಂಡ ಸುವಾರ್ತೆ (1:11, 12)

**[11]ಸಹೋದರರರೇ, ನಾನು ಸಾರಿದ ಸುವಾರ್ತೆಯಂತೂ ಮನುಷ್ಯ ಕಲ್ಪನೆಯಲ್ಲವೆಂದು ನಿಮಗೆ ತಿಳಿಯಪಡಿಸುತ್ತೇನೆ. [12]ನಾನು ಅದನ್ನು ಮನುಷ್ಯನಿಂದ ಹೊಂದಲಿಲ್ಲ, ನನಗೆ ಯಾರೂ ಉಪದೇಶಿಸಲಿಲ್ಲ, ಯೇಸು ಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು.**

**ವಚನ 11.** ಪೌಲನು ತನ್ನ ಪತ್ರಿಕೆಯ ಹೊಸ ವಿಭಾಗವನ್ನು ಒಂದು ಪರಿಯಾತ್ಮಕ ಪರಿಚ್ಛೇದದೊಂದಿಗೆ ಆರಂಭಿಸುತ್ತಾನೆ: **ಸಹೋದರರೇ, ನಾನು . . . ನಿಮಗೆ ತಿಳಿಯಪಡಿಸುತ್ತೇನೆ.** *γάρ* (*gar,* "ಯಾಕೆಂದರೆ") ಎಂಬುದಕ್ಕೆ ಬದಲಾಗಿ, ಗ್ರೀಕ್ ಭಾಷೆಯ ಹಲವಾರು ಹಸ್ತಪ್ರತಿಗಳಲ್ಲಿ *δέ* (*de*, "ಮತ್ತು" ಅಥವಾ "ಆದರೆ") ಎಂದಿರುತ್ತದೆ. ಆ ವಾಚನದ ಆಧಾರದಲ್ಲಿ, NKJVಯು ಈ ತರ್ಜುಮೆಯನ್ನು ಒದಗಿಸುತ್ತದೆ: NASB ತರ್ಜುಮೆಯಲ್ಲಿರುವ "ಆದರೆ ಸಹೋದರರರೇ ನಾನು ನಿಮಗೆ ತಿಳಿದಿರಬೇಕೆಂದು ಬಯಸುತ್ತೇನೆ." "ನಾನು ನಿಮಗೆ ತಿಳಿಯಪಡಿಸುತ್ತೇನೆ" ಎಂಬುದಕ್ಕಿಂತಲೂ "ನಾನು ತಿಳಿಸುತ್ತೇನೆ" ಎಂಬುದು *γνωρίζω* (*gnōrizō*) ಎಂಬುದರ ಹೆಚ್ಚು ಅಕ್ಷರಶಃ ಅನುವಾದವಾಗುತ್ತದೆ. ಪತ್ರಿಕೆಯಲ್ಲಿ ಒಂದು ಹೊಸ ವಿಭಾಗ ಅಥವಾ ಉಪವಿಭಾಗವದ ಆರಂಭವನ್ನು ಸೂಚಿಸುವದಕ್ಕಾಗಿ **"ಸಹೋದರರೇ"** ಎಂಬ ಪದವು ಅನೇಕ ಸಾರಿ ಬಳಸಲ್ಪಟ್ಟಿರುತ್ತದೆ (1:11; 3:15; 4:12, 31; 5:11, 13; 6:1, 18).

ಅಪೊಸ್ತಲನು ತಾನು **ಸಾರಿದ ಸುವಾರ್ತೆಯಂತೂ ಮನುಷ್ಯ ಕಲ್ಪನೆಯಲ್ಲವೆಂದು** ತನ್ನ ವಾಚಕರಿಗೆ ತಿಳಿಯಪಡಿಸುತ್ತಿದ್ದಾನೆ. "ಕಲ್ಪನೆ" ಎಂಬುದು *κατά* (*kata*) ಎಂಬ ಉಪಸರ್ಗದ ಅಕ್ಷರಶಃ ಭಾವಾನುವಾದವಾಗಿರುತ್ತದೆ. NIV1984 ತರ್ಜುಮೆಯು ಪದಗುಚ್ಛವನ್ನು "ಮನುಷ್ಯ ಕಲ್ಪನೆಯಲ್ಲ" ಎಂಬ ಶಕ್ತಿಶಾಲಿ ತರ್ಜುಮೆಗೆ ಸಮಾನವಾಗಿ "ಮನುಷ್ಯರ ಪ್ರಕಾರವಾದದ್ದಲ್ಲ" ಎಂದು ಅನುವಾದಿಸುತ್ತದೆ. ಈ ಅನುವಾದವು ಯೋಚನೆಯ ತಿರುಳನ್ನು ಸೆರೆ ಹಿಡಿಯುತ್ತದೆ. ಪೌಲನಿಂದ ಹಾಗೂ ಆತನ ಜೊತೆಗೆಲಸದರವರಿಂದ ಸಾರಲ್ಪಟ್ಟ ಸುವಾರ್ತೆಯು ಮನುಷ್ಯರಿಂದ ಹೊರಟು ಬಂದಂಥದ್ದಾಗಿರಲಿಲ್ಲ. ಅದು ಮನುಷ್ಯನ ಚಾತುರ್ಯದ ವ್ಯಾಪ್ತಿ ಹಾಗೂ ಮಟ್ಟವನ್ನು ಮೀರಿದ್ದಾಗಿತ್ತು.[19]

ಪೌಲನ ಉದ್ದೇಶವು ತಾನು ಸಾರಿದ ಸುವಾರ್ತೆಯು ಯಾವದೇ ಮನುಷ್ಯ ಮಧ್ಯವರ್ತಿಯಿಂದ ಬಂದದ್ದಾಗಿರಲಿಲ್ಲ ಎಂಬುದನ್ನು ಹೇಳುವದಷ್ಟೆ ಆಗಿತ್ತು. ಅದು ಯಾವ ವಿಧದಲ್ಲಿಯೂ ಇತರ ಅಪೊಸ್ತಲರ ಮೇಲೆ ಅವಲಂಭಿತವಾಗಿರಲಿಲ್ಲ (ಮತ್ತು ಆ ಕಾರಣದಿಂದ ಅವರು ಸಾರಿದ ಸುವಾರ್ತೆಗೆ ಕಡಿಮೆಯಾದದ್ದಾಗಲಿ ಅಥವಾ ಹೆಚ್ಚಿನದ್ದಾಗಲಿ ಆಗಿರಲಿಲ್ಲ).

**ವಚನ 12.** ಈ ಸುವಾರ್ತೆಯ ಕುರಿತು ಈಗ ಹಲವಾರು ಸತ್ಯಗಳು ದೃಢಪಡಿಸಲ್ಪಟ್ಟಿರುತ್ತವೆ. ಪೌಲನು ಈ ಸುವಾರ್ತೆಯನ್ನು ಮನುಷ್ಯನಿಂದ ಹೊಂದಲಿಲ್ಲ. "ಹೊಂದಲಿಲ್ಲ" ಎಂಬುದು παραλαμβάνω (*paralambanō*) ಎಂಬ ಕ್ರಿಯಾಪದದಿಂದ ಬರುತ್ತದೆ, ಅದು ಅನೇಕ ಸಾರಿ ಮೌಖಿಕವಾಗಿ ಬಂದ ಸಂಪ್ರದಾಯವನ್ನು ಸೂಚಿಸುತ್ತದೆ.[20] ಸಂದೇಶವು ಆತನಿಗೆ ಮನುಷ್ಯನಿಂದ ಬೋಧಿಸಲ್ಪಟ್ಟಿರಲಿಲ್ಲ.

ಎರಡನೆಯದಾಗಿ, ಪೌಲನಿಗೆ ಆ ಸುವಾರ್ತೆಯನ್ನು ಯಾರೂ **ಉಪದೇಶಿಸಲಿಲ್ಲ.** "ಉಪದೇಶ" ಎಂಬುದು διδάσκω (*didaskō*) ಎಂಬ ಕ್ರಿಯಾಪದದಿಂದ ಬಂದದ್ದಾಗಿದ್ದು, ಅದು ಅನೌಪಚಾರಿಕ ಉಪದೇಶವನ್ನು ಮಾತ್ರವಲ್ಲದೆ ಔಪಚಾರಿಕವಾದ ಉಪದೇಶವನ್ನು ಸಹ ("ಒಂದು ತರಗತಿಯ ಕೋಣೆಯಲ್ಲಿ ಅಥವಾ ಒಬ್ಬ ನುರಿತ ಶಿಕ್ಷಣನ ಪಾದಗಳ ಬಳಿಯಲ್ಲಿ ಕುಳಿತು ಕಲಿಯುವ"[21] ರೀತಿಯಲ್ಲಿ). ಆತನು ಅದನ್ನು ಪಡೆದುಕೊಂಡು ರೀತಿಯು ಮಾನವ ಸಂವಹನ ಪ್ರಕ್ರಿಯೆಯ ಒಂದು ಸಾಮಾನ್ಯವಾದ ಶಿಕ್ಷಣಾತ್ಮಕ ಶೈಲಿಯಲ್ಲಿ ಆಗಿರಲಿಲ್ಲ.

ಮೂರನೆಯದಾಗಿ, ಪೌಲನಿಗೆ ಸಂದೇಶವನ್ನು **ಯೇಸು ಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು.** "ಪ್ರಕಟಿಸಿದನು" (ἀποκάλυψις, *apokalupsis*) ಎಂಬ ಪದವು ಒಂದು ದೈವಿಕವಾಗಿ ಅನಾವರಣ ಮಾಡಲ್ಪಡುವಿಕೆಯನ್ನು ಸೂಚಿಸುತ್ತದೆ. ಆತನು ಸುವಾರ್ತೆಯನ್ನು ಒಂದು ಪ್ರೇರಿತ ಪ್ರವಾದನಾತ್ಮಕ ಸಂವಹನ ಸಾಧನದ ಮೂಲಕವಾಗಿ ಪಡೆದುಕೊಂಡಿದ್ದನು. ದೇವರಿಂದ ಅಂಥ ಸಂದೇಶವನ್ನು ಸ್ವೀಕರಿಸಿಕೊಂಡವರ ಉದಾಹರಣೆಗಳು ಹಳೆಯ ಒಡಂಬಡಿಕೆಯಲ್ಲಿ ಮಾತ್ರವಲ್ಲದೆ ಹೊಸ ಒಡಂಬಡಿಕೆಯಲ್ಲಿಯೂ ಸಿಕ್ಕುತ್ತವೆ.

"ಯೇಸು ಕ್ರಿಸ್ತನೇ" ಎಂಬ ಪದಗುಚ್ಛವು ದೇವರಿಂದ ದೊರೆತ ಪ್ರಕಟನೆಯಲ್ಲಿದ್ದ ತಿರುಳು (ಅಥವಾ ಲಕ್ಷ್ಯವು) ಯೇಸುವೇ ಆಗಿದ್ದನೆಂಬುದನ್ನು ಸೂಚ್ಯಾರ್ಥವಾಗಿ ತಿಳಿಸುತ್ತದೆ. ಇನ್ನೊಂದು ಸಂಭಾವ್ಯವಾದ ಅನುವಾದವೆಂದರೆ "ಯೇಸು ಕ್ರಿಸ್ತನಿಂದಲೇ" ಎಂಬುದು, ಇದು ಪ್ರಕಟನೆಯ ಮೂಲ (ಅಥವಾ ವಿಷಯ) ಆತನೇ ಆಗಿದ್ದನೆಂಬುದನ್ನು ಸೂಚಿಸುತ್ತದೆ. NIV ಹೀಗೆ ಹೇಳುತ್ತದೆ, "ನಾನು ಅದನ್ನು ಯಾವದೇ ಮನುಷ್ಯನಿಂದ ಹೊಂದಲಿಲ್ಲ. ಇಲ್ಲವೆ ನನಗೆ ಯಾರೂ ಉಪದೇಶಿಸಲಿಲ್ಲ. ಆದರೆ ಯೇಸು ಕ್ರಿಸ್ತನಿಂದಲೇ ಅದು ನನಗೆ ಪ್ರಕಟವಾಯಿತು" (ನೋಡಿರಿ NCV; CEV; NLT).

ಈ ಸನ್ನಿವೇಶದಲ್ಲಿ ಯಾವ ದೈವಿಕ "ಪ್ರಕಟನೆ" ಕುರಿತು ಉಲ್ಲೇಖಿಸುತ್ತಿದ್ದಾನೆ? ಅದು ದಮಸ್ಕಕ್ಕೆ ಹೋಗುವ ದಾರಿಯಲ್ಲಿ ಪುನರುತ್ಥಾನಗೊಂಡ ಕರ್ತನು ಪ್ರತ್ಯಕ್ಷವಾದದ್ದು ಆಗಿತ್ತೋ (ಅಪೊಸ್ತಲರ ಕೃತ್ಯಗಳು 9:3-6)? ಅದು ಆತನು ದೀಕ್ಷಾಸ್ನಾನ ಮಾಡಿಕೊಂಡ ಕೂಡಲೆ ನಡೆದ ಸಂಗತಿಯೋ, "ನಿನಗೆ ಕಣ್ಣುಕಾಣುವಂತೆಯೂ ನೀನು ಪವಿತ್ರಾತ್ಮಭರಿತನಾಗುವಂತೆಯೂ" ಎಂಬ ಈ ಅನನೀಯನ ಮಾತುಗಳಿಂದ ಊಹಿಸಿಕೊಳ್ಳಬಹುದಾದ ಪ್ರಕಾರವೋ (ಅಪೊಸ್ತಲರ ಕೃತ್ಯಗಳು 9:17)? ಅದಾದ ಸ್ವಲ್ಪ ಸಮಯದಲ್ಲಿಯೇ, ಆತನು "ಸಭಾಮಂದಿರಗಳಲ್ಲಿ ಯೇಸುವಿನ ವಿಷಯವಾಗಿ ಆತನೇ ದೇವಕುಮಾರನೆಂದು ಸಾರುವದಕ್ಕೆ ಪ್ರಾರಂಭಮಾಡಿದನು" (ಅಪೊಸ್ತಲರ ಕೃತ್ಯಗಳು 9:20). ವಾಕ್ಯಭಾಗವು "ಸೌಲನು ಇನ್ನೂ ಅಧಿಕ ಸಾಮರ್ಥ್ಯವುಳ್ಳವನಾಗಿ ಯೇಸುವೇ ಕ್ರಿಸ್ತನೆಂದು ಸಿದ್ಧಾಂತಪಡಿಸಿ ದಮಸ್ಕದಲ್ಲಿದ್ದ ಯೆಹೂದ್ಯರನ್ನು ಉತ್ತರವಿಲ್ಲದವರಾಗ ಮಾಡಿದನು" ಎಂದು ಸಹ ಹೇಳುತ್ತದೆ (ಅಪೊಸ್ತಲರ ಕೃತ್ಯಗಳು 9:22).

"ಪವಿತ್ರಾತ್ಮಭರಿತ"ವಾಗುವದು (ಅಪೊಸ್ತಲರ ಕೃತ್ಯಗಳು 9:17) ಎಂಬಂತಹ ಮಾತು ಶಾಸ್ತ್ರದಲ್ಲಿ ಯಾವಾಗಲೂ, ವಿಶೇಷವಾಗಿ ಲೂಕನ ಬರಹಗಳಲ್ಲಿ ಒಂದೇ ಅರ್ಥವನ್ನು

ಕೊಡುವದಿಲ್ಲ. ತತ್ಪರಿಣಾಮವಾಗಿ, ಅಪೊಸ್ತಲರ ಕೃತ್ಯಗಳು 9:20ರ ವಿಷಯದಲ್ಲಿ ಹಲವಾರು ಪ್ರಶ್ನೆಗಳು ಉದ್ಭವವಾಗಬಲ್ಲವು. ಪೌಲನು ತಕ್ಷಣವೇ ಪ್ರವಾದನಾತ್ಮಕವಾಗಿ ಮಾತಾಡುವಂತೆ, ಅಂದರೆ ಪ್ರೇರಣೆಯಿಂದ ಮಾತಾಡುವಂತೆ ನಡಿಸಲ್ಪಟ್ಟನೋ? ಆತನು "ಇನ್ನೂ ಅಧಿಕ ಸಾಮರ್ಥ್ಯವುಳ್ಳವನಾಗಿ" ಮರ್ಪಟ್ಟದ್ದು ಆತನ ಪ್ರವಾದನಾತ್ಮಕ ಸಾಮರ್ಥ್ಯವು ಬೆಳಯುತ್ತಲೇ ಹೋಗುವಂತೆ ಮಾಡಿದ ನಿರಂತರವಾದ ಪ್ರಕ್ರಿಯೆಯ ಆರಂಭವನ್ನು ಅಪೊಸ್ತಲರ ಕೃತ್ಯಗಳು 9:22 ಸೂಚಿಸುತ್ತದೋ? ಹಾಗಿರುವದಾದಲ್ಲಿ, ಆತನು ಅರಬಿಯದಲ್ಲಿ ಕಾಲವನ್ನು ಕಳೆದ ವೇಳೆ (1:17) ಈ ಸಾಮರ್ಥ್ಯವು ತನ್ನ ಪೂರ್ಣ-ಬೆಳೆದ ಪಕ್ವತೆಯನ್ನು ತಲುಪಿತ್ತೋ?

ಅಂಥ ಪ್ರಶ್ನೆಗಳಿಗೆ ನಿಶ್ಚಯತ್ವದೊಡನೆ ಉತ್ತರಿಸುವದು ಅಸಾಧ್ಯಾಗಿರುತ್ತದೆ, ಮತ್ತು ಅವುಗಳ ವಿಷಯದಲ್ಲಿ ಊಹಾಪೋಹಗಳನ್ನು ಮಾಡಿಕೊಳ್ಳುವದರಿಂದಂತೂ ಏನೂ ಪ್ರಯೋಜನವಾಗುವದಿಲ್ಲ. ಕರ್ತನು ಪೌಲನಿಗೆ ಕಾಣಿಸಿಕೊಳ್ಳುತ್ತಲೇ ಇದ್ದನು, ಕೆಲವೊಂದು ಪರಿಸ್ಥಿತಿಗಳನ್ನು ಹೇಗೆ ನಿಭಾಯಿಸಬೇಕೆಂಬ ವಿಷಯದಲ್ಲಿ ಆತನಿಗೆ ನಿರ್ದಿಷ್ಟವಾದ ಮಾಹಿತಿ ಅಥವಾ ಉಪದೇಶವನ್ನು ಕೊಡುತ್ತಿದ್ದನು ಎಂಬುದನ್ನು ಶಾಸ್ತ್ರಗಳು ಸೂಚಿಸುತ್ತವೆ (ಅಪೊಸ್ತಲರ ಕೃತ್ಯಗಳು 18:9, 10; 23:11; 2 ಕೊರಿಂಥ 12:9; ನೋಡಿರಿ ಅಪೊಸ್ತಲರ ಕೃತ್ಯಗಳು 16:9; 27:23, 24).

ಪೌಲನು ಸುವಾರ್ತೆಯನ್ನು ಯಾವಾಗ, ಎಲ್ಲಿ, ಹೇಗೆ, ಮತ್ತು ಎಷ್ಟು ಕಂತುಗಳ ರೂಪದಲ್ಲಿ ಪಡೆದುಕೊಂಡನು ಎಂಬುದು ಏಕೆ ಮುಖ್ಯವಾಗಿರುತ್ತದೆ? ಮುಖ್ಯವಾಗಿರುವದೆಲ್ಲಾ ಇಷ್ಟೇ - ಮತ್ತು ವಾಕ್ಯಭಾಗವು ನಮಗೆ ಸ್ಪಷ್ಟತೆಯೊಂದಿಗೆ ಹೇಳುವಂಥದ್ದು ಇಷ್ಟೇ - ಏನೆಂದರೆ ಆತನು "ಯೇಸು ಕ್ರಿಸ್ತನೇ [ಅದನ್ನು] ಪ್ರಕಟಿಸಿದ" ಮೂಲಕವಾಗಿ ಪಡೆದುಕೊಂಡಿದ್ದನು. ಒಬ್ಬನು ಇದನ್ನು ಒಂದೇ ಸಾರಿ, ಥಕ್ಕನೆ ಇಡೀ ಸುವಾರ್ತೆಯು ಪ್ರಕಟಗೊಳಿಸಲ್ಪಟ್ಟಿತು ಎಂಬುದಾಗಿ ಯೋಚಿಸುವ ಶೋಧನೆಗೊಳಗಾಗಬಹುದು. ಹೇಗೂ, ಗ್ರೀಕ್ ವಾಕ್ಯದಲ್ಲಿ ಯಾವದೇ ಅನಿರ್ದಿಷ್ಟ ಗುಣವಾಚಿಯು ("ಒಂದು") ಇಲ್ಲವಾದ್ದರಿಂದ, ಒಬ್ಬನು ಈ ವ್ಯಾಕರಣ ಅಂಶದ ಮೇಲೆ ಒಂದು ಪ್ರಕರಣವನ್ನು ರಚಿಸುವದಕ್ಕೆ ಪ್ರಯತ್ನಿಸಕೂಡದು. ಬಹುಶಃ ನಾವು ಆ ಪದಗುಚ್ಛವನ್ನು ಗುಣವಾಚಿಯಿಲ್ಲದೆಯೇ ಅನುವಾದಿಸಬೇಕಾಗಿರುತ್ತದೆ: "ಯೇಸು ಕ್ರಿಸ್ತನ ಪ್ರಕಟನೆಯಿಂದ." ಆಂಗ್ಲದಲ್ಲಿ ಇದು ಸ್ವಲ್ಪ ವಿಚಿತ್ರವಾಗಿ ಕಾಣಿಸಬಹುದಾದರೂ, ಇದು ಪೌಲನು ಒತ್ತಿ ಹೇಳುತ್ತಿರುವ ಪ್ರಮುಖ ಅಂಶವನ್ನಂತೂ ಮುಂದಿಡುತ್ತದೆ: ಆತನು ಸುವಾರ್ತೆಯ ಸಂದೇಶವನ್ನು ಮನುಷ್ಯರಿಂದ ಪಡೆದುಕೊಂಡಿರಲಿಲ್ಲ, ಆದರೆ ಯೇಸುನಿಂದ ಬಂದ ದೈವಿಕ ಪ್ರಕಟನೆಯಿಂದಲೇ ಆಗಿತ್ತು.

## ಸುವಾರ್ತೆಗಿರುವ ರೂಪಾಂತರಕಾರಿ ಶಕ್ತಿ: ಹಿಂಸಕನಾಗಿದ್ದವನು ಬೋಧಕನಾಗಿದ್ದು (1:13-17)

**13ಹಿಂದೆ ನಾನು ಯೆಹೂದ್ಯಮತದಲ್ಲಿದ್ದಾಗ ನನ್ನ ನಡತೆ ಎಂಥದೆಂದು ನೀವು ಕೇಳಿದ್ದೀರಷ್ಟೆ. ನಾನು ದೇವರ ಸಭೆಯನ್ನು ಅತ್ಯಂತವಾಗಿ ಹಿಂಸೆಪಡಿಸಿ ಹಾಳುಮಾಡುತ್ತಿದ್ದೆನು. 14ಇದಲ್ಲದೆ ನಾನು ನನ್ನ ಪಿತೃಗಳಿಂದ ಬಂದ ಸಂಪ್ರದಾಯಗಳಲ್ಲಿ ಬಹು ಅಭಿಮಾನವುಳ್ಳವನಾಗಿ ನನ್ನ ಜನರೊಳಗೆ ಸಮಪ್ರಾಯದವರಾದ ಅನೇಕರಿಗಿಂತ ಯೆಹೂದ್ಯ ಮತಾಚಾರದಲ್ಲಿ ಆಸಕ್ತನಾಗಿದ್ದೆನು. 15ಆದರೆ ನಾನು ತಾಯಿಯ ಗರ್ಭದಲ್ಲಿದ್ದಾಗಲೇ ನನ್ನನ್ನು ಪ್ರತ್ಯೇಕಿಸಿ ತನ್ನ ಕೃಪೆಯಿಂದ ಕರೆದ ದೇವರು 16ತನ್ನ ಮಗನನ್ನು ನಾನು ಅನ್ಯಜನರಲ್ಲಿ**

**ಪ್ರಸಿದ್ಧಿಪಡಿಸುವವನಾಗಬೇಕೆಂದು ಆತನನ್ನು ನನ್ನೊಳಗೆ ಪ್ರಕಟಿಸುವದಕ್ಕೆ ಇಚ್ಛೈಸಿದಾಗಲೇ ನಾನು ಮನುಷ್ಯರ ಆಲೋಚನೆಯನ್ನು ವಿಚಾರಿಸದೆ [17]ಯೆರೂಸಲೇಮಿಗೆ ನನಗಿಂತ ಮುಂಚೆ ಅಪೊಸ್ತಲರಾಗಿದ್ದವರ ಬಳಿಗೂ ಹೋಗದೆ ಅರಬಸ್ಥಾನಕ್ಕೆ ಹೋಗಿ ತಿರಿಗಿ ದಮಸ್ಕಕ್ಕೆ ಬಂದೆನು.**

ಸಭೆಯ ಹಿಂಸಕನಾಗಿದ್ದ ಸುವಾರ್ತೆಯ ಬೋಧಕನಾಗಿ ಮಾರ್ಪಟ್ಟ ಪೌಲನ ಜೀವಿತದಲ್ಲಿ ಸುವಾರ್ತೆಯ ರೂಪಾಂತರಕಾರಿ ಶಕ್ತಿಯು ಕಂಡು ಬರುತ್ತದೆ.

**ವಚನ 13.** ಈ ವಚನ ಹಾಗೂ ಮುಂದಿನ ವಚನವು ಯೆಹೂದಿಮತದಲ್ಲಿದ್ದ ಪೌಲನ ಕ್ರೈಸ್ತ-ಪೂರ್ವ ಜೀವಿತವನ್ನು ಸಾರಾಂಶಗೊಳಿಸುತ್ತದೆ. ಈ ವಿಭಾಗವು ಗಮನಾರ್ಹವಾದದ್ದು ಯಾಕೆಂದರೆ, ಇದು ಪಾಪಿಗಳಲ್ಲಿಯೇ ತನ್ನನ್ನು "ಮುಖ್ಯನು" ಎಂಬುದಾಗಿ ಅರಿತುಕೊಳ್ಳುವಂತೆ ನಡಿಸಿದ ಒಂದು ವೃತ್ತಿಯನ್ನು ನಮ್ಮ ಮುಂದೆ ಬಿಚ್ಚಿಡುತ್ತದಾದರೂ (1 ತಿಮೊಥೆ 1:15; KJV), ಇದು ಒಂದು ಹೊಗಳಿಕೊಳ್ಳುವ ಸ್ವಭಾವವುಳ್ಳ ಅಂಶಗಳನ್ನು ಸಹ ಒಳಗೊಂಡಿರುತ್ತದೆ. ಪೌಲನ ಸಾಕ್ಷಿಯು ಅಪೊಸ್ತಲರೊಳಗೆ ವಿಶಿಷ್ಟವಾಗಿತ್ತು, ಮತ್ತು ಅದು ಆತನು ಸಾರಿದ ಸುವಾರ್ತೆಗೆ ಆತನನ್ನು ಒಂದು ಬಲವಾದ ಸಾಕ್ಷಿಯಾಗುವಂತೆ ಮಾಡಿತ್ತು.

ಕ್ರಿಸ್ತನ ಬಳಿಗೆ ಬರುವ ಪ್ರತಿಯೊಬ್ಬನೂ ಪಾಪಿಯಾಗಿಯೇ, ತನಗೆ ಕ್ಷಮಾಪಣೆ ಅಗತ್ಯವಿದೆ ಮತ್ತು ಆತನ ಜೀವಿತಕ್ಕೊಂದು ಶಕ್ತಿಶಾಲಿ ಬದಲಾವಣೆ ಅಗತ್ಯವಿದೆ ಎಂಬುದನ್ನು ಗ್ರಹಿಸಿಕೊಂಡವನಾಗಿ ಬರತಕ್ಕದ್ದು. ಎಲ್ಲಕ್ಕಿಂತ ಮೇಲಾಗಿ, ಈ ಬದಲಾವಣೆಯೊಳಗೆ ಆತನು ಕ್ರಿಸ್ತನಲ್ಲಿ-ದೇವರನ್ನು ಹೇಗೆ ಕಾಣುತ್ತಾನೆಂಬುದು ಸೇರಿರುತ್ತದೆ - ಹೆಚ್ಚು ಕಡಿಮೆ ಒಂದು ಗ್ರಹಿಸಿಕೊಳ್ಳಲಾಗದಂಥ ತನ್ನನ್ನು ಕಡಿಮೆಗೊಳಿಸಿಕೊಂಡು, ಪ್ರೀತಿ, ಮತ್ತು ಕರುಣೆಯ ಕ್ರಿಯೆಯಲ್ಲಿ - ಆ ಪಾಪಗಳನ್ನು ಹೊತ್ತುಕೊಂಡನು, ಗೋಲ್ಗತಾದ ಶಿಲುಬೆಯ ತನಕವೂ ಸಾಗಿದನು.

ಪೌಲನು ತನ್ನ ಪಾಪಗಳ ಕುರಿತು ಅತಿಯಾಗಿ ಅರಿವುಳ್ಳವನಾಗಿದ್ದನು, ಮತ್ತು ಆ ಕಾರಣದಿಂದಲೇ ಆತನ ಸಾಕ್ಷಿಯು ಅಷ್ಟೊಂದು ಮನವೊಪ್ಪಿಸುವಂಥದ್ದಾಗಿತ್ತು: **ಹಿಂದೆ ನಾನು ಯೆಹೂದ್ಯಮತದಲ್ಲಿದ್ದಾಗ ನನ್ನ ನಡತೆ ಎಂಥದೆಂದು ನೀವು ಕೇಳಿದ್ದೀರಷ್ಟೆ.** ಖಂಡಿತವಾಗಿಯೂ, ತಾರ್ಸ ಊರಿನ ಕುಖ್ಯಾತ ಸೌಲನ ವಿಷಯವಾಗಿ ಮತ್ತು ಆತನು ಕ್ರೈಸ್ತರ ವಿಷಯದಲ್ಲಿ ಹೇಗೆ ನಡಕೊಳ್ಳುತ್ತಿದ್ದನು ಎಂಬದರ ಕುರಿತು ಪ್ರತಿಯೊಬ್ಬರೂ ಕೇಳಿಸಿಕೊಂಡಿದ್ದರು. ಸೌಲನಿಗಿದ್ದ ಪ್ರಸಿದ್ಧಿಯ ಕಾರಣದಿಂದಲೇ ಆತನ ಪರಿವರ್ತನೆಯಲ್ಲಿ ಸಹಾಯವನ್ನು ಒದಗಿಸುವಂತೆ ಕರ್ತನು ಅನನೀಯನಿಗೆ ಅಪ್ಪಣೆಗಳನ್ನು ಕೊಟ್ಟಾಗ ಆತನು ಅವುಗಳನ್ನೇ ಪ್ರಶ್ನಿಸುವಂತೆ ಮಾಡಿತ್ತು: "ಕರ್ತನೇ, ಆ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನನ್ನು ನಂಬಿದ ದೇವಜನರಿಗೆ ಎಷ್ಟೋ ಕೇಡನ್ನುಂಟುಮಾಡಿದನೆಂದು ಅವನ ವಿಷಯವಾಗಿ ಅನೇಕರಿಂದ ಕೇಳಿದ್ದೇನೆ" (ಅಪೊಸ್ತಲರ ಕೃತ್ಯಗಳು 9:13).

ಆತನ "ಪಾಪಿಗಳಲ್ಲಿ ಮುಖ್ಯನು" ಪ್ರಸಂಗದಲ್ಲಿ (1 ತಿಮೊಥೆ 1:12-16), ತನಗೆ ಕರುಣೆಯು ತೋರಿಸಲ್ಪಟ್ಟಿದ್ದಕ್ಕೆ ಮೂರು ಕಾರಣಗಳನ್ನು ಕೊಟ್ಟನು: (1) ಕ್ರಿಸ್ತನ ದೇಹಕ್ಕೆ ಹಿಂಸೆಯನ್ನು ಮಾಡುವ ಮೂಲಕ ತಾನೇನು ಮಾಡುತ್ತಿದ್ದಾನೆಂಬುದನ್ನು ಅರಿಯದೆ ಇದ್ದನು, (2) ಯೇಸುವೇ ಕ್ರಿಸ್ತನು ಎಂಬುದು ಆತನಿಗೆ ಗೊತ್ತಿಲ್ಲದಿರುವದು, ಮತ್ತು (3) "ನಿತ್ಯಜೀವಕ್ಕಾಗಿ [ಕ್ರಿಸ್ತನ] ಮೇಲೆ ನಂಬಿಕೆಯಿಡುವವರಿಗೆ" (1 ತಿಮೊಥೆ 1:16) ದೇವರು ತೋರಿಸುವ ಕೃಪೆಯು ಎಷ್ಟೊಂದು ಮಿತಿಗಿಲ್ಲದ್ದೆಂಬುದಕ್ಕೆ ಉದಾಹರಣೆಯಾಗಿ ಲೋಕದ ಮುಂದೆ ತೋರಿಸಲ್ಪಡುವ ಸಾಮರ್ಥ್ಯವು ಆತನಲ್ಲಿರುವಿಕೆ. ಪೌಲನು "ಆ ಪಾಪಿಗಳಲ್ಲಿ ನಾನೇ ಮುಖ್ಯನಾಗಿದ್ದೆನು" ಎಂದು ಹೇಳಲಿಲ್ಲ, ಆದರೆ "ಆ ಪಾಪಿಗಳಲ್ಲಿ ನಾನೇ ಮುಖ್ಯನು" ಎಂದನು (1 ತಿಮೊಥೆ 1:15; ಒತ್ತಿ ಹೇಳಿದ್ದು

ನನ್ನದು).

ಇತರ ಅಪೊಸ್ತಲರಂತಲ್ಲದೆ, ಪೌಲನು ಯೇಸುವಿನ ಸಂಗಡ ಅನುದಿನವು ನಡೆದಾಡಲಿಲ್ಲ, ಆತನೊಂದಿಗೆ ಮೇಜಿಗೆ ಆತುಕೊಂಡು ಕೂತುಕೊಳ್ಳಲಿಲ್ಲ, ಅಥವಾ ಆತನ ಸ್ವಂತ ತುಟಿಗಳಿಂದ ಧನ್ಯನುಡಿಗಳ ಸರಳವಾದ ಆದರೆ ಗಹನವಾದ ಜ್ಞಾನವನ್ನು ಕೇಳಿಸಿಕೊಳ್ಳಲಿಲ್ಲ. ಆತನು ಒಂದು ಎತ್ತರವಾದ ಪರ್ವತದ ತುದಿಯಲ್ಲಿ ಮೋಶೆ ಹಾಗೂ ಎಲೀಯನ ಜೊತೆಯಲ್ಲಿ ಕಂಡ ಕ್ರಿಸ್ತನ ವಿಸ್ಮಯಗೊಳಿಸುವ ಸಾಕ್ಷಾತ್ಕಾರವನ್ನು ಕಣ್ಣಾರೆ ಕಾಣಲಿಲ್ಲ. ಆತನು ಕ್ರಿಸ್ತನು, ದೇವಕುಮಾರನೆಂಬ ಸತ್ಯದ ಅಚ್ಚನ್ನು ಅವರ ಹೃದಯಗಳ ಮೇಲೆ ಒತ್ತುವದಕ್ಕಾಗಿ ರಚಿತಗೊಂಡಿದ್ದ ಅನೇಕ ಮನಃಸೆಳೆಯುವ ಘಟನೆಗಳನ್ನು ಅವರು ಕಂಡಿದ್ದರು. ಪೌಲನಿಗಾದ ಪುನರುತ್ಥಾನಗೊಂಡ ಹಾಗೂ ಮಹಿಮೆಗೊಂಡ ಕರ್ತನ ದರ್ಶನವು ಆತನ ಹೃದಯದ ಮೇಲೆ ಅದಕ್ಕೆ ಹೋಲಿಸಬಹುದಾದ ಅದೇ ಪರಿಣಾಮವನ್ನೇ ಬೀರಿತ್ತು ಎಂಬುದರಲ್ಲಿ ಸಂಶಯವೇ ಇಲ್ಲ.

ಪ್ರಪಂಚದ ಮೇಲೆ ಅಪೊಸ್ತಲನಾದ ಪೌಲನ ಸೇವೆಯಷ್ಟು ಗಹನವಾದ ಪರಿಣಾಮವನ್ನು ಬೇರೆ ಯಾವದೇ ಅಪೊಸ್ತಲನ ಸೇವೆಯು ಬೀರಿರುತ್ತದೆಂಬುದಕ್ಕೆ ಯಾವದಾದರೂ ಪುರಾವೆಯು - ಶಾಸ್ತ್ರಗಳಲ್ಲಿ ಆಗಲಿ ಅಥವಾ ಕ್ರೈಸ್ತ ನಂಬಿಕೆಯ ಬೈಬಲೇತರ ದಾಖಲೆಗಳಲ್ಲಿ ಆಗಲಿ - ಇರುತ್ತದೋ? ದೇವರು ಪವಿತ್ರಾತ್ಮನ ಮೂಲಕವಾಗಿ ತನ್ನ ದೇವಜನರಿಗೆ ಆಸ್ತಿಯಾಗಿ ಕೊಟ್ಟಿರುವ ದಾಖಲೆಯಲ್ಲಿ, ಈ ಪಾಪಿಗಳಲ್ಲಿ "ಮುಖ್ಯನು" ಆಗಿರುವ ವ್ಯಕ್ತಿಯಲ್ಲಿದ್ದಷ್ಟು ಮಿತಿಯಿಲ್ಲದ ಚೈತನ್ಯ ಹಾಗೂ ಬಳಲಿ ಹೋಗದ ನಿಷ್ಠೆಯು ಬೇರೆ ಯಾವ ವ್ಯಕ್ತಿಯಲ್ಲಿಯೂ (ಸ್ವತಃ ಕರ್ತನನ್ನು ಹೊರತು ಪಡಿಸಿ) ಇರುವದಿಲ್ಲ. ಪೌಲನು ಕ್ರೈಸ್ತನಾಗಿ ಪರಿವರ್ತನೆಗೊಂಡದ್ದು ಈಗಲೂ ಪರಿವರ್ತನೆಯೆಂದರೆ ನಿಜಕ್ಕೂ ಅರ್ಥವೇನು ಎಂಬುದಕ್ಕೆ ಲೋಕದ ಮುಂದೆ ಒಂದು ಲಾಂಛನವಾಗಿ ನಿಂತಿರುತ್ತದೆ. ತಾರ್ಸದ ಸೌಲನು ಕರ್ತನ ಕಡೆಗೆ ತಿರುಗಿಕೊಳ್ಳುವ ಮೂಲಕ ಮಾರ್ಪಡುವದಕ್ಕೆ ಸಾಧ್ಯವಿರುವದಾದರೆ, ದೇವರು ಕೃಪೆಯು ತಲುಪಲಾಗದಷ್ಟು ದೂರದಲ್ಲಿ ಯಾವ ವ್ಯಕ್ತಿಯಾಗಲಿ ಎಲ್ಲಿಯೂ ಇರುವದಿಲ್ಲ. 1 ತಿಮೊಥೆ 1:16ರಲ್ಲಿ ಪೌಲನ ಮಾತುಗಳ ಗಹನವಾದ ಅರ್ಥವು ಇದೇ ಆಗಿದೆ. ಕೃಪೆಯ ಅತ್ಯಮೋಘವಾದ ರುಚಿಯನ್ನು ಅಪರಾಧಿಯಲ್ಲದೆ ಬೇರೆ ಇನ್ನಾರು ಸವಿಯುವದಕ್ಕೆ ಸಾಧ್ಯ?

ಶಾಸ್ತ್ರಗಳಲ್ಲಿರುವ ಇನ್ನು ಹಲವಾರು ಕಥನಗಳು ಸಹ ಪೌಲನು "ಹಿಂದೆ . . . ಯೆಹೂದ್ಯಮತದಲ್ಲಿದ್ದಾಗ . . . ನಡತೆ" ಹೇಗಿತ್ತೆಂಬುದರ ಕುರಿತು ತಿಳಿಸುತ್ತವೆ (ನೋಡಿರಿ ಅಪೊಸ್ತಲರ ಕೃತ್ಯಗಳು 22:3-16; 26:4-18; ರೋಮಾ 11:1; 2 ಕೊರಿಂಥ 11:22; ಫಿಲಿಪ್ಪಿ 3:5-7). ಆತನ ಕ್ರೈಸ್ತ-ಪೂರ್ವ "ನಡತೆ ಎಂಥದೆಂಬ" (ἀναστροφή, *anastrophē*) - ಅಂದರೆ, ಆತನ "ನಡವಳಿಕೆ," "ವರ್ತನೆ," ಅಥವಾ "ಜೀವನ ರೀತಿಯ" - ಕುರಿತು ಇನ್ನೂ ಬಹಳಷ್ಟನ್ನು ಹೇಳಬಹುದಾಗಿದೆ. ಉದಾಹರಣೆಗೆ, ಪೌಲನು ತಾರ್ಸದ ಕಿಲಿಕ್ಯ ಎಂಬ ಊರಲ್ಲಿ ಜನಿಸಿದ್ದನು, ಆದರೆ ಆತನು ಯೆರೂಸಲೇಮಿನಲ್ಲಿದ್ದ ಧರ್ಮಶಾಸ್ತ್ರದಲ್ಲಿ ಡಾಕ್ಟರೇಟ ಹೊಂದಿದ್ದ ಅತ್ಯಂಥ ಗೌರವಾನ್ವಿತ ಗಮಲಿಯೇಲನ ಶಾಲೆಯಲ್ಲಿ ರಬ್ಬಾನಿಕ್ ಶಿಕ್ಷಣವನ್ನು ಪಡೆದುಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 22:3).

ಕರ್ತನಿಂದ ಕರೆಯಲ್ಪಡುವ ತನಕವೂ, ಪೌಲನು ಸಭೆಯನ್ನು ತೀವ್ರವಾಗಿ ವಿರೋಧಿಸುವವನಾಗಿದ್ದನು. ದಮಸ್ಕರ ದಾರಿಯಲ್ಲಿ ಕ್ರಿಸ್ತನು ಪ್ರತ್ಯಕ್ಷನಾದದ್ದು ಆತನು ಯೆಹೂದಿಮತದಲ್ಲಿ ಆನಂದಿಸಿದ್ದ ಸಕಲ ಸವಲತ್ತುಗಳನ್ನು ನಷ್ಟಮಾಡಿಕೊಳ್ಳುವಂತೆ ಆತನನ್ನು ಒತ್ತಾಯಿಸಿತ್ತು. ಅದು ಒಬ್ಬ ಹಿಂಸಕನಿಂದ ಹಿಂಸೆಗೆ ಗುರಿಯಾಗುವವನಾಗಿ

ರೂಪಾಂತರಣಗೊಳ್ಳುವಿಕೆಯಿಂದ ಎದುರಾಗಬಹುದಾದ ತ್ಯಾಗ, ಶ್ರಮೆ, ಮತ್ತು ನಷ್ಟಗಳನ್ನು ಅಂಗೀಕರಿಸಿಕೊಳ್ಳುವಂತೆ ಮಾಡಿತ್ತು. ಪೌಲನು ತನ್ನ ವಾಚಕರಿಗೆ ಬುದ್ಧಿಯಿಂದ ಯೋಚಿಸುವಂತೆ ವಿನಂತಿಸಿಕೊಳ್ಳುತ್ತಿದ್ದಾನೆ, ಒಂದು ವೇಳೆ ಪುನರುತ್ಥಾನಗೊಂಡ ಕ್ರಿಸ್ತನ ಭೇಟಿಯು ಸಂಭವಿಸದೆ ಹೋಗಿದ್ದರೆ ಆತನು ಈ ತ್ಯಾಗಗಳನ್ನು ಅನುಭವಿಸುವದಕ್ಕೆ ಯಾವ ಉದ್ದೇಶವು ಇದ್ದಿರುವದಕ್ಕೆ ಸಾಧ್ಯವಿತ್ತೆಂಬುದನ್ನು ಪರಿಗಣಿಸುವಂತೆ ಅವರಿಗೆ ಕರೆ ಕೊಡುತ್ತಿದ್ದಾನೆ.

**ನಾನು . . . ಹಿಂಸೆಪಡಿಸಿ ಹಾಳುಮಾಡುತ್ತಿದ್ದೆನು** ಎಂಬುದು ಗ್ರೀಕ್ ಕ್ರಿಯಾಪದದ ನ್ಯಾಯಬದ್ಧವಾದ ಅನುವಾದವಾಗಿರುತ್ತದೆ, ಅದು διώκω (*diōkō*) ಎಂಬುದು ಅಪೂರ್ಣವಾದ ಕಾಲರೂಪವಾಗಿದೆ. ಬಹುಪಾಲಿ ಆವೃತ್ತಿಗಳು ಅದನ್ನು ಕೇವಲ ಗತಕಾಲದಲ್ಲಿ, "ಹಿಂಸೆ ಪಡಿಸಿದೆನು" ಎಂದು ಅನುವಾದಿಸುತ್ತವೆ. ಅಪೂರ್ಣ ಕಾಲರೂಪವು ನಿರಂತರವಾದ ಅಥವಾ ಸಂತತ ಕ್ರಿಯಾಸೂಚಿಯನ್ನು ವ್ಯಕ್ತಪಡಿಸುತ್ತದೆ ಮತ್ತು "ಹಿಂಸೆ ಪಡಿಸುತ್ತಲೇ ಇದ್ದೆನು" ಅಥವಾ "ನಿರಂತರವಾಗಿ ಹಿಂಸಿಸುತ್ತಿದ್ದೆನು" ಎಂಬುದಾಗಿ ಅನುವಾದಿಸಬಹುದಾಗಿದೆ. ತಾನು ಒಂದು ಕಾಲದಲ್ಲಿ ನಜರೇಯರ ಪಾಷಂಡ ಮತವೆಂದು ಭಾವಿಸಿಕೊಂಡು ಹೇಗೆ ಅವರನ್ನು ಹಿಂಸಿಸುವದರಲ್ಲಿಯೇ ತನ್ನ ಕಾಲವನ್ನು ಕಳೆಯುತ್ತಿದ್ದನೆಂಭುದನ್ನು ತಿಳಿಸುವದಕ್ಕೆ ಇಲ್ಲಿ ಅಪೂರ್ಣ ಕಾಲರೂಪವನ್ನು ಬಳಸಿದ್ದಕ್ಕೆ ನಿಶ್ಚಯವಾಗಿಯೂ ಕಾರಣವನ್ನು ಹೊಂದಿದ್ದನು.

**ದೇವರ ಸಭೆಯನ್ನು** ಎಂಬುದು ದೇವರ ಜನರನ್ನು ಸೂಚಿಸುವದಕ್ಕೆ ಹೊಸ ಒಡಂಬಡಿಕೆಯಲ್ಲಿ ಸಿಕ್ಕುವ "ಶಿಷ್ಯರು," "ಸಹೋದರರು," "ಕ್ರಿಸ್ತನ ಸಭೆಗಳು," "ಪ್ರಥಮಫಲಗಳ ಸಭೆ," "ಕ್ರೈಸ್ತರು," ಮತ್ತು "ಕ್ರಿಸ್ತನ ದೇಹ" ಎಂಬ ಅನೇಕ ಪದಗಳ ಜೊತೆಯಲ್ಲಿ ಬಳಸಲ್ಪಟ್ಟಿರುವ ಒಂದು ಪದವಾಗಿದೆ. ಈ ಗುಣವಾಚಕಗಳೊಳಗೆ ಯಾವದೊಂದು ಪದವೂ ಒಂದು ಹೆಸರಾಗುವದಿಲ್ಲ; ಬದಲಾಗಿ, ಅವೆಲ್ಲವೂ ಸುವಾರ್ತೆಗೆ ನಂಬಿಗಸ್ತಿಕೆಯಿಂದ ವಿಧೇಯರಾಗುವ ಮೂಲಕವಾಗಿ, ಯೇಸುವನ್ನು ಅಂಗೀಕರಿಸಿಕೊಂಡಿರುವ ಎಲ್ಲರನ್ನೂ ಸೂಚಿಸುವ ವರ್ಣನಾತ್ಮಕ ಪದಗಳಾಗಿಷ್ಟೆ. ಅಂಥ ಜನರು ಆತನ ಆದುಕೊಂಡ ಸಭೆಯೊಳಗೆ (ἐκκλησία, *ekklēsia*) ಸೇರ್ಪಡೆಗೊಳಿಸಲ್ಪಟ್ಟಿದ್ದಾರೆ, ಆಯಾ ಸ್ಥಳದಲ್ಲಿ ಮತ್ತು ಜಾಗತಿಕ ಸಭೆಯ ಸಮೂಹ ಎರಡರಲ್ಲಿಯೂ ಸೇರಿಸಲ್ಪಡುತ್ತಾರೆ.

ಉಪಸರ್ಗೀಯ **ಅತ್ಯಂತವಾಗಿ** (καθ' ὑπερβολὴν, *kath' huperbolēn*) ಎಂಬುದರ ಅರ್ಥವು "ಸಂಪೂರ್ಣವಾಗಿ" ಅಥವಾ "ವಿಪರೀತವಾಗಿ" ಎಂದಾಗಿದೆ. ಈ ὑπερβολή (*huperbolē*) ಎಂಬ ಪದವು ಆಂಗ್ಲದ "ಹೈಪರ್ಬೋಲೇ" ಎಂಬ ಪದಕ್ಕೆ ಮೂಲವಾಗಿದ್ದು, ಅದು "ಅತ್ಯಾಡಂಬರದ ಉಪ್ರೇಕ್ಷೆ" ಎಂಬ ಅರ್ಥವನ್ನು ಕೊಡುತ್ತದೆ. ಹೇಗೂ, ಇದು ಆಂಗ್ಲದ ಅರ್ಥವಷ್ಟೇ. ಖಂಡಿತವಾಗಿಯೂ, ಪೌಲನ ತಾತ್ಪರ್ಯವು ಕೇವಲ ಉತ್ಪ್ರೇಕ್ಷೆ ಮಾತ್ರವೇ ಆಗಿರಲಿಲ್ಲ. ಗ್ರೀಕ್ ಭಾಷೆಯಲ್ಲಿ, ಅಧಿಕಾರ್ಥವು ನಿಜಕ್ಕೂ "ಮಿತಿಮೀರಿ" ಅಥವಾ "ಅತ್ಯಂಥ ತುತ್ತತುದಿಯ ಮಟ್ಟದ ವರೆಗೂ" ಎಂದಾಗಿರುತ್ತದೆ. ಆಂಗ್ಲದ ವಿವಿಧ ಆವೃತ್ತಿಗಳು ಈ ಪದಗುಚ್ಛಕ್ಕೆ "ಉಗ್ರವಾಗಿ" (NRSV), "ತೀಕ್ಷ್ಣವಾಗಿ" (NIV), "ಮತಾಂಧತೆಯ ವೈರಾಗ್ಯದಿಂದ" (Phillips), ಮತ್ತು "ನಿರ್ದಾಕ್ಷಿಣ್ಯವಾಗಿ" (GNT) ಎಂದು ಅನುವಾದಿಸುತ್ತವೆ.

ಪೌಲನ ನಿಕಟ ಸಹಪಾಠಿ ಹಾಗೂ ಆತನ ಮಿಶನರಿ ತಂಡದ ಒಬ್ಬ ಸದಸ್ಯನು ಆಗಿದ್ದ ಲೂಕನು, ಕ್ರೈಸ್ತರಿಗೆ ಪೌಲನು ಏನು ಮಾಡುತ್ತಿದ್ದನೆಂಬುದರ ಕುರಿತು ಬೇರೊಂದು ಕಥನವನ್ನು ತಿಳಿಸುತ್ತಾನೆ, ಆತನ ಮಾತುಗಳನ್ನೇ ಇಲ್ಲಿ ಉಲ್ಲೇಖಿಸಿ ಹೇಳುತ್ತಾನೆ: "ಎಲ್ಲಾ ಸಭಾಮಂದಿರಗಳಲ್ಲಿಯೂ ನಾನು ಅನೇಕಾವರ್ತಿ ಅವರನ್ನು ದಂಡಿಸಿ ಅವರಿಂದ ದೂಷಣೆಯ

ಮಾತುಗಳನ್ನಾಡಿಸುವದಕ್ಕೆ ಪ್ರಯತ್ನಿಸಿದೆನು. ಇದಲ್ಲದೆ ಅವರ ಮೇಲೆ ಬಹು ಕೋಪಾವೇಶವುಳ್ಳವನಾಗಿ ಪರಪಟ್ಟಣಗಳ ತನಕ ಅವರನ್ನು ಹಿಂಸೆಪಡಿಸಿದೆನು" (ಅಪೊಸ್ತಲರ ಕೃತ್ಯಗಳು 26:11). "ಬಹು ಕೋಪಾವೇಶವುಳ್ಳವನಾಗಿ" ಎಂಬ ಪದಗಳು ἐμμαίνομαι (*emmainomai*) ಎಂಬ ಗ್ರೀಕ್ ಕ್ರಿಯಾಪದದ ಅನುವಾದವಾಗಿರುತ್ತದೆ, ಅದು ಅಪೊಸ್ತಲರ ಕೃತ್ಯಗಳು 26:24ರಲ್ಲಿ ಫೇಸ್ತನು ಪೌಲನೊಂದಿಗೆ ಮಾತಾಡಲು ಬಳಸಿದ ಎರಡು ಪದಗಳೊಂದಿಗೆ ಸಂಬಂಧ ಹೊಂದಿದೆ: "ಪೌಲನೇ, ನೀನು ಮರುಳಾಗಿದ್ದೀ [μαίνομαι, *mainomai*); ನೀನು ಬಹಳವಾಗಿ ಮಾಡುವ ಶಾಸ್ತ್ರವಿಚಾರವು ನಿನ್ನನ್ನು ಮರುಳುಗೊಳಿಸುತ್ತದೆ [μανία, *mania*]." ಈ ಗ್ರೀಕ್ ಪದಗಳು ಆಂಗ್ಲದ "ಮಾನಿಯಾ" ಮತ್ತು "ಮಾನಿಯಾಕ್" ಎಂಬ ಪದಗಳ ಹಿಂದೆ ನಿಲ್ಲುತ್ತವೆ.

ಗಲಾತ್ಯ 1:13 ಮತ್ತು ಅಪೊಸ್ತಲರ ಕೃತ್ಯಗಳು 26:11ರಲ್ಲಿ ಬಳಸಲ್ಪಟ್ಟಿರುವ ಭಾಷೆಯು ಸಭೆಯನ್ನು ಹಾಳು ಮಾಡಬೇಕೆಂದು ಪೌಲನು ಹೊಂದಿದ್ದ ಗೀಳನ್ನು ಎತ್ತಿ ತೋರಿಸುತ್ತದೆ. ಆತನು ನಜರೇತಿನ ಯೇಸುವನ್ನು ಹಿಂಬಾಲಿಸುತ್ತಿದ್ದ ಮತಭ್ರಷ್ಟ ಯೆಹೂದ್ಯರ ಒಂದು ವಿಭಜಕ ಪಂಥ ಎಂದು ಭಾವಿಸಿಕೊಂಡಿದ್ದ ಆ ಗುಂಪನ್ನು ನಿರ್ಮೂಲನ ಮಾಡಬೇಕೆಂಬ ತನ್ನ ಪರಿಶ್ರಮದಲ್ಲಿ ಹುಚ್ಚಿನಿಂದ ಕೆರಳುತ್ತಿದ್ದನೆಂಬುದನ್ನು ಮನಃಪೂರ್ವಕವಾಗಿ ಆತನು ಒಪ್ಪಿಕೊಳ್ಳುತ್ತಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 24:5).

**ವಚನ 14.** ಆತನ ಹಿಂದಿನ ಜೀವನ ಶೈಲಿಯನ್ನು ಕುರಿತು ಒತ್ತಿ ಹೇಳುವವನಾಗಿ, ಅಪೊಸ್ತಲನು ಅಪೂರ್ಣ ಕ್ರಿಯಾಪದವನ್ನು ಮುಂದುವರೆಸಿ ಹೀಗೆ ಹೇಳುತ್ತಾನೆ, **ಇದಲ್ಲದೆ ನಾನು ನನ್ನ ಪಿತೃಗಳಿಂದ ಬಂದ ಸಂಪ್ರದಾಯಗಳಲ್ಲಿ ಬಹು ಅಭಿಮಾನವುಳ್ಳವನಾಗಿ ನನ್ನ ಜನರೊಳಗೆ ಸಮಪ್ರಾಯದವರಾದ ಅನೇಕರಿಗಿಂತ ಯೆಹೂದ್ಯ ಮತಾಚಾರದಲ್ಲಿ ಆಸಕ್ತನಾಗಿದ್ದೆನು.** ಆತನ ಸ್ವಭಾವದ ವೈಶಿಷ್ಟತೆಯು ಆಕಾಂಕ್ಷೆಯಿಂದ ಕೂಡಿತ್ತು, ಮತ್ತು ತಾನು ಏನು ಮಾಡಬೇಕೆಂದು ನಿಷ್ಕರ್ಷೆ ಮಾಡಿಕೊಂಡಿದ್ದನೋ ಅದನ್ನು ತನ್ನೆಲ್ಲಾ ಶಕ್ತಿಯಿಂದ ಮಾಡಬೇಕೆಂದು ಅಪೇಕ್ಷಿಸಿದನು.

ಪೌಲನ ಹೇಳಿಕೆಯಿಂದಾಗಿ ಗಮಲಿಯೇಲ I ಶಾಲೆಯಲ್ಲಿ ಪೈಪೋಟಿಯ ಅಂಶವಿತ್ತೋ ಎಂದು ನಾವು ಚಕಿತಗೊಳ್ಳುತ್ತೇವೆ. ರಬ್ಬಿಗಳು ತಮ್ಮ ವಿದ್ಯಾರ್ಥಿಗಳನ್ನು ಅವರ ಸಾಮರ್ಥ್ಯದ ಪ್ರಕಾರವಾಗಿ ಶ್ರೇಣಿ ಕೊಡುವದಕ್ಕೆ ಒಲವು ಹೊಂದಿರುತ್ತಿದ್ದರೆಂಬುದಾಗಿ ಮಿಸ್ನಾಹ ಸೂಚಿಸುತ್ತದೆ.[22] ಸೌಲನು ರಾಜಧಾನಿ ನಗರವಾದ ಯೆರೂಸಲೇಮಿನಲ್ಲಿರುವ ಮಹಾ ಯಾಜಕನಿಂದ ಅನುಮತಿ ಪತ್ರವನ್ನು ಪಡೆದುಕೊಂಡನಾದ್ದರಿಂದ (ಅಪೊಸ್ತಲರ ಕೃತ್ಯಗಳು 9:1, 2), ಆತನು ತನ್ನ ಸಮಕಾಲೀನರಲ್ಲೆಲ್ಲಾ ಅಗ್ರಸ್ಥಾನದಲ್ಲಿದ್ದಿರಬಹುದಾಗಿದೆ. ಯೆಹೂದಿ ಆಡಳಿತಗಾರರಿಗೆ ಆತನು ಹೆಮ್ಮೆ ಪಟ್ಟುಕೊಳ್ಳುವದಕ್ಕೆ ಮೂಲನಾಗಿದ್ದನೆಂಬುದರಲ್ಲಿ ಮತ್ತು ಈ ವಿಭಜಕ ಪಂಥವನ್ನು ಸೇರಿಕೊಳ್ಳಲು ಬಯಸುವ ಯೆಹೂದ್ಯರಿಗೆ ಒಂದು ಭಯದ ಮೂಲ ಆಗಿದ್ದನೆಂಬುದರಲ್ಲಿ ಸಂಶಯವೇ ಇಲ್ಲ. ಬಹುಶಃ ಅವರ ಮಹಾನ್ ಉಪದೇಶಕನ ಪಾದಗಳ ಬಳಿಯಲ್ಲಿ ಕೂತುಕೊಳ್ಳುವ ಆತನ ಸಹಪಾಠಿಗಳಲ್ಲಿ ಅಸೂಯೆ ಉಂಟಾಗಲು ಮೂಲನು ಸಹ ಆಗಿರಬಹುದಾಗಿದೆ. ಅಪೊಸ್ತಲರ ಕೃತ್ಯಗಳು 5:33–39ರಲ್ಲಿ ಚಿತ್ರಿಸಲ್ಪಟ್ಟಿರುವ ಗಮಲಿಯೇಲನು "ದೇವರ ವಿಷಯದಲ್ಲಿ ಅಭಿಮಾನಿ" ಆಗಿದ್ದ ಈ ಯೌವನಸ್ಥನ ಹಿಂಸಾಕೃತ್ಯಗಳನ್ನು ಅನುಮೋದಿಸದೆ ಇರುತ್ತಿದ್ದನು. ಇವುಗಳು ಗ್ರೀಕ್ ವಾಕ್ಯದಲ್ಲಿರುವ ಅಪೊಸ್ತಲರ ಕೃತ್ಯಗಳು 22:3ರಲ್ಲಿ ಪೌಲನು ನುಡಿದ ಸ್ವಂತ ಮಾತುಗಳಾಗಿವೆ. ಆತನ ಅಭಿಮಾನವು ಆ ದಿನದ ಸಭಾಮಂದಿರಗಳಲ್ಲಿ ಅಲ್ಲೋಲಕಲ್ಲೋಲವನ್ನು ಸೃಷ್ಟಿಸುತ್ತಿದ್ದನು.

ಪೌಲನಲ್ಲಿ ಉರಿಯುತ್ತಿದ್ದ ಅಭಿಮಾನದ ಲಕ್ಷ್ಯವು ಏನಾಗಿತ್ತು? ಆತನು ಖಂಡಿತವಾಗಿಯೂ ಫಿಲಿಷ್ಟಿಯದ ಮೇಲೆ ಹಿಡಿತ ಹೊಂದಿದ್ದ ರೋಮನ್ ನಿಯಂತ್ರಣವನ್ನು ಕಿತ್ತು ಹಾಕಬೇಕೆಂದು ಬಯಸುತ್ತಿದ್ದ ಧಾರ್ಮಿಕ-ರಾಜಕೀಯ ಮತಾಭಿಮಾನದ ಪಕ್ಷದಲ್ಲಿ ಸದಸ್ಯನಂತೂ ಆಗಿರಲಿಲ್ಲ. ಪೌಲನು "ಯೆಹೂದ್ಯ ಮತಾಚಾರ" (Ἰουδαϊσμός, *Ioudaismos*) ದಲ್ಲಿ ಮುನ್ನಡೆಯನ್ನು ಸಾಧಿಸುತ್ತಿದ್ದನೆಂಬುದನ್ನು ವಾಕ್ಯಭಾಗವು ಒತ್ತಿ ಹೇಳುತ್ತದೆ. ಈ ಪದವು ಹೊಸ ಒಡಂಬಡಿಕೆಯೊಳಗೆ 1:13, 14ರಲ್ಲಿ[23] ಮಾತ್ರವೇ ಕಾಣಿಸಿಕೊಳ್ಳುತ್ತದೆ, ಅದು ಯೆಹೂದ್ಯರ ಮಧ್ಯದಲ್ಲಿ ಪೌಲನು ಹೇಗೆ ಪ್ರಗತಿ ಹೊಂದುತ್ತಿದ್ದನು ಮತ್ತು ಕುಖ್ಯಾತಿಯನ್ನು ಪಡೆಯುತ್ತಿದ್ದನೆಂಬುದನ್ನು ತಿಳಿಸುತ್ತದೆ. ಯೆಹೂದಿಮತದಲ್ಲಿ ಮೋಶೆಯ ಧರ್ಮಶಾಸ್ತ್ರಕ್ಕಿಂತಲೂ ಇನ್ನೂ ಹೆಚ್ಚಾದದ್ದು ಸೇರಿರುತ್ತದೆ; ಅದರೊಳಗೆ ಯೆಹೂದ್ಯರ "ಪೂರ್ವಜರ ಸಂಪ್ರದಾಯಗಳು" ಸಹ ಅಡಕವಾಗಿರುತ್ತವೆ. ಯೌವನಸ್ಥನಾದ ಸೌಲನನ್ನು ಬಹುವಾಗಿ ಸ್ಫೂರ್ತಿಗೊಳಿಸಿದ್ದು ಈ "ಸಂಪ್ರದಾಯ"ದ (παράδοσις, *paradosis*) ಮೂಲಕವಾಗಿ ವ್ಯಾಖ್ಯಾನಿಸಲ್ಪಟ್ಟ ಧರ್ಮಶಾಸ್ತ್ರವೇ ಆಗಿತ್ತು.

ಯೆಹೂದಿಮತದಲ್ಲಿ ಪೌಲನನ್ನು ಉಪದೇಶ ಮಾಡಿದ್ದ "ಶಾಲೆ"ಯ ಸ್ವಭಾವದ ವಿಷಯದಲ್ಲಿ ವೇದ ಪಂಡಿತರು ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅದು ಶಮ್ಮಾಯನ ಕಟ್ಟುನಿಟ್ಟಿನ ಶಾಲೆಯ ಅನುಗುಣವಾಗಿತ್ತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ (ನೋಡಿರಿ ಅಪೊಸ್ತಲರ ಕೃತ್ಯಗಳು 26:5), ಅದೇ ವೇಳೆಯಲ್ಲಿ ಇನ್ನು ಕೆಲವರು ಆ ಶಾಲೆಯು ಹಿಲ್ಲೆಲನ ಹೆಚ್ಚು ಉದಾರವಾದ ಪ್ರವೃತ್ತಿಗಳನ್ನು ಅನುಸರಿಸುತ್ತಿತ್ತೆಂದು ಯೋಚಿಸುತ್ತಾರೆ. ಈ ಪ್ರಸಿದ್ಧ ರಬ್ಬಿಗಳು, ಒಬ್ಬ ವಿದ್ಯಾರ್ಥಿಯಾಗಿ ಸೌಲನು ಕಳೆದ ದಿನಗಳ ಮುಂಚೆ ಹಾಗೂ ನಂತರದಲ್ಲಿ ಪ್ರಭಾವ ಬೀರಿದ್ದಂಥ ಯೆಹೂದಿಮತದಲ್ಲಿ ಎರಡು ಮೂಲಭೂತ ದಿಕ್ಕುಗಳ ಸ್ಥಾಪಕರಾಗಿದ್ದರು.

ಹಾಗಾದರೆ, ಸಮಸ್ಯೆಯು ಧರ್ಮಶಾಸ್ತ್ರವಾಗಿರಲಿಲ್ಲ, ಆದರೆ ಬದಲಾಗಿ ಅದರ ವ್ಯಾಖ್ಯಾನವೇ ಆಗಿತ್ತು. ಯೇಸು ಹಾಗೂ ಸೌಲ ಅದೇ ಇಬ್ರಿಯ ಬೈಬಲನ್ನು ಓದಿದರು, ಆದರೆ ಯೇಸುವಿಗೆ ಬೈಬಲನ್ನು ಕೊಟ್ಟಿದ್ದ ದೇವರ ಮನಸ್ಸು ತಿಳಿದಿತ್ತು ಮತ್ತು ಅದರಲ್ಲಿನ ಕೃಪೆಯ ಇಂಗಿತವನ್ನು ನಿಖರವಾಗಿ ಅರ್ಥಮಾಡಿಕೊಂಡನು. ಉದಾಹರಣೆಗೆ, "ಸಬ್ಬತ್‌ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲ" ಎಂದು ಕಲಿಸಿದನು (ಮಾರ್ಕ 2:27). ಅದಕ್ಕೆ ತದ್ವಿರುದ್ಧವಾಗಿ, ಧರ್ಮಶಾಸ್ತ್ರ ಅಕ್ಷರಾರ್ಥವನ್ನು ಪ್ರತಿಪಾದಿಸುತ್ತಿದ್ದವರು ಸಬ್ಬತ್ ದಿನದಂದು ಸ್ವಸ್ಥ ಮಾಡಿದ ವ್ಯಕ್ತಿಯನ್ನು ಖಂಡನೆ ಮಾಡುವದಕ್ಕೆ ಅಥವಾ ಕೊಲ್ಲುವದಕ್ಕೂ ಸಹ ಸಂಕೋಚ ಪಟ್ಟಿರುತ್ತಿದ್ದಿಲ್ಲ (ಮಾರ್ಕ 3:1-6; ಯೋಹಾನ 5:1-18). ಈ ಅಭಿಮಾನಿ ಪಂಡಿತರ ಮನಸ್ಸುಗಳಲ್ಲಿ, ಸ್ವತಃ ಧರ್ಮಶಾಸ್ತ್ರಕ್ಕಿಂತಲೂ ಅದರ ಅಧಿಕೃತ ವ್ಯಾಖ್ಯಾನವೇ ಅಗ್ರ ಸ್ಥಾನವನ್ನು ತೆಗೆದುಕೊಳ್ಳುವದಾಗಿತ್ತು. ಈ ಆದ್ಯತೆಯು ರಬ್ಬಿ ಮೋದಿನನ ಎಲೀಯಾಜರನು ಹೇಳಿದ್ದೆಂದು ಹೇಳಲಾಗುವ ಮಾತಿನಲ್ಲಿ ದೃಷ್ಟಾಂತಪಡಿಸಲ್ಪಟ್ಟಿರುತ್ತದೆ, ಆತನು ಪೌಲನ ಕಾಲದ ನಂತರದಲ್ಲಿ ಜೀವಿಸಿದ್ದವನು: "ಒಬ್ಬ ಮನುಷ್ಯನು . . . *Halakah*ದ ಅನುಗುಣವಾಗಿ ಧರ್ಮಶಾಸ್ತ್ರದ ಅರ್ಥಗಳನ್ನು ಅನಾವರಣಗೊಳಿಸುವದಾದರೆ, ಧರ್ಮಶಾಸ್ತ್ರ ಜ್ಞಾನ ಹಾಗೂ ಸತ್ಕಾರ್ಯಗಳು ಆತನಿಗಿದ್ದರೂ, ಬರಲಿರುವ ಜಗತ್ತಿನಲ್ಲಿ ಆತನಿಗೆ ಪಾಲು ಇರುವದಿಲ್ಲ."[24] ಈ ಹೇಳಿಕೆಯು "ಹಿರಿಯರಿಂದ ಬಂದ ಸಂಪ್ರದಾಯವನ್ನು" (ನೋಡಿರಿ ಮತ್ತಾಯ 15:2) ಅಥವಾ "ಪೂರ್ವಜನರಿಂದ ಬಂದ ಸಂಪ್ರದಾಯ" ವಿರೋಧಿಸುವವರನ್ನು ಅಥವಾ ನಿರ್ಲಕ್ಷ್ಯಿಸುವವರನ್ನು ಖಂಡಿಸುತ್ತದೆ.

ಗುರಿಯಿಟ್ಟುಕೊಂಡು ಹೋಗುತ್ತಿರುವ ಕಾರ್ಯವು ಪ್ರಯೋಜನಕರವಾಗಿರುವ ತನಕ, "ಆಸಕ್ತನಾಗಿದ್ದೆನು" (προκόπτω, *prokoptō*) ಎಂಬ ಪದವು ಒಂದು ಸಕಾರಾತ್ಮಕ ಸೂಚ್ಯಾರ್ಥವನ್ನು ಹೊಂದಿರಬಲ್ಲದು. ಯೇಸುವು ಹನ್ನೆರಡು ವಯಸ್ಸಿನವನಾದ ವೇಳೆ, ಆತನು "ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ [*prokoptō*] ಬಂದನು; ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು" ಎಂದು ಬರೆಯಲ್ಪಟ್ಟಿರುತ್ತದೆ (ಲೂಕ 2:52). ಪೌಲನು ತಿಮೊಥೆಯನನ್ನು ಹೀಗೆ ಬೇಡಿಕೊಂಡನು, ". . . ಆಸಕ್ತನಾಗಿರು. ಇದರಿಂದ ನಿನ್ನ ಅಭಿವೃದ್ಧಿಯು ಎಲ್ಲರಿಗೂ ಪ್ರಸಿದ್ಧವಾಗುವದು" (1 ತಿಮೊಥೆ 4:15; NIV). ಯೇಸು ಮತ್ತು ತಿಮೊಥೆ ಇವರಿಬ್ಬರ ಪ್ರಗತಿಯು ದೇವರ ವಾಕ್ಯದ ಸತ್ಯದ ಮೇಲೆ ಆಧಾರವಾಗಿದ್ದರೆ, ಪೌಲನ ಮತಾಭಿಮಾನವಾದರೋ ಮಾನವ ಸಂಪ್ರದಾಯಗಳ ಮೇಲೆ ಆಧಾರವಾಗಿತ್ತು. ಆದದರಿಂದ, ಆತನು ಯೆಹೂದ್ಯ ಮತಾಚಾರದಲ್ಲಿ "ಆಸಕ್ತನಾಗಿದ್ದೆನು" ಎಂದು ಹೇಳುವದು ನಕಾರಾತ್ಮಕ ಸೂಚ್ಯಾರ್ಥವನ್ನು ಕೊಡುತ್ತದೆ.

ಪೌಲನು - ಆಗ ತಾರ್ಸದ ಯೌವನಸ್ಥ ಸೌಲನಾಗಿದ್ದವನು - "ನಜರೇತಿನ ಯೇಸುವಿನ ಹೆಸರಿಗೆ ವಿರುದ್ಧವಾಗಿ ಅನೇಕ ಕಾರ್ಯಗಳನ್ನು ನಡಿಸಬೇಕೆಂದು" (ಅಪೊಸ್ತಲರ ಕೃತ್ಯಗಳು 26:9) ಅಂದಿನ ದೈವಶಾಸ್ತ್ರದಿಂದ ಮನವರಿಕೆ ಮಾಡಲ್ಪಟ್ಟಿದ್ದನು, ಆದರೆ ಆತನ ತಪ್ಪು ಅದರಲ್ಲಿ ಅಧಿಕವಾಗಿದ್ದಿರಲು ಸಾಧ್ಯವಿರಲಿಲ್ಲ. ಆತನು ನಾಶಗೊಳಿಸಬೇಕೆಂದು ಹೊರಟಿದ್ದದ್ದು, ಯೇಸುವಿನಲ್ಲಿ ಮೂರ್ತಕರಣಗೊಳಿಸಲ್ಪಟ್ಟಿರುವ ಸತ್ಯವನ್ನೇ (ಯೋಹಾನ 14:6) ಆಗಿತ್ತು. ಆತನು ಒಳ್ಳೇ ಮನಸ್ಸಾಕ್ಷಿಯಿಂದ ಮತ್ತು ಅಭಿಮಾನದ ಮನವರಿಕೆಗಳಿಂದಾಗಿ ನಡೆದುಕೊಂಡಿದ್ದನು (ಅವುಗಳು ಮಾದರಿಯಾದಂಥ ಗುಣಗಳಷ್ಟೆ), ಆದರೆ ಆತನ ಮನಸ್ಸಾಕ್ಷಿ ಮತ್ತು ಮನವರಿಕೆಗಳಿಗೆ ತಪ್ಪಾದ ಮಾಹಿತಿ ಸಿಕ್ಕಿತ್ತು. ವೇದ ಪಂಡಿತರು (ಶಾಸ್ತ್ರಿಗಳು ಹಾಗೂ ಫರಿಸಾಯರು) ಮತ್ತು ಧಾರ್ಮಿಕ-ರಾಜಕಾರಣಿಗಳು (ಸದ್ದುಕಾಯರು) ಸೇರಿಕೊಂಡು ಮಾಡಿದ ಒಳಸಂಚು ಯೇಸುವನ್ನು ಮರಣ ದಂಡನೆಗೆ ಗುರಿ ಮಾಡಿ ಶಿಲುಬೆಗೆ ಹಾಕಲ್ಪಡುವಂತೆ ಮಾಡಿತ್ತು, ಇವರೆಲ್ಲರೂ ದೇವರ ಸರ್ವೋಚ್ಚ ಸತ್ಯದ ಕಡೆಗೆ ಕುರುಡರಾಗಿದ್ದವರು.

**ವಚನ 15.** ಈ ವಚನವು **ಆದರೆ** ಎಂದು ಆರಂಭಗೊಳ್ಳುತ್ತದೆ, ಇದು ಹೊಸ ಒಡಂಬಡಿಕೆಯಲ್ಲಿ ಅತ್ಯಂಥ ಸಾಮಾನ್ಯವಾಗಿ ಕಂಡು ಬರುವ (δέ, *de*) ಎಂಬ ಸಂಬಂಧಾವ್ಯಯದ ಅನುವಾದವಾಗಿರುತ್ತದೆ. ಅದನ್ನು "ಮತ್ತು" ಎಂದು ಸಹ ಅನುವಾದಿಸಬಹುದಾಗಿದೆ. ಕೆಲವು ಸನ್ನಿವೇಶದಲ್ಲಿ, ಈ ಪದದ ಅನುವಾದವನ್ನೇ ಮಾಡದಿದ್ದರೆ ಉತ್ತಮವಾಗಿರುತ್ತದೆ. "ಮತ್ತು" (καί, *kai*) ಎಂಬ ಸಂಬಂಧಾವ್ಯಯವು ಒಂದು ವಾಕ್ಯದ ಹರಿವನ್ನು ಒಂದೇ ದಿಕ್ಕಿನಲ್ಲಿ ಮುಂದುವರೆಯುವಂತೆ ಮಾಡಿದರೆ, "ಆದರೆ" (*de*) ಎಂಬುದು ಸಾಮಾನ್ಯವಾಗಿ ಆ ಹರಿವನ್ನು ತಡೆಯುವಂಥ ಅಥವಾ ಹಿಮ್ಮೋಗವಾಗಿ ಸಾಗುವಂತೆ ಮಾಡುವ ಒಂದು ಅಂಶವನ್ನು ಪರಿಚಯಿಸುತ್ತದೆ. ಹೇಗೂ, *de* ಸಂಬಂಧಾವ್ಯಯವು ಒಂದು ದುರ್ಬಲ ವಿರುದ್ಧಾರ್ಥ ಸೂಚಕವಾಗಿರುತ್ತದೆ. ನಾವು ಈ ವಾಕ್ಯದ ಸನ್ನಿವೇಶವನ್ನು ಆಲೋಚಿಸುವಾಗ, ಪೌಲನು ಇನ್ನೂ ಹೆಚ್ಚು ಬಲವಾದ ವಿರುದ್ಧಾರ್ಥ ಸೂಚಕವಾದ *ἀλλά* (*alla,* "ಆದರೆ") ಎಂಬುದನ್ನು ಬಳಸದಿರುವದು ನಮಗೆ ಆಶ್ಚರ್ಯವುಂಟು ಮಾಡುತ್ತದೆ. ಅಂತೂ, 1:13, 14ರಿಂದ (ಯೆಹೂದಿಮತದಲ್ಲಿ ಆತನು ನಡೆದ ರೀತಿಯ ಕುರಿತು ಹೇಳುವದು) 1:15, 16ರೊಳಗೆ (ಆತನ ಪರಿವರ್ತನೆ ಕುರಿತು ಮಾತಾಡುವದು) ಸ್ಥಿತ್ಯಂತರಗೊಳ್ಳುವಿಕೆಯು ಆತನ ಹಿಂದಿನ ಜೀವಿತದಲ್ಲಿ ಒಂದು ತಿದ್ದುಪಡಿಯ ಕುರಿತಾಗಿ ಬಯಲುಗೊಳಿಸುವದಷ್ಟೇ ಅಲ್ಲ, ಆದರೆ ಪೌಲನ ಕ್ರಿಯೆಯಲ್ಲಿ ಒಂದು ಸಂಪೂರ್ಣ ಸ್ಥಗಿತ ಹಾಗೂ ಹಿಮ್ಮೋಗವನ್ನು

ಬಯಲುಗೊಳಿಸುತ್ತದೆ.

ಪೌಲನು ಮುಂದುವರೆದು 15ನೇ ವಚನದಲ್ಲಿ ಪೂರ್ವದಲ್ಲೇ ನಿರ್ಧರಿಸಲ್ಪಟ್ಟ ಸಂಗತಿಯೊಂದರ ಕುರಿತು ಚರ್ಚಿಸುತ್ತಾನೆ: **ಆದರೆ ನಾನು ತಾಯಿಯ ಗರ್ಭದಲ್ಲಿದ್ದಾಗಲೇ ನನ್ನನ್ನು ಪ್ರತ್ಯೇಕಿಸಿ ತನ್ನ ಕೃಪೆಯಿಂದ ಕರೆದ ದೇವರು . . .** ಈ ಪದಗಳು ದೇವರು ಯೆರೆಮೀಯನಿಗೆ ನುಡಿದ ಮಾತುಗಳನ್ನು ಜ್ಞಾಪಿಸುವಂಥವುಗಳಾಗಿವೆ: "ನಾನು ನಿನ್ನನ್ನು ಗರ್ಭದಲ್ಲಿ ರೂಪಿಸುವದಕ್ಕೆ ಮುಂಚೆ ನಿನ್ನನ್ನು ತಿಳಿದಿದ್ದೆನು; ನೀನು ಉದರದಿಂದ ಬರುವದಕ್ಕೆ ಮೊದಲೇ ನಿನ್ನನ್ನು ಪ್ರತಿಷ್ಠಿಸಿದ್ದೆನು; ಜನಾಂಗಗಳಿಗೆ ಪ್ರವಾದಿಯನ್ನಾಗಿ ನಿನ್ನನ್ನು ನೇಮಿಸಿದ್ದೇನೆ" (ಯೆರೆಮೀಯ 1:5). ಖಂಡಿತವಾಗಿಯೂ, ದಮಸ್ಕದ ದಾರಿಯಲ್ಲಿ ಕ್ರಿಸ್ತನ ದರ್ಶನವನ್ನು ಮಾಡುವ ತನಕವೂ ಈ ತನ್ನ ದೈವಿಕ ಆಯ್ಕೆಯ ಕುರಿತು ತಿಳುವಳಿಕೆಯಿಲ್ಲದವನಾಗಿದ್ದನು. ಅನಂತರ, ಕರ್ತನು ಅನನೀಯನನ್ನು ಪಟ್ಟಣದೊಳಗಿದ್ದ ಪೌಲನ ಬಳಿಗೆ ಕಳುಹಿಸಿದ ವೇಳೆ, ಆತನು ಹೀಗಂದನು, "ನೀನು ಹೋಗು; ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ[25]" (ಅಪೊಸ್ತಲರ ಕೃತ್ಯಗಳು 9:15).

ದೇವರು ಒಂದು ವಿಶೇಷ ಸೇವೆಗೋಸ್ಕರ "[ಪೌಲನನ್ನು] . . . ಪ್ರತ್ಯೇಕಿಸಿ"ದ್ದನು. "ಪ್ರತ್ಯೇಕಿಸಿ" ಎಂಬುದು ಗ್ರೀಕ್ ಭಾಷೆಯ ἀφορίζω (*aphorizō*) ಎಂಬ ಪದದ ಅನುವಾದವಾಗಿದೆ, ಈ ಪದದಿಂದಲೇ ಆಂಗ್ಲದ "ಹೊರಿಜನ್" ಎಂಬ ಪದವು ಬಂದಿರುತ್ತದೆ. ಕ್ಷಿತಿಜವು ಭೂಮಿಯನ್ನು (ನೆಲವಾಗಿರಬಹುದು ಅಥವಾ ಸಮುದ್ರವಾಗಿರಬಹುದು) ಆಕಾಶದಿಂದ ಬೇರ್ಪಡಿಸುವ ಗೋಚರವಾಗುವಂಥ ಭಿನ್ನ ಗೆರೆಯಾಗಿರುತ್ತದೆ. ಇದೇ ಗ್ರೀಕ್ ಪದವು ಅಪೊಸ್ತಲರ ಕೃತ್ಯಗಳು 13:2ರಲ್ಲಿ ಬಳಸಲ್ಪಟ್ಟಿದ್ದು, ಅಲ್ಲಿ ಲೂಕನು ಸಿರಿಯಾದ ಅಂತಿಯೋಕ್ಯದಲ್ಲಿದ್ದ ಕ್ರೈಸ್ತರಿಗೆ ಪವಿತ್ರಾತ್ಮನು ಕೊಟ್ಟ ಅಪ್ಪಣೆಗಳ ಬಗ್ಗೆ ಬರೆಯುತ್ತಾನೆ: "ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ" (ಅಪೊಸ್ತಲರ ಕೃತ್ಯಗಳು 13:2). ಕ್ರಿಯಾಪದವಾದ ὁρίζω (*horizō*) ಎಂಬುದರ ಅರ್ಥವು "ಕೆಲಸ ವಹಿಸು" ಅಥವಾ "ನೇಮಕಗೊಳಿಸು" ಎಂದಾಗಿರುತ್ತದೆ; ಆದರೆ ಅದಕ್ಕೆ ἀπό (*apo*, "ಪ್ರತ್ಯೇಕಿಸಿ") ಎಂಬ ಉಪಸರ್ಗವನ್ನು ಕೂಡಿಸುವದಾದರೆ, ಅದು *aphorizō* ಎಂದಾಗುತ್ತದೆ ಮತ್ತು ಪ್ರತ್ಯೇಕದ ವಿಚಾರವನ್ನು ತೀಕ್ಷ್ಣಗೊಳಿಸುತ್ತದೆ.

ದಮಸ್ಕರ ದಾರಿಯಲ್ಲಿ ಕ್ರಿಸ್ತನ ದರ್ಶನವನ್ನು ಪಡೆಯುವದರ ಜೊತೆಯಲ್ಲಿ (ಅಪೊಸ್ತಲರ ಕೃತ್ಯಗಳು 9:3-8; 26:12-18), ಅಪೊಸ್ತಲರ ಕೃತ್ಯಗಳು 13:2ರ ಘಟನೆಗಳು ಅನ್ಯಜನಾಂಗದ ಮಧ್ಯ ಸೇವಾಧ್ಯೇಯಕ್ಕಾಗಿ ಆತನಿಗಾದ ಕರೆಯುವಿಕೆಯ ದೈವಿಕ ಸ್ವಭಾವದ ಅಚ್ಚನ್ನು ಪೌಲನ ಮನಸ್ಸಿನಲ್ಲಿ ಒತ್ತಿರಬಹುದಾಗಿದೆ. ಅಲ್ಲದೆ ಗಲಾತ್ಯ 1:15ರಲ್ಲಿ ಪೌಲನು *aphorizō* ಎಂಬ ಪದವನ್ನು ಬಳಸಿದ್ದು ಸ್ವತಃ ಪವಿತ್ರಾತ್ಮನು ನುಡಿದ ಆ ಸಂದರ್ಭವನ್ನು ನೆನಪಿಸಿಕೊಂಡದ್ದರಿಂದ ಹೊರಹೊಮ್ಮಿರಬಹುದಾಗಿದೆ, ಪವಿತ್ರಾತ್ಮನ ಮಾತುಗಳು ಹೀಗಿದ್ದವು: "ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ [*aphorizō*]." ಈ ಸ್ವರವು ಕೇಳಿಸುವ ರೀತಿಯಲ್ಲಿ ಆಕಾಶದಿಂದ ಬಂದಿತ್ತೋ ಅಥವಾ ಅಲ್ಲಿ ಕೂಡಿ ಬಂದಿದ್ದ ಪ್ರವಾದಿಗಳೊಬ್ಬರ ಬಾಯಿಂದ ಬಂದಿತೋ ಎಂಬುದನ್ನು ವಾಕ್ಯಭಾಗವು ನಿರ್ದಿಷ್ಟವಾಗಿ ತಿಳಿಸುವದಿಲ್ಲ. ಅದು ಹೇಗೆ ತಿಳಿಸಲ್ಪಟ್ಟಿದ್ದರೂ ಸರಿಯೇ, ಲೂಕನು ಅಪೊಸ್ತಲರ ಕೃತ್ಯಗಳು 13:4ರಲ್ಲಿ ತನ್ನ ಕಥನವನ್ನು ಮುಂದುವರೆಸುತ್ತಾ ಹೀಗೆ ಹೇಳಿದನು, "ಹೀಗೆ ಅವರು ಪವಿತ್ರಾತ್ಮನಿಂದ ಕಳುಹಿಸಿಕೊಂಡವರಾಗಿ ಸೆಲ್ಯೂಕ್ಯಕ್ಕೆ ಬಂದರು; ಅಲ್ಲಿಂದ ಸಮುದ್ರ ಪ್ರಯಾಣವಾಗಿ

ಕುಪ್ರದ್ವೀಪಕ್ಕೆ ಹೋದರು." ಪೌಲನು ಪವಿತ್ರಾತ್ಮನ ನಿರ್ದೇಶನವನ್ನು ಅನುಸರಿಸುವವನಾಗಿ ದೇವರ ಚಿತ್ತಕ್ಕೆ ತನ್ನನ್ನು ಒಪ್ಪಿಸಿಕೊಂಡನು (ನೋಡಿರಿ ಅಪೊಸ್ತಲರ ಕೃತ್ಯಗಳು 16:6-10; 18:9-11; 20:22, 23; 21:10-14; 27:21-26).

ತಾಯಿಯ ಗರ್ಭದಲ್ಲಿದ್ದಾಗಲೇ ಪ್ರತ್ಯೇಕಿಸಲ್ಪಟ್ಟವನಾಗಿ, ಪೌಲನು [ತನ್ನನ್ನು] **ತನ್ನ ಕೃಪೆಯಿಂದ ಕರೆದ ದೇವರು** ಎಂದು ಹೇಳುತ್ತಾನೆ (1:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು ತನ್ನ ಸೇವೆಗೋಸ್ಕರ ಪೌಲನನ್ನು ಆರಿಸಿಕೊಂಡಿದ್ದು ಅವನಿಗೆ ಯಾವಾಗಲೂ ಒಂದು ಚಕಿತಗೊಳಿಸುವ ವಿಷಯವಾಗಿತ್ತು, ಹೆಚ್ಚುಕಡಿಮೆ ಕಲ್ಪಿಸಿಕೊಳ್ಳಲಾದಷ್ಟು ಅಳತೆಯಲ್ಲಿ ದೈವಿಕ ಕೃಪೆಯ ದೊರಕುವಿಕೆಯಾಗಿತ್ತು. ರೋಮಾ 1:5ರಲ್ಲಿ, "ಆತನ ಹೆಸರಿನ ಪ್ರಸಿದ್ಧಿಗಾಗಿ ಎಲ್ಲಾ ಅನ್ಯಜನಗಳಲ್ಲಿ ನಂಬಿಕೆಯೆಂಬ ವಿಧೇಯತ್ವ ಉಂಟಾಗುವದಕ್ಕೋಸ್ಕರ . . . ಕೃಪೆಯನ್ನೂ ಅಪೊಸ್ತಲತನವನ್ನೂ[26] ಹೊಂದಿದೆವು" ಎಂಬುದರ ಕುರಿತು ಮಾತಾಡುತ್ತಾನೆ. ಪೌಲನು ಪಡೆದುಕೊಂಡು ಕೃಪೆಯ ವರವು ಆತನ ಅಪೊಸ್ತಲತ್ವವೇ ಆಗಿತ್ತು. ಆಗಷ್ಟೆ ಹುಟ್ಟಿದ ಸಭೆಯು ವೇಗವಾಗಿ ಬೆಳೆದು ಸೇವೆಯಲ್ಲಿ ಅಭಿವೃದ್ಧಿ ಹೊಂದುವಂತಾಗಬೇಕೆಂದು ದೇವರು ಅನುಗ್ರಹಿಸಿದ ಎಲ್ಲಾ ದೈವದತ್ತ ಶಕ್ತಿಯ ಅತ್ಮೀಕ ವರಗಳಲ್ಲಿಯೂ, ಅಪೊಸ್ತಲತ್ವದಷ್ಟು ಉನ್ನತವಾದ ಶ್ರೇಣಿಯೂ ಬೇರೆ ಯಾವದಕ್ಕೂ ಕೊಡಲ್ಪಟ್ಟಿರುವದಿಲ್ಲ (1 ಕೊರಿಂಥ 12:27-31; ಎಫೆಸ 4:7, 8, 11-13). ಅದೇ ರೀತಿಯಲ್ಲಿಯೇ, ಪೌಲನ ತಾತ್ಪರ್ಯವು ನಿಶ್ಚಯವಾಗಿಯೂ ಇದಕ್ಕಿಂತ ಹೆಚ್ಚಿನದ್ದಾಗಿತ್ತು. ಬೇರೊಂದು ಕಡೆಯಲ್ಲಿ ಆತನು ಹೀಗೆ ಹೇಳಿರುತ್ತಾನೆ,

> ಈ ಸುವಾರ್ತೆಯ ಸೇವೆಯು ನನಗೆ ಕೊಡಲ್ಪಟ್ಟಿತು. ನನಗೆ ಬಲವನ್ನು ದಯಪಾಲಿಸಿದವನು [ἐνδυναμόω, *endunamoō*] ನಮ್ಮ ಕರ್ತನಾದ ಯೇಸು ಕ್ರಿಸ್ತನೇ. ಮೊದಲು ದೂಷಕನೂ ಹಿಂಸಕನೂ ಬಲಾತ್ಕಾರಿಯೂ ಆಗಿದ್ದ ನನ್ನನ್ನು ಆತನು ನಂಬಿಗಸ್ತನೆಂದು ಎಣಿಸಿ ತನ್ನ ಸೇವೆಗೆ [διακονία, *diakonia*] ನೇಮಿಸಿಕೊಂಡದ್ದಕ್ಕಾಗಿ ನಾನು ಆತನಿಗೆ ಸ್ತೋತ್ರ ಸಲ್ಲಿಸುತ್ತೇನೆ. ನಾನು ಅವಿಶ್ವಾಸಿಯಾಗಿ ತಿಳಿಯದೆ ಹಾಗೆ ಮಾಡಿದ್ದರಿಂದ ನನ್ನ ಮೇಲೆ ಕರುಣೆ ಉಂಟಾಯಿತು; ನಮ್ಮ ಕರ್ತನ ಕೃಪೆಯು ಅತ್ಯಧಿಕವಾಗಿದ್ದು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯನ್ನೂ ಪ್ರೀತಿಯನ್ನೂ ನನ್ನಲ್ಲಿ ಉಂಟುಮಾಡಿತು (1 ತಿಮೊಥೆ 1:12-14).

ಕರ್ತನು ಪೌಲನನ್ನು ಅಂಗೀಕರಿಸಿಕೊಂಡನು (ಆತನು ಅಷ್ಟೊಂದು ಕ್ರೂರವಾಗಿ ಆತನನ್ನು ಹಿಂಸೆ ಪಡಿಸಿದ ಬಳಿಕವೂ) ಮತ್ತು ಆತನಿಗೆ ರಕ್ಷಣೆಯ ವರದಾನವನ್ನು ಅನುಗ್ರಹಿಸಿದನು: ಇದು ಕೃಪೆಯು ತನ್ನ ಅಪ್ಪಟ ರೂಪದಲ್ಲಿ ಕಾಣಿಸಿಕೊಂಡದ್ದಾಗಿತ್ತು. ಆತನು ಮನುಷ್ಯರೊಳಗೆ ಸಮಾನತೆಯಲ್ಲಿಲ್ಲದಂಥ ಮಟ್ಟದಷ್ಟು ದೇವರ ಕೃಪೆಯನ್ನು ಅನುಭವಿಸಿದ್ದನು. ಈ ಕೃಪೆಯು ರಕ್ಷಣೆಯ ಯೋಗ್ಯವಲ್ಲದಿದ್ದರೂ ಪಡೆದ ದಯೆಯಷ್ಟೇ ಆಗಿರಲಿಲ್ಲ, ಆದರೆ ತನ್ನ ಪ್ರಿಯ ಕರ್ತನ ಸೇವೆಯನ್ನು ಮಾಡುವದಕ್ಕೆ ದೊರೆತ ಭಾಗ್ಯವೂ ಆಗಿತ್ತು. ಇದಲ್ಲವನ್ನು ದಾಟಿ, ಇದು ಆತನಿಗೋಸ್ಕರ ಶ್ರಮೆಯನ್ನು ಅನುಭವಿಸಿ ಆತನಿಗೋಸ್ಕರ ಮರಣವನ್ನು ಅನುಭವಿಸುವದಕ್ಕೆ ಸಹ ದೊರೆತ ಕೃಪೆಯಾಗಿತ್ತು (ನೋಡಿರಿ ರೊಮಾ 8:16-18; ಫಿಲಿಪ್ಪಿ 3:8-10).

ಅಪೊಸ್ತಲನಾಗಿ ಪೌಲನ ಸ್ಥಾನಮಾನವನ್ನು ಸ್ಥಾಪಿಸುವದಕ್ಕೆ ದೇವರು ಮುಂಚಿತವಾಗಿಯೇ ಆತನನ್ನು ಆರಿಸಿಕೊಂಡಿದ್ದು ಅತಿ ಪ್ರಾಮುಖ್ಯವಾಗಿತ್ತು. ಆತನು ಕ್ರಿಸ್ತನ ಒಬ್ಬ ನಿಜವಾದ ಅಪೊಸ್ತಲನೆಂದು ಅರ್ಹತೆಯನ್ನು ಪಡೆಯುವದಕ್ಕಾಗಷ್ಟರ ಮಟ್ಟಿಗೆ ಅತಿ ತಡವಾಗಿ ದೃಶ್ಯದೊಳಗೆ ಬಂದನು ಎಂಬುದಾಗಿ ಆತನ ವಿರೋಧಿಗಳು ವಾದಿಸಿರಬಹುದಿತ್ತು. ಅಂತೂ, ಬೇರೆ ಅಪೊಸ್ತಲರಾದರೋ ಯೇಸುವಿನ ಭೂಲೋಕದ ಇಡೀ ಸೇವೆಯನ್ನು "ಯೋಹಾನನು ದೀಕ್ಷಾಸ್ನಾನಮಾಡಿಸಿದ್ದು ಮೊದಲುಗೊಂಡು ಯೇಸು ನಮ್ಮ ಬಳಿಯಿಂದ

ಮೇಲಣ ಲೋಕವನ್ನೇರಿದ ದಿನದವರೆಗೂ" ಪ್ರತ್ಯಕ್ಷವಾಗಿ ಕಂಡಿದ್ದರು (ಅಪೊಸ್ತಲರ ಕೃತ್ಯಗಳು 1:22). ಯೇಸುವು "ದಿನತುಂಬದೆ ಹುಟ್ಟಿದವನಂತಿರುವ" ತನಗೆ ಕಾಣಿಸಿಕೊಂಡನೆಂಬುದಾಗಿ ಒಪ್ಪಿಕೊಳ್ಳಲು ಪೌಲನು ಸಂಕೋಚ ಪಡಲಿಲ್ಲ (1 ಕೊರಿಂಥ 15:8). ಹೇಗೂ, ಆತನ ಸಾಕ್ಷಿಯ ಮುಖ್ಯ ಗಮನವು ಯೇಸುವಿನ ಭೂಲೋಕದ ಜೀವನದ ಮೇಲೆ ಮಾತ್ರವೇ ಇರಲಿಲ್ಲ; ಬದಲಾಗಿ, ಅದು ಪುನರುತ್ಥಾನಗೊಂಡ ಹಾಗೂ ಮಹಿಮೆಗೊಂಡ ಕ್ರಿಸ್ತನ ಸುತ್ತ ಕೇಂದ್ರಿಕೃತವಾಗಿತ್ತು. ಈ ಕಾರಣಕ್ಕಾಗಿ, ಆತನ ಸಾಕ್ಷಿಯು ವಿಶಿಷ್ಟವಾಗಿತ್ತು ಹಾಗೂ ಹನ್ನೆರಡು ಮಂದಿ ಅಪೊಸ್ತಲರ ಸಂದೇಶಕ್ಕೆ ಪೂರಕವಾಗಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 22:14, 15). ಪೌಲನ ಅಪೊಸ್ತಲತ್ವವು ಹನ್ನೆರಡು ಮಂದಿ ಶಿಷ್ಯರಿಗಿಂತಲೂ ಅನಂತದರಲ್ಲಿ ಬಂದಿದ್ದಾಗ್ಯೂ, ದೇವರು ಆತನನ್ನು "ತಾಯಿಯ ಗರ್ಭದಲ್ಲಿದ್ದಾಗಲೇ [ಆತನನ್ನು] ಪ್ರತ್ಯೇಕಿಸಿ"ದ್ದನು. ಒಂದು ಅರ್ಥದಲ್ಲಿ, ಆತನ ಅಪೊಸ್ತಲತ್ವವು ಹನ್ನೆರಡು ಮಂದಿ ಶಿಷ್ಯರ ಅಪೊಸ್ತಲತ್ವಕ್ಕಿಂತ ಪೂರ್ವದ ಕಾಲದಲ್ಲಿ ಆತನಿಗೆ ದೊರೆತದ್ದಾಗಿತ್ತು.

**ವಚನ 16a.** ದೇವರ ಕರೆಯ ಉದ್ದೇಶವು **ತನ್ನ ಮಗನನ್ನು ನಾನು ಅನ್ಯಜನರಲ್ಲಿ ಪ್ರಸಿದ್ಧಿಪಡಿಸುವವನಾಗಬೇಕೆಂದು** ಆಗಿತ್ತು. ಆತನ ಆದೇಶವು ವಿಭಿನ್ನವಾಗಿತ್ತು, ಮತ್ತು ಅದರ ಉದ್ದೇಶವು ಮಿಕ್ಕ ಅಪೊಸ್ತಲರ ಕೆಲಸಕ್ಕೆ ಪೂರಕವಾಗಿರಬೇಕು ಎಂಬುದಕ್ಕಾಗಿತ್ತು (2:8, 9). ಪೌಲನು ಅನೇಕ ಸಾರಿ ಕ್ರಿಸ್ತನ ಮುಖಾಂತರವಾಗಿ ಅನ್ಯಜನರನ್ನು ರಕ್ಷಿಸಬೇಕೆಂದು ದೇವರಿಗೆ ಇರುವ ಯೋಜನೆಯ ಕುರಿತು ಬರೆದಿರುತ್ತಾನೆ. ಆತನು ಅದನ್ನು "ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮ" (ಎಫೆಸ 3:9) ಎಂದು ಕರೆದನು. ಅಲ್ಲದೆ ಅದನ್ನು ಆತನು ಈ ಮಾತುಗಳಲ್ಲಿ ಸಹ ವ್ಯಕ್ತಪಡಿಸಿದನು:

> . . . ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ. ದೇವರು ತನ್ನ ಶಕ್ತಿಯ ಪ್ರಯೋಗದಲ್ಲಿ ನನಗೆ ಉಚಿತಾರ್ಥವಾಗಿ ಅನುಗ್ರಹಿಸಿದ ಕೆಲಸವನ್ನನುಸರಿಸಿ ನಾನು ಈ ಸುವಾರ್ತೆಗೆ ಸೇವಕನಾದೆನು (ಎಫೆಸ 3:6, 7).

ಪೌಲನಿಗಾದರೋ, ಈ ಮರ್ಮವು ಸ್ಪಷ್ಟತೆಯೊಂದಿಗೆ ಬಯಲುಗೊಳಿಸಲ್ಪಟ್ಟಿತ್ತು, ಬಹುಶಃ ಬೇರೆ ಯಾವ ಅಪೊಸ್ತಲನಿಗೂ ತಿಳಿಸಲ್ಪಡಲಿಲ್ಲ. ಪೇತ್ರನ ರೀತಿಯಲ್ಲಿ ಪೌಲನು ತನ್ನ ಜೊತೆಯ ಯೆಹೂದಿ ಸಹೋದರರ ಒತ್ತಡಕ್ಕೆ ಮಣಿಯುವದನ್ನು ನಾವು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ, ಹೀಗೆ "ಬಾರ್ನಬನೂ ಅವರ ಕಪಟದ ಸೆಳವಿಗೆ ಬಿದ್ದನು" (2:11-13). ಪೇತ್ರನು ಪಂಚಾಶತ್ತಮದಂದು ಕ್ಷಮಾಪಣೆಯ ವಾಗ್ದಾನ ಮತ್ತು ಪವಿತ್ರಾತ್ಮನ ವರದಾನವು ಯೆಹೂದ್ಯರಿಗೆ ಮಾತ್ರವೇ ದೊರಕುವದಿಲ್ಲ, ಆದರೆ ಅನ್ಯಜನರಿಗೆ ಸಹ ("ದೂರವಾಗಿರುವವರೆಲ್ಲರಿಗೂ"; ಅಪೊಸ್ತಲರ ಕೃತ್ಯಗಳು 2:39) ದೊರಕುವದಾಗಿದೆ ಎಂದು ಬೋಧಿಸಿದ್ದನು. ಹೇಗೂ, ತಾನೇನು ಹೇಳುತ್ತಿದ್ದಾನೆಂಬುದು ಸ್ವತಃ ಪೇತ್ರನಿಗೆ ಪೂರ್ತಿಯಾಗಿ ಅರ್ಥವಾಗಿರಲಿಲ್ಲ. ಕೊರ್ನೇಲ್ಯನ ಮನೆಗೆ ಹೋಗುವಂತೆ ಮತ್ತು ಅನ್ಯಜನಾಂಗದಿಂದ ಪರಿವರ್ತನೆಗೊಂಡ ಪ್ರಥಮ ವಿಶ್ವಾಸಿಗಳಿಗೆ ಬೋಧಿಸುವಂತೆ ಪೇತ್ರನಿಗೆ ಮನವರಿಕೆಯನ್ನುಂಟು ಮಾಡುವದಕ್ಕೆ ಒಂದು ಅದ್ಭುತಕರವಾದ ದರ್ಶನವು ಅಗತ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 10:9-20). ಅದಾದ ನಂತರ, ಆತನು ಯೆರೂಸಲೇಮಿಗೆ ಹಿಂದಿರುಗಿ ಬಂದ ಬಳಿಕ ಮತ್ತು "ಸುನ್ನತಿಯವರು . . . ಅವನ ಕೂಡ ವಿವಾದಿಸಿದ" ವೇಳೆ (ಅಪೊಸ್ತಲರ ಕೃತ್ಯಗಳು 11:2), ಆತನು ಪ್ರತ್ಯುತ್ತರವಾಗಿ ನೀಡಿದ ಪ್ರತಿವಾದವು ಒಂದು ಧೈರ್ಯದ

ಉದಾಹರಣೆಯಾಗಿ ಎದ್ದು ಕಾಣಲಿಲ್ಲ. ಆ ಸಂದರ್ಭದಲ್ಲಿ ಒಂದು ಪ್ರಕೃತಾತೀತವಾದ ವಿದ್ಯಾಮಾನವು ಸಂಭವಿಸಿದ್ದಾಗ್ಯೂ, ಪೇತ್ರನು "ದೇವರನ್ನು ತಡೆಯುವದಕ್ಕೆ ನಾನು ಶಕ್ತನೋ?" ಎಂದು ಕೇಳಿದನು (ಅಪೊಸ್ತಲರ ಕೃತ್ಯಗಳು 11:17).

ಲೋಕದಲ್ಲಿ ದೇವರ ಉದ್ದೇಶವು ಇನ್ನು ಮೇಲೆ ಯೆಹೂದ್ಯರಿಗಷ್ಟೇ ಸೀಮಿತವಾಗಿರುವದಿಲ್ಲ ಎಂಬುದು ಮೊಟ್ಟಮೊದಲು ಪೂರ್ಣವಾಗಿ ಅರ್ಥಮಾಡಿಕೊಂಡವನು ಪೌಲನೇ ಆಗಿದ್ದನು (3:7, 28, 29; 6:15; ರೋಮಾ 9:3–8; ಎಫೆಸ 2:11–22; ಫಿಲಿಪ್ಪಿ 3:2, 3). ವಾಸ್ತವಿಕದಲ್ಲಿ, ದೇವರು "ಎಲ್ಲಾ ದೇಶಗಳ"ನ್ನೊಳಗೊಂಡ ಒಂದು ಮಹಾ ವಿಶ್ವ-ಸಭೆಯ ಕಲ್ಪನೆಯನ್ನು ಹೊಂದಿದ್ದನು, ಅದೇ ರೀತಿಯಲ್ಲಿ ಕರ್ತನು ಆರಂಭದಲ್ಲಿ ಹನ್ನೆರಡು ಮಂದಿ ಶಿಷ್ಯರಿಗೆ ಸುವಾರ್ತೆಯನ್ನು ಸಾರಬೇಕೆಂದು ಆದೇಶಿಸಿದ್ದನು (ಮತ್ತಾಯ 28:19, 20; ನೋಡಿರಿ ಮಾರ್ಕ 16:15, 16). ಹನ್ನೆರಡು ಮಂದಿ ಶಿಷ್ಯರು (ಆ ಸಂದರ್ಭದಲ್ಲಿ ಕೇವಲ ಹನ್ನೊಂದು ಮಂದಿಯಿದ್ದರು) ಅಲ್ಲಿದ್ದರು ಹಾಗೂ ಈ ಮಾತುಗಳನ್ನು ಕೇಳಿಸಿಕೊಂಡರು, ಆದರೆ ಪೌಲನು ಕೇಳಿಸಿಕೊಳ್ಳಲಿಲ್ಲ ಎಂಬುದು ಗಮನಾರ್ಹವಾಗಿರುತ್ತದೆ. ಆಗಲೂ, ಆ ಮಾತುಗಳ ಸೂಕ್ತವಾದ ಅರ್ಥವನ್ನು ಪೌಲನೇ ಮೊದಲು ಗ್ರಹಿಸಿಕೊಂಡನೆಂದು ತೋರುತ್ತದೆ. ಪೌಲನ ಕರೆಯುವಿಕೆಗೆ ಇದು ವಿಶೇಷ ಕಾರಣವಾಗಿತ್ತು: "[ಆತನು] ತನ್ನ ಮಗನನ್ನು ಅನ್ಯಜನರಲ್ಲಿ ಪ್ರಸಿದ್ಧಿಪಡಿಸುವವನಾಗಬೇಕೆಂದು" (ನೋಡಿರಿ 2:7, 8; ಅಪೊಸ್ತಲ ಕೃತ್ಯಗಳು 26:16–18; ರೋಮಾ 11:13, 14).

ಪೌಲನ ಸೇವೆಯ ವಿಶಿಷ್ಟ ರಂಗವು ಈ ಪತ್ರಿಕೆಯಲ್ಲಿ ಅನ್ಯಜನರನ್ನು (ἔθνος, *ethnos*) ಹತ್ತು ಸಾರಿ ಉಲ್ಲೇಖಿಸಲ್ಪಡುವದರೊಂದಿಗೆ ಎತ್ತಿ ತೋರಿಸಲ್ಪಟ್ಟಿರುತ್ತದೆ 1:16; 2:2, 8, 9, 12, 14, 15; 3:8 [ಎರಡು ಸಾರಿ[27]], 14), ಅವುಗಳಲ್ಲೊಂದು ಅಪೊಸ್ತಲರ ಕೃತ್ಯಗಳು 12:3ರಿಂದ ತೆಗೆದುಕೊಂಡ ಉಲ್ಲೇಖವಾಗಿದೆ. 2:3 ಮತ್ತು 3:28ರಲ್ಲಿ "ಅನ್ಯಜನರು" ಎಂಬ ಅರ್ಥದಲ್ಲಿ "ಗ್ರೀಕರು" (Ἕλλην, *Hellēn*) ಎಂದು ಹೆಚ್ಚುವರಿಯಾಗಿ ಎರಡು ಸಾರಿ ಉಲ್ಲೇಖಿಸಲಾಗಿರುತ್ತದೆ.

ಅಲ್ಲದೆ ದೇವರು **ತನ್ನ ಮಗನನ್ನು . . . ಪ್ರಕಟಿಸುವದಕ್ಕೆ** "ಇಚ್ಛೈಸಿದನು" (1:15) ಎಂದು ಸಹ ಪೌಲನು ಹೇಳಿದನು. ಅನ್ಯಜನರಿಗೋಸ್ಕರ ವಿಶೇಷವಾಗಿ ನೇಮಿಸಲ್ಪಟ್ಟ ಅಪೊಸ್ತಲನಾಗಿ, ಆತನು ಈ ನಿರ್ದಿಷ್ಟವಾದ ವಿಷಯದಲ್ಲಿ ಬೇರೆ ಅಪೊಸ್ತಲರಿಗೆ ಪ್ರಕಟಿಸಲ್ಪಟ್ಟಂಥ ಸಂಗತಿಯನ್ನೂ ದಾಟಿ ಹೋಗಿರಬಹುದಾದ ಪ್ರಕಟನೆಯೊಂದನ್ನು ಈತನು ಪಡೆದುಕೊಂಡನು. ಪೌಲನು ಪಡೆದುಕೊಂಡ ಸುವಾರ್ತೆಯು ಸಂಪೂರ್ಣವಾಗಿ ಮನುಷ್ಯನ ಪಾತ್ರವಿಲ್ಲದೆ ದೊರೆತ "ಪ್ರಕಟನೆ" ಮೂಲಕವಾಗಿತ್ತು (1:12). ಆದದರಿಂದ, ಈ ಸುವಾರ್ತೆಯ ಪ್ರಕಟನೆಯ ಒಂದು ಭಾಗವು ವಿಶೇಷವಾಗಿ ಆತನಿಗೋಸ್ಕರವೇ ಆಗಿತ್ತು, ಕನಿಷ್ಠ ಆತನು ಸಾರುವ ಆರಂಭದಲ್ಲಿ ಅದು ಆತನನ್ನು ಉದ್ದೇಶಿಸಿಯೇ ತಿಳಿಸಲ್ಪಟ್ಟಿತ್ತು.

ಪೌಲನು ಯೇಸುವಿನ ಭೂಲೋಕದ ಸೇವೆಗೆ ಸಾಕ್ಷಿಯಾಗಿರಲಿಲ್ಲವಾದ್ದರಿಂದ ಆತನು ಹೇಗೆ ಸುವಾರ್ತೆಯನ್ನು ಸಾರುವದಕ್ಕೆ ಅರ್ಹನಾಗಲು ಸಾಧ್ಯವಾಗಿತ್ತು? "ಕ್ರಿಸ್ತನನ್ನು ಸಾರುವದು," "ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು" ಸಾರುವದು (1 ಕೊರಿಂಥ 1:23; 2:2), ಈ ಮಾತಿನ ಅರ್ಥವು ಶಿಲುಬೆಗೇರಿಸುವ ಪ್ರಕ್ರಿಯೆಯನ್ನು ಹೇಗೆ ನೆರವೇರಿಸಲಾಯಿತು ಎಂಬುದನ್ನು ವಿವರಿಸುವದಕ್ಕಿಂತಲೂ ಅತ್ಯಧಿಕವಾಗಿರುತ್ತದೆ. ಅದರಲ್ಲಿ ಶಿಲುಬೆಗೇರಿಸಲ್ಪಡುವಿಕೆಯ ಗಹನವಾದ ಅರ್ಥ, ಸಂಭಾವ್ಯ ಪ್ರಯೋಜನಗಳು, ಮತ್ತು ಫಲಿತವಾಗಿ ಉದ್ಭವವಾಗುವ ಕರ್ತವ್ಯಗಳು ಸೇರಿರುತ್ತವೆ. ಈ ಉಪದೇಶಗಳು ಕ್ರೈಸ್ತರಾಗಿ ಪರಿವರ್ತನೆಗೊಳ್ಳುತ್ತಿರುವವರಿಗೆ ಸಾರಭೂತವಾಗಿದ್ದವು. ಇತರ ಸಂಗತಿಗಳೊಳಗೆ, ನೀರಿನ

ದೀಕ್ಷಾಸ್ನಾನದಲ್ಲಿ ಅವರು ಆತನಿಗೆ ವಿಧೇಯತ್ವದಲ್ಲಿರುವ ಆಳವಾದ ಮಹತ್ವಪೂರ್ಣತೆಯನ್ನು ಅರ್ಥಮಾಡಿಕೊಳ್ಳುವದು ಅಗತ್ಯವಾಗಿತ್ತು (ರೋಮಾ 6:1-20; ಕೊಲೊಸ್ಸೆ 2:8-17). ಅಲ್ಲದೆ ಕ್ರೈಸ್ತರು ಹೇಗೆ ಆತನಲ್ಲಿ ಜೀವಿಸಬೇಕೆಂಬುದರ ಕುರಿತಾಗಿ ಆತನು ಉಪದೇಶ ಮಾಡಿದ್ದೆಲ್ಲವನ್ನು ಅವರು ಕಲಿತುಕೊಳ್ಳುವ ಅಗತ್ಯ ಸಹ ಇತ್ತು. ಪೌಲನು ಈ ಪ್ರಕ್ರಿಯೆಯನ್ನು "ಕ್ರಿಸ್ತನ ಧರ್ಮವನ್ನು . . . ಕಲಿತು[ಕೊಳ್ಳುವದು]" ಎಂದು ಕರೆದನು (ಎಫೆಸ 4:20).[28]

"ಕ್ರಿಸ್ತನನ್ನು ಸಾರುವದು" ಎಂದರೆ ಯೇಸುವು ತನ್ನ ಅಪೊಸ್ತಲರಿಗೆ, ಶಿಷ್ಯರನ್ನಾಗಿ ಮಾಡುವ, ಅದರ ಫಲಿತವಾಗಿ "ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸುವ" ಹಾಗೂ "[ಯೇಸು] ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡುವ" ಉದ್ದೇಶದಿಂದ ಮಾಡಬೇಕೆಂದು ಆದೇಶಿಸಿದ ಎಲ್ಲವನ್ನು ಉಪದೇಶಿಸುವದು ಎಂದರ್ಥವಾಗಿದೆ (ಮತ್ತಾಯ 28:19, 20).[29] ಕ್ರಿಸ್ತನನ್ನು ಆತನ ಪೂರ್ಣವಾಗಿ ಅಧಿಕಾರ ಹೊಂದಿರುವ ಪ್ರತಿನಿಧಿಗಳು (ಅಪೊಸ್ತಲರು) ಸಾರಿದ ರೀತಿಯಲ್ಲಿಯೇ ಸಾರುವದಾದರೆ ಮತ್ತು ಸಂದೇಶವನ್ನು ಕೇಳುವವರು "ಕ್ರಿಸ್ತನ ಧರ್ಮವನ್ನು ಕಲಿತುಕೊಳ್ಳುವದಾದರೆ," ಶಿಷ್ಯರನ್ನಾಗಿ ಮಾಡುವ ಪ್ರಕ್ರಿಯೆಯನ್ನು ನಂಬಿಗಸ್ತಿಕೆಯಿಂದ ಆರಂಭಗೊಳಿಸಲಾಗಿದೆ ಎಂದಾಗಿರುತ್ತದೆ. ಈ ಪ್ರಕ್ರಿಯೆಯು ಬಳಿಕ ಶಿಷ್ಯರಲ್ಲಿ ವೈಶಿಷ್ಟ್ಯವಾಗಿರುವ ಸಮರ್ಪಣೆ, ವಿಧೇಯತೆಯ ಜೀವಿತದಲ್ಲಿ ಮುಂದುವರೆಯುತ್ತದೆ.

ಮನುಷ್ಯನ ಇಚ್ಛೆಯಿಂದಲ್ಲದೆ, ದೇವರ ಇಚ್ಛೆಯಿಂದಾಗಿಯೇ, ಪೌಲನು ಅಪೊಸ್ತಲನಾಗಿ ತನ್ನ ಸೇವೆಯನ್ನು ಪಡೆದುಕೊಂಡಿದ್ದನು. ಆತನು **ನನ್ನೊಳಗೆ** (ἐν ἐμοί, *en emoi*) ತನ್ನ ಮಗನನ್ನು ಪ್ರಕಟಗೊಳಿಸಬೇಕೆಂಬುದು ದೇವರ ಚಿತ್ತವೆಂದು ಹೇಳಿದನು. ಪೌಲನು ದೇವರ ಪ್ರಕಟನೆಯ ಸಾಧನವಾಗಿದ್ದನೇ ಹೊರತು ಮತ್ತೇನೂ ಅಲ್ಲ - ದೇವರ ಮುಖವಾಣಿಯಾಗಿದ್ದನು. ದೇವರಿಂದ ಬಂದ ಪ್ರಕಟನೆಯನ್ನು ಮಾನವ ಮಧ್ಯವರ್ತಿಯಾದ ಆತನು ಕೇವಲ ಘೋಷಣೆ ಮಾಡಿದ್ದನಷ್ಟೆ.

ಕ್ರಿಸ್ತನು ಪೌಲನಿಂದ ಸಾರಲ್ಪಟ್ಟ ಸಂದೇಶದಲ್ಲಿ ತೋರ್ಪಡಿಸಲ್ಪಟ್ಟದ್ದು ಮಾತ್ರವೇ ಅಲ್ಲ, ಆದರೆ ಆತನ ಜೀವಿತವು ಕ್ರಿಸ್ತನ ಪ್ರಭಾವವನ್ನು ಪ್ರತಿಫಲಿಸಿದ ಹಾಗೆ ಆತನ ಜೀವಿತದಲ್ಲಿ ಸಹ ತೋರ್ಪಡಿಸಲ್ಪಟ್ಟಿದ್ದನು. (ಕೊಲೊಸ್ಸೆ 1:27ನೇ ವಚನವು "ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ" ಎಂದು ಹೇಳುತ್ತದೆ.) ಪೌಲನು ಮೋಶೆಯ ಮೂಲಕವಾಗಿ ಬಂದ ಒಡಂಬಡಿಕೆಯ ಕಡಿಮೆಯಾದ ಪ್ರಭಾವ ಹಾಗೂ ಅಪೊಸ್ತಲರಿಂದ ಪ್ರಕಟಿಸಲ್ಪಟ್ಟ ಹೊಸ ಒಡಂಬಡಿಕೆಯ ಹೋಲಿಸಲಾಗದಂಥ ಹೆಚ್ಚಿನ ಪ್ರಭಾವದೊಂದಿಗೆ ತೀಕ್ಷ್ಣವಾದ ವಿರುದ್ಧ ಹೋಲಿಕೆಯನ್ನು ಮಾಡುತ್ತಾನೆ. ಆತನು 2 ಕೊರಿಂಥ 3:18ರಲ್ಲಿ ಹೀಗೆ ಹೇಳಿದನು, "ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ" (NIV). 2 ಕೊರಿಂಥ 3ನೇ ಅಧ್ಯಾಯದ ಸನ್ನಿವೇಶದಲ್ಲಿ ಪೌಲನು ಪ್ರಾಥಮಿಕವಾಗಿ ಹೊಸ ಒಡಂಬಡಿಕೆಯ ಪ್ರಕಟನೆಗಾರರ ಬಗ್ಗೆ (ಅಪೊಸ್ತಲರು ಮತ್ತು ಪ್ರವಾದಿಗಳು) ಮಾತಾಡುತ್ತಿದ್ದಾನಾದರೂ, ಅವರ ಸೇವೆ ಮುಖಾಂತರವಾಗಿ ಒಂದು ದೊಡ್ಡ ರೂಪಾಂತರವು ಸಂಭವಿಸಿತ್ತು. ಪೌಲನು ಇಲ್ಲಿ ಮೌಖಿಕ ಪ್ರಕಟನೆ ಕುರಿತು ಮಾತ್ರವೇ ಅಲ್ಲ, ಆದರೆ ಸ್ವತಃ ಪ್ರೇರಿತ ಪ್ರಕಟನೆಗಾರರಲ್ಲಿ ಉಂಟು ಮಾಡಲ್ಪಟ್ಟ ಹಂತ ಹಂತವಾದ ಬದಲಾವಣೆಯನ್ನು ಕುರಿತು ಸಹ ಉಲ್ಲೇಖಿಸುತ್ತಿರುವ ಸಾಧ್ಯತೆಯಿದೆ. ಈ ಬದಲಾವಣೆಯು

ಅವರನ್ನು ತಮ್ಮ ಜೀವಿತಗಳ ಮುಖಾಂತರವಾಗಿ ಹೆಚ್ಚು ಪರಿಪೂರ್ಣವಾಗಿ ಕ್ರಿಸ್ತನನ್ನು ಪ್ರಕಟಗೊಳಿಸುವಂತೆ ಶಕ್ತಗೊಳಿಸಿತು.

**ವಚನ 16b.** ಕ್ರಿಸ್ತನನ್ನು ಸಾರುವದಕ್ಕಾಗಿ ದೇವರು ತನ್ನನ್ನು ಆರಿಸಿಕೊಂಡ ಕುರಿತು ವಿವರಿಸಿದ ಬಳಿಕ, ಪೌಲನು ಹೀಗೆ ಬರೆಯುತ್ತಾನೆ, **ನಾನು ಮನುಷ್ಯರ ಆಲೋಚನೆಯನ್ನು ವಿಚಾರಿಸದೆ**. ಗ್ರೀಕ್ ವಾಕ್ಯದಲ್ಲಿ, "ಆಗಲೇ" (εὐθέως, *eutheōs*) ಎಂಬುದನ್ನು ಅನುವಾದಿಸಿರುವ ಪದವು ಒಂದು ಪರಿಚ್ಛೇದದೊಂದಿಗೆ ಆರಂಭಗೊಳ್ಳುತ್ತದೆ.[30] ಆದದರಿಂದ ಅದು "ಆಗಲೇ ನಾನು ಮನುಷ್ಯರ ಆಲೋಚನೆಯನ್ನು ವಿಚಾರಿಸದೆ [ಅಥವಾ 'ಸಮಾಲೋಚನೆ' ಮಾಡದೆ]" ಎಂದು ಅನುವಾದಿಸಲ್ಪಡಬಹುದಾಗಿದೆ. ಈ ಹೇಳಿಕೆಯು ಅಪೊಸ್ತಲರ ಕೃತ್ಯಗಳು 9:19b, 20ರಲ್ಲಿ ಲೂಕನು ಪೌಲನ ಪರಿವರ್ತನೆಯ ನಂತರದಲ್ಲಾದ ಘಟನೆಗಳ ಕುರಿತ ತಿಳಿಸುವ ಕಥನವನ್ನು ಜ್ಞಾಪಿಸುತ್ತದೆ: "ಮುಂದೆ ಅವನು ದಮಸ್ಕದಲ್ಲಿದ್ದ ಶಿಷ್ಯರ ಸಂಗಡ ಕೆಲವು ದಿವಸ ಇದ್ದು ತಡಮಾಡದೆ [ಎಯುಥೇಯೊಸ] ಸಭಾಮಂದಿರಗಳಲ್ಲಿ ಯೇಸುವಿನ ವಿಷಯವಾಗಿ ಆತನೇ ದೇವಕುಮಾರನೆಂದು ಸಾರುವದಕ್ಕೆ ಪ್ರಾರಂಭಮಾಡಿದನು." "ತಡಮಾಡದೆ" ಎಂಬ ಪದವು ಪೌಲನಿಗಾದ ಪ್ರೇರಣೆಯ ಮತ್ತು ಆತನು ಸುವಾರ್ತೆಯನ್ನು ಸಂಪಾಸಿದ್ದರ ಸ್ವಭಾವವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ನಮಗೆ ಒಂದು ಪ್ರಾಮುಖ್ಯವಾದ ಸುಳಿವು ಆಗಿರುತ್ತದೆ. ಪೌಲನ ಒಬ್ಬ ನಿಕಟ ಸಹಪಾಠಿಯಾಗಿದ್ದ ಮತ್ತು ಅಪೊಸ್ತಲರ ಕೃತ್ಯಗಳ ಕಥನವನ್ನು ಬರೆದವನಾಗಿದ್ದ ಲೂಕನಿಗೆ, ಗಲಾತ್ಯದವರಿಗೆ ಬರೆದ ಪತ್ರಿಕೆಯ ಪರಿಚಯವಿತ್ತೋ ಎಂಬುದಾಗಿ ಒಬ್ಬನು ಚಕಿತಗೊಳ್ಳಲೇ ಬೇಕಾಗುತ್ತದೆ.

"ವಿಚಾರಿಸು" (προσανατίθημι, *prosanatithēmi*) ಎಂಬ ಪದದ ಅಥವಾ "ಸಮಾಲೋಚಿಸು" (NKJV; NRSV) ಎಂಬ ಪದದ ವಿಷಯದಲ್ಲಿ ನೋಡುವದಾದರೆ, ಒಬ್ಬನು ಆರೋಗ್ಯ ಸಮಸ್ಯೆಗಾಗಿ ವೈದ್ಯರನ್ನು ವಿಚಾರಿಸುವದನ್ನು ಅಥವಾ ತೆರಿಗೆಯ ಸಲಹೆಗಾಗಿ ಲೆಕ್ಕಿಗನೊಬ್ಬನನ್ನು ಆಲೋಚನೆ ಕೇಳುವ ಉದಾಹರಣೆಯನ್ನು ಯೋಚಿಸಬಹುದು. ಅರ್ಥವನ್ನು GNT ತರ್ಜುಮೆಯಲ್ಲಿ ಬಯಲುಗೊಳಿಸಲಾಗಿರುತ್ತದೆ: "ನಾನು ಸಲಹೆಯನ್ನು ಕೇಳಲು ಯಾರ ಬಳಿಗೂ ಹೋಗಲಿಲ್ಲ." LB ತರ್ಜುಮೆಯಲ್ಲಿ ಪೌಲನು ಹೀಗೆ ಹೇಳುವದಾಗಿ ಇರುತ್ತದೆ, "ನಾನು ತಕ್ಷಣವೇ ಹೊರಟು ಅದರ ಬಗ್ಗೆ ಯಾರೊಂದಿಗೆ ಮಾತಾಡಲಿಲ್ಲ." ಇಲ್ಲಿ ಅಂಶವು ಸ್ಪಷ್ಟವಾಗಿದೆ: ಸುವಾರ್ತೆಯು ಪೌಲನಿಗೆ "ಪ್ರಕಟನೆ" (1:11, 12) ಮೂಲಕ ಕೊಡಲ್ಪಟ್ಟಿತ್ತು. ಆತನು ಅದಕ್ಕೋಸ್ಕರ ಯಾವ ಮನುಷ್ಯನಿಗೂ ಋಣಸ್ಥನಾಗಿರಲಿಲ್ಲ, ಆದರೆ ಅದನ್ನು ನೇರವಾಗಿ ಕರ್ತನಿಂದಲೇ ಪಡೆದುಕೊಂಡಿದ್ದನು.

"ಮನುಷ್ಯರ" ಎಂಬ ಪದಗುಚ್ಛವು ಶಾಸ್ತ್ರಗಳಲ್ಲಿ ಬಹಳ ಸರ್ವಸಾಧಾರಣವಾಗಿದ್ದು ಅದಕ್ಕೆ ವ್ಯಾಖ್ಯೆಯನ್ನು ಕೊಡುವ ಅಗತ್ಯವೇ ಇರುವದಿಲ್ಲ. ಅದು "ಮಾನವರು," "ಒಬ್ಬ ಮನುಷ್ಯ," ಅಥವಾ "ಮನುಷ್ಯ ರೀತಿ" ಎಂಬುದಕ್ಕೆ ಸಮಾನವಾಗಿದೆ. ಮತ್ತಾಯ 16:16ರಲ್ಲಿ ಪೇತ್ರನು "ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು" ಎಂದು ಅರಿಕೆಯನ್ನು ಮಾಡಿದ ಬಳಿಕ, **ಯೇಸುವು ಆತನಿಗೆ ಒಂದು ಆಶೀರ್ವಾದವನ್ನು ಉಚ್ಚರಿಸುತ್ತಾ ಹೀಗೆ ಹೇಳಿದನು**, "ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು" (ಮತ್ತಾಯ 16:17). ಇಲ್ಲಿ ಭಿನ್ನ ವಿರುದ್ಧ ಹೋಲಿಕೆಯು ಮನುಷ್ಯ (ಪ್ರಾಕೃತವಾದ ಶಾರೀರಿಕ ಜೀವಿ) ಹಾಗೂ ದೇವರ (ಆತ್ಮಸ್ವರೂಪನು) ನಡುವೆ ಆಗಿದೆ. ಅದೇ ರೀತಿಯಲ್ಲಿಯೇ, ಪೌಲನು ಭೌತಿಕ ಸೃಷ್ಟಿಯ ಪ್ರಾಕೃತ ಮಂಡಲದಿಂದ ಆತ್ಮೀಕ

ಮಂಡಲದೊಳಗೆ ಸಾಗುವದಕ್ಕೆ ಮನುಷ್ಯನು ಹಾದುಹೋಗಬೇಕಾದ ರೂಪಾಂತರದ ಕುರಿತು ಮಾತಾಡುವ ವೇಳೆ, ಹೀಗೆ ಹೇಳಿದನು "ರಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು; ಲಯವಾಗುವ ವಸ್ತು ನಿರ್ಲಯಪದವಿಗೆ ಬಾಧ್ಯವಾಗುವದಿಲ್ಲ" (1 ಕೊರಿಂಥ 15:50; ನೋಡಿರಿ ಫಿಲಿಪ್ಪಿ 3:20, 21). ಪುನಃ, ಇಲ್ಲಿ ಅಂಶವು ಏನೆಂದರೆ ಪೌಲನು ತಾನು ಸಾರಿ ಸುವಾರ್ತೆಯ ವಿಷಯಕ್ಕೆ ಬಂದರೆ ಯಾರೊಬ್ಬರ ಋಣದಲ್ಲಿಯೂ ಇರಲಿಲ್ಲ. ಆತನು ಅದನ್ನು ಕರ್ತನಿಂದ ಪಡೆದುಕೊಂಡಿದ್ದನು.

**ವಚನ 17.** ಅಪೊಸ್ತಲನು ಮುಂದುವರೆಯುತ್ತಾನೆ, **ಯೆರೂಸಲೇಮಿಗೆ ನನಗಿಂತ ಮುಂಚೆ ಅಪೊಸ್ತಲರಾಗಿದ್ದವರ ಬಳಿಗೂ ಹೋಗದೆ ಅರಬಸ್ಥಾನಕ್ಕೆ ಹೋಗಿ ತಿರಿಗಿ ದಮಸ್ಕಕ್ಕೆ ಬಂದೆನು.** ಈ ಹೇಳಿಕೆಯ ಮೊದಲ ಭಾಗದ ಸನ್ನಿವೇಶವು ಪೌಲನ ಪರಿವರ್ತನೆಯ ಬಳಿಕ ಸಂಭವಿಸಿದ ಘಟನಾವಳಿಯನ್ನು ಮುಂದುವರೆಸುತ್ತದೆ. ಇದು ಒಂದು ಸಾಮಾನ್ಯ ಹೇಳಿಕೆಯಾಗಿರಬೇಕೆಂಬ ಉದ್ದೇಶ ಹೊಂದಿದ್ದಲ್ಲ, ಯಾಕೆಂದರೆ ಆತನು ಅನಂತರದಲ್ಲಿ ಯೆರೂಸಲೇಮಿಗೆ ಹಲವಾರು ಸಾರಿ ಭೇಟಿಗಳನ್ನು ಕೊಟ್ಟನಷ್ಟೆ. ಆತನ ಪತ್ರಿಕೆ ಹಾಗೂ ಅಪೊಸ್ತಲರ ಕೃತ್ಯಗಳು ಎರಡಲ್ಲಿಯೂ, ಪೌಲನು ಈ ಮುಂಚೆಯೇ ತನ್ನನ್ನು "ಸಭಾಮಂದಿರಗಳಲ್ಲಿ ಯೇಸುವಿನ ವಿಷಯವಾಗಿ ಆತನೇ ದೇವಕುಮಾರನೆಂದು ಸಾರುವದಕ್ಕೆ" ಸಿದ್ಧಪಡಿಸಿಕೊಂಡಿದ್ದನು ಎಂಬುದು ಸ್ಪಷ್ಟವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 9:20). ಲೂಕನ ಪ್ರಕಾರವಾಗಿ, ಇದು ಆತನ ಪರಿವರ್ತನೆಗೊಂಡ ಬಳಿಕ "ತಡಮಾಡದೆ" ಆಗಿದ್ದು, ಮತ್ತು ಈ ಸಾರುವಿಕೆಯು ದಮಸ್ಕದಲ್ಲಿ ಮಾಡಲ್ಪಟ್ಟಿತ್ತು. ಪೌಲನು ಸಭಾಮಂದಿರಗಳಲ್ಲಿ ಕರ್ತನನ್ನು ಸಾರಿದ ಬಳಿಕ ಒಂದು ಪುನರಾವರ್ತಿಸಲ್ಪಡುವ ನಮೂನೆಯಾಗಿ ಮಾರ್ಪಡುವದೋ ಎಂಬಂತೆ, "ಯೆಹೂದ್ಯರು ಅವನನ್ನು ಕೊಲ್ಲಬೇಕೆಂದು ಆಲೋಚನೆಮಾಡಿಕೊಂಡರು" ಎಂದು ಲೂಕನು ಹೇಳುತ್ತಾನೆ (ಅಪೊಸ್ತಲರ ಕೃತ್ಯಗಳು 9:23-25). ಈ ವಚನಗಳ ಬಳಿಕ, ಯೆರೂಸಲೇಮಿನಲ್ಲಿರುವ ಶಿಷ್ಯರೊಂದಿಗೆ ಸಹವಾಸವಿಟ್ಟುಕೊಳ್ಳಲು ಪೌಲನು ಆರಂಭದಲ್ಲಿ ಮಾಡಿದ ಪ್ರಯತ್ನಗಳ ಕುರಿತು ಹಾಗೂ ಆತನು ನಿಜವಾಗಿಯೂ ಒಬ್ಬ ಶಿಷ್ಯನಾಗಿದ್ದಾನೆಂಬುದನ್ನು ಯಾರೂ ನಂಬದೆ ಹೋದ ಕಾರಣ ಎದುರಿಸಿದ ಕಷ್ಟಗಳನ್ನು ಕುರಿತು ಲೂಕನು ಹೇಳಿದನು (ಅಪೊಸ್ತಲರ ಕೃತ್ಯಗಳು 9:26). ಪೌಲನು ಮೊದಲ ಬಾರಿ ಯೆರೂಸಲೇಮಿಗೆ ಭೇಟಿ ಕೊಟ್ಟ ಕುರಿತಾಗಿ ಗಲಾತ್ಯದವರಿಗೆ ಬರೆದ ಪತ್ರಿಕೆಯನ್ನು ತನ್ನ ಸ್ವಂತ ಆವೃತ್ತಿಯನ್ನು ಬರೆಯುವ ವೇಳೆ ಈ ವಾಸ್ತವಾಂಶವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ, ಆದರೆ ಲೂಕನು ತಿಳಿಸದೆ ಹೋದಂಥ ಕೆಲವೊಂದು ಹೆಚ್ಚುವರಿ ಮಾಹಿತಿಯನ್ನಂತೂ ನಮಗೆ ನೀಡುತ್ತಾನೆ. ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ, ತಾನು ಅರಬಸ್ಥಾನಕ್ಕೆ ಹೊರಟು ಹೋಗಿದ್ದನು, ತಾನು ದಮಸ್ಕಕ್ಕೆ ಹಿಂದಿರುಗಿದ್ದನು, ಮತ್ತು ಆತನು ಮೊದಲ ಭೇಟಿಯನ್ನು ಮಾಡಲು ಹೊರಟ ಉದ್ದೇಶವು ಪೇತ್ರನ ಪರಿಚಿತಿಯನ್ನು ಮಾಡಿಕೊಳ್ಳುವದಾಗಿತ್ತೆಂದು ಪೌಲನು ನಮಗೆ ತಿಳಿಯಪಡಿಸುತ್ತಾನೆ (1:17, 18).

ಎರಡು ಕಥನಗಳ ನಡುವೆ ಯಾವದೇ ತದ್ವಿರುದ್ಧತೆಯೂ ಇರುವದಿಲ್ಲ, ಮತ್ತು ಅವರೆಡನ್ನು ಒಟ್ಟಿಗೆ ಕೂಡಿಸುವಾಗ ಸಮ್ಮಿಶ್ರಣವು ಇನ್ನಷ್ಟು ಆಸಕ್ತಿಕರವಾಗುತ್ತದೆ. ಘಟನೆಗಳು ಯಾವ ಕ್ರಮಾನುಸಾರದಲ್ಲಿ ಸಂಭವಿಸಿದವೆಂದು ನಿಖರವಾಗಿ ತಿಳಿಯುವದು ಕಷ್ಟಕರವಾಗಿರುತ್ತದೆ. ಹೆಚ್ಚು ಉದಾರವಾದಿಗಳಾಗಿರುವ ಕೆಲವರು ಅವುಗಳಲ್ಲಿ ಸಮನ್ವಯವನ್ನುಂಟು ಮಾಡಲು ಪ್ರಯತ್ನಿಸುವಾಗ ಎದುರಾಗುವ ಕಷ್ಟಗಳ ಕಾರಣದಿಂದಾಗಿ ಎರಡರಲ್ಲೊಂದು ಆವೃತ್ತಿಯನ್ನು ನಿರಾಕರಿಸುತ್ತಾರೆ. ಒಪ್ಪಿಕೊಳ್ಳಬೇಕಾಗಿರುವ ಪ್ರಕಾರ, ಕೆಲವು ಬಹಳ ನಿಜವಾದ ಸಮಸ್ಯೆಗಳು, ವಿಶೇಷವಾಗಿ ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪೌಲನು ಅನಂತರ ಯೆರೂಸಲೇಮಿಗೆ

ಹಲವಾರು ಬಾರಿ ಭೇಟಿ ಕೊಟ್ಟಿರುವದನ್ನು ಪುನರಾವಲೋಕಿಸಿ ಅವುಗಳನ್ನು ಗಲಾತ್ಯದವರಿಗೆ ಬರೆದ ಪತ್ರಿಕೆ 2ನೇ ಅಧ್ಯಾಯದಲ್ಲಿ ಪೌಲನು ನೀಡುವ ವಿವರದೊಂದಿಗೆ ಸಮನ್ವಯಗೊಳಿಸಲು ಪ್ರಯತ್ನಿಸುವಾಗ ಸಮಸ್ಯೆಗಳು ಎದುರಾಗುತ್ತವೆ. ಅಲ್ಲದೆ ಅಂತಿಯೋಕ್ಯದಲ್ಲಿ ಪೇತ್ರನೊಂದಿಗೆ ಆದ ನೋವುಕರವಾದ ಭೇಟಿಯ ದಿನಾಂಕವನ್ನು ನೀಡುವದು ಸಹ ಒಂದು ಸವಾಲಾಗಿರುತ್ತದೆ, ಅದರ ಕುರಿತು ಲೂಕನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಬರೆಯುವದಿಲ್ಲ.

ಇಂಥ ಸಮಸ್ಯೆಗಳನ್ನು ಬಗೆಹರಿಸಲು ನೋಡುವ ವೇಳೆ, ಅವುಗಳಲ್ಲಿ ಯಾವ ಕಥನವು ಸ್ವತಃ ಸಂಪೂರ್ಣವಾದದ್ದಲ್ಲ ಎಂಬುದನ್ನು ಗ್ರಹಿಸುವದು ಆಜ್ಞಾರ್ಥಕವಾಗಿರುತ್ತದೆ. ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ತನ್ನ ಕಥನವನ್ನು ಬರೆಯುವ ವೇಳೆ ತನ್ನದೇ ಆಗಿರುವ ಉದ್ದೇಶವನ್ನು ಹೊಂದಿದ್ದನು, ಮತ್ತು ಪೌಲನು, ತನ್ನ ಅಪೊಸ್ತಲತ್ವದ ನಿರ್ದಿಷ್ಟವಾದಂಥ ಅಂಶದ (ಅಂದರೆ, ಅದರ ಪ್ರಾಮಾಣ್ಯದ ಸಮರ್ಥನೆ ಮಾಡುವದು) ಮೇಲೆಯೇ ಮುಖ್ಯವಾದ ಗಮನವನ್ನು ಹರಿಸುವವನಾಗಿ, ಬೇರೊಂದು ಉದ್ದೇಶವನ್ನು ಹೊಂದಿದ್ದನು. ಒಬ್ಬ ಲೇಖಕನಿಗೆ ಯಾವದು ಯುಕ್ತವೆಂದು ಕಂಡಿತ್ತೋ ಅದು ಮತ್ತೊಬ್ಬನು ಮಾಡುವ ವಾದಕ್ಕೆ ಪ್ರಾಮುಖ್ಯವಲ್ಲದ್ದಾಗಿರಬಹುದು. ಯಾವದೇ ಬೈಬಲ್ ಪಂಡಿತನು ಕಠಿಣತೆಗಳನ್ನು ಎದುರುಗೊಳ್ಳುವಾಗಲೆಲ್ಲಾ, ಇವುಗಳನ್ನು ಪ್ರೇರಿತ ಲೇಖಕರ ವಶಕ್ಕೆ ಕೊಟ್ಟು ದೇವೋಕ್ತಿಗಳನ್ನೇ ಪ್ರಶ್ನೆ ಮಾಡುವ ಧೈರ್ಯಕ್ಕೆ ಕೈ ಹಾಕುವಷ್ಟರ ಮಟ್ಟಿಗೆ ತನ್ನ ಸ್ವಂತ ಚುರುಕು ಬುದ್ಧಿವಂತಿಕೆಯಲ್ಲಿ ದೃಢವಿಶ್ವಾಸವನ್ನು ತೋರುವದು ದುಃಖಕರವಾದದ್ದು. ಎರಡೂ ಕಥನಗಳಲ್ಲಿ ಸಮನ್ವಯವನ್ನುಂಟು ಮಾಡುವದರಲ್ಲಿ ಎದುರಾಗುವ ಸಕಲ ಕಠಿಣತೆಗಳನ್ನೂ ಬಗೆಹರಿಸುವ ಸಾಮರ್ಥ್ಯವಿದೆ ಎಂದು ಹೇಳಿಕೊಳ್ಳಕೂಡದಾದರೂ, ನಮ್ಮ ಉದ್ದೇಶವು ಯಾವಾಗಲೂ ಲಭ್ಯವಿರುವ ಪುರಾವೆಯನ್ನು ಜಾಗರೂಕತೆಯಿಂದ ತನಿಖೆ ಮಾಡುವದೇ ಆಗಿರತಕ್ಕದ್ದು. ಆಗ ನಾವು ಕಠಿಣ ಸಮಸ್ಯೆಗಳಿರುವದಾದರೆ, ಅವುಗಳು ನಮ್ಮ ಅಜ್ಞಾನದಿಂದ ಹೊರಹೊಮ್ಮುವವೇ ಹೊರತು ನಮಗೆ ಪ್ರಕಟಗೊಳಿಸುವದಕ್ಕೆ ದೇವರು ಸರಿಯೆಂದು ಕಂಡ ಸಂಗತಿಗಳನ್ನು ಕುರಿತು ಒಂದು ಹೊಂದಾಣಿಕೆಯಿರುವ ಕಥನವನ್ನು ಕೊಡುವದಕ್ಕೆ ದೇವರಿಗೆ ಸಾಮರ್ಥ್ಯವಿಲ್ಲದಿರುವಿಕೆಯಿಂದಲ್ಲ ಎಂಬ ತಿಳುವಳಿಕೆಯೊಂದಿಗೆ ಮುನ್ನಡೆಯುವೆವು.

17ನೇ ವಚನದ ಪ್ರಕಾರ, ಯೆರೂಸಲೇಮಿಗೆ ಪ್ರಯಾಣಿಸುವ ಬದಲಾಗಿ, ಪೌಲನು **ಅರಬಸ್ಥಾನಕ್ಕೆ ಹೋಗಿ ತಿರಿಗಿ ದಮಸ್ಕಕ್ಕೆ ಬಂದನು**. ಈ ವಿವರಗಳು ಹೇಗೆ ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಲೂಕನು ಬರೆಯುವ ವಿವರಣೆಯಲ್ಲಿ ಸರಿಹೊಂದುತ್ತವೆ? ಪೌಲನು (ಸೌಲನು) ದಮಸ್ಕದ ದಾರಿಯಲ್ಲಿ ಸಂಭವಿಸಿದ ಪುನರುತ್ಥಾನಗೊಂಡ ಕರ್ತನ ದರ್ಶನದಿಂದ ಕುರುಡನಾದ ಬಳಿಕ, ಆತನ ಕೈ ಹಿಡಿದು ಪಟ್ಟಣದೊಳಗೆ ಕರೆದುಕೊಂಡು ಹೋಗಲಾಗಿತ್ತು. ಆತನು ಮೂರು ದಿನಗಳ ಕಾಲ ಆ ಸ್ಥಿತಿಯಲ್ಲಿ ಕಳೆದನು, ಅನ್ನವನ್ನಾಗಲಿ ನೀರನ್ನಾಗಲಿ ಸಹ ಕುಡಿಯಲಿಲ್ಲ. ಆತನಿಗೆ ದೃಷ್ಟಿಯನ್ನು ಪುನಃ ಒದಗಿಸುವದಕ್ಕೂ ಕ್ರಿಸ್ತನಲ್ಲಿ ಆತನಿಗೆ ದೀಕ್ಷಾಸ್ನಾನ ಮಾಡಿಸುವದಕ್ಕೂ ಅನನೀಯನನ್ನು ಆತನ ಬಳಿಗೆ ಕಳುಹಿಸಲಾಯಿತು (ಅಪೊಸ್ತಲರ ಕೃತ್ಯಗಳು 9:8-18; 22:11-16). "ತಡಮಾಡದೆ ಸಭಾಮಂದಿರಗಳಲ್ಲಿ ಯೇಸುವಿನ ವಿಷಯವಾಗಿ ಆತನೇ ದೇವಕುಮಾರನೆಂದು [ಪೌಲನು] ಸಾರುವದಕ್ಕೆ ಪ್ರಾರಂಭಮಾಡಿದನು" (ಅಪೊಸ್ತಲರ ಕೃತ್ಯಗಳು 9:20). ಆತನು "ಯೇಸುವೇ ಕ್ರಿಸ್ತನೆಂದು ಸಿದ್ಧಾಂತಪಡಿಸಿ ದಮಸ್ಕದಲ್ಲಿದ್ದ ಯೆಹೂದ್ಯರನ್ನು" ಉತ್ತರವಿಲ್ಲದವರಾಗ ಮಾಡಿದನು (ಅಪೊಸ್ತಲರ ಕೃತ್ಯಗಳು 9:22). ಈ ಸಮಯದ ವೇಳೆ, ಆತನು ಅರಬಸ್ಥಾನಕ್ಕೆ ಪ್ರಯಾಣಿಸಿದನು ಆದರೆ ದಮಸ್ಕಕ್ಕೆ ಹಿಂದಿರುಗಿ ಬಂದನು. ಪೌಲನು ಅಲ್ಲಿ ಸ್ವಲ್ಪ ಕಾಲ ಬೋಧನೆಯನ್ನು ಮಾಡಿದ ಬಳಿಕ, ವಿಶ್ವಾಸಿಸದ

ಯೆಹೂದ್ಯರು ಆತನನ್ನು ಕೊಲ್ಲಲು ಸಂಚು ಮಾಡಿದರು. ಆತನು ಗೋಡೆಯಲ್ಲಿನ ಕಿಂಡಿಯಿಂದ ತಪ್ಪಿಸಿಕೊಂಡನು, ಆತನನ್ನು ಒಂದು ಪುಟ್ಟಿಯನ್ನು ಕೂಡ್ರಿಸಿ ಕೆಳಕ್ಕೆ ಇಳಿಸಲಾಯಿತು, ಮತ್ತು ಬಳಿಕ ಯೆರೂಸಲೇಮಿಗೆ ಪ್ರಯಾಣಿಸಿದನು (ಅಪೊಸ್ತಲರ ಕೃತ್ಯಗಳು 9:23-26; 2 ಕೊರಿಂಥ 11:32, 33).

ಪೌಲನು "ಅರಬಸ್ಥಾನಕ್ಕೆ ಹೋದನು" ಎಂಬ ಹೇಳಿಕೆಯು ಪಂಡಿತರ ಮಧ್ಯದಲ್ಲಿ ಬಹಳಷ್ಟು ಊಹಾಪೋಹವನ್ನೇ ಹುಟ್ಟು ಹಾಕಿರುತ್ತದೆ. ಬಹಳ ಸರ್ವಸಾಧಾರಣವಾಗಿರುವ ಅಭಿಪ್ರಾಯಗಳಲ್ಲೊಂದು ಎಂದರೆ ಪೌಲನು ದಕ್ಷಿಣದ ಕಡೆಗೆ ಸೀನಾಯ್ ಪರ್ವತದ ವರೆಗೂ ಪ್ರಯಾಣಿಸಿದನು, ಅದು ಅರಬಸ್ಥಾನದ ಭಾಗವಾಗಿ ಪರಿಗಣಿಸಲ್ಪಟ್ಟಿತ್ತು (ನೋಡಿರಿ 4:25), ಮತ್ತು ಮೋಶೆ ಹಾಗೂ ಎಲೀಯರು (ವಿಮೋಚನಕಾಂಡ 33:17-23; 1 ಅರಸು 19:9-14) ಅನುಭವನ್ನು ಹೋಲುವಂತಹ ಒಂದು ವಿಧದ ಅಂತರ್ಜ್ಞಾನವನ್ನು ಅನುಭವಿಸಿದನು ಎಂಬುದೆ. ಇದೊಂದು ಮಂತ್ರಮುಗ್ಧಗೊಳಿಸುವಂಥ ಯೋಚನೆ, ವಿಶೇಷವಾಗಿ ರೂಪಾಂತರಣದ ಬೆಟ್ಟದಲ್ಲಿ ಪೇತ್ರ, ಯಾಕೋಬ ಹಾಗೂ ಯೋಹಾನರಿಗೆ ಮಹಿಮಕರಣಗೊಂಡ ಕ್ರಿಸ್ತನೊಂದಿಗೆ ಮೋಶೆ ಮತ್ತು ಎಲೀಯರು ಕಾಣಿಸಿಕೊಂಡದ್ದನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವಾಗ ಇದು ಮಂತ್ರಮುಗ್ಧಗೊಳಿಸುವ ಯೋಚನೆಯೇ (ಮತ್ತಾಯ 17:1-3; ಮಾರ್ಕ 9:2-4; ಲೂಕ 9:28-31). ಅಂತೂ, ಜನಾಂಗಗಳಿಗೆ ಮಹಾ ಅಪೊಸ್ತಲನಾಗಿ ನೇಮಿಸಲ್ಪಟ್ಟನ ಪೌಲನಿಗೆ, ಅಂತಹ ಮನಸೆಳೆಯುವಂಥ ಅನುಭವವನ್ನು ನಿರಾಕರಿಸಬೇಕೋ? ಹೇಗೂ, ಅಂಥ ಒಂದು ಘಟನೆಗೆ ಯಾವ ಉದ್ದೇಶವು ಇದ್ದಿರಲು ಸಾಧ್ಯ? ಪೌಲನು ದಮಸ್ಕದ ದಾರಿಯಲ್ಲಿ ಪುನರುತ್ಥಾನಗೊಂಡ ಹಾಗೂ ಮಹಿಮಕರಣಗೊಂಡ ಕ್ರಿಸ್ತನನ್ನು ಕಂಡಿರಲಿಲ್ಲವೋ? ಪೌಲನಿಗೆ ಸಾಕಾಗುವಷ್ಟು ಜ್ಞಾನೋದಯವಾಗಿರಲಿಲ್ಲವೋ ಮತ್ತು ತನ್ನ ಪರಿವರ್ತನೆಯಾದ ಬಳಿಕ "ತಡಮಾಡದೆ" ಕರ್ತನನ್ನು ಸಾರುವದಕ್ಕೆ ಸುವಾರ್ತೆಯನ್ನು ವಶಕ್ಕೆ ಹೊಂದಿರಲಿಲ್ಲವೋ? (ನೋಡಿ ಅಪೊಸ್ತಲರ ಕೃತ್ಯಗಳು 9:20.) ಆತನು ದಮಸ್ಕದ ದಾರಿಯಲ್ಲಿ ಅನುಭವ ಮಾಡಿದ್ದಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾದ ಇನ್ನಾವ ಅಂತರ್ಜ್ಞಾನವು ಇರುವದಕ್ಕೆ ಸಾಧ್ಯವಿತ್ತು?

ಹಳೆಯ ಒಡಂಬಡಿಕೆಯಲ್ಲಿ "ಅರಬಿಯ" ಆರು ಸಾರಿ ಪ್ರಸ್ತಾಪಿಸಲ್ಪಟ್ಟಿದ್ದರೆ, ಅದರಲ್ಲಿನ ನಿವಾಸಿಗಳನ್ನು ಸೂಚಿಸುವ ಪದವು ("ಅರಬ್ಬರು" ಅಥವಾ "ಅರಬಿಯನ್ನರು") ಇನ್ನೂ ಹತ್ತು ಸಾರಿ ಕಾಣಿಸಿಕೊಳ್ಳುತ್ತದೆ. ಹೊಸ ಒಡಂಬಡಿಕೆಯಲ್ಲಿ "ಅರಬಸ್ಥಾನ" ಎಂಬುದು ಗಲಾತ್ಯದವರಿಗೆ ಪತ್ರಿಕೆಯಲ್ಲಿ ಮಾತ್ರವೇ, 1:17 ಮತ್ತು ಪುನಃ 4:25ರಲ್ಲಿ ಕಾಣಿಸಿಕೊಳ್ಳುತ್ತದೆ. ಅದರ ನಿವಾಸಿಗಳನ್ನು ಒಂದೇ ಒಂದು ಸಾರಿ, ಅಪೊಸ್ತಲರ ಕೃತ್ಯಗಳು 2:11ರಲ್ಲಿ ಪ್ರಸ್ತಾಪಿಸಲಾಗಿದೆ: ಅರಬ್ಬರು ಪಂಚಾಶತ್ತಮ ದಿನದಂದು ಪವಿತ್ರಾತ್ಮನು ಸುರಿಸಲ್ಪಡುವದನ್ನು ಕಾಣಲು ಯೆರೂಸಲೇಮಿನಲ್ಲಿ ಹಾಜರಿದ್ದರು. ಅರಬ್ಬಿಯವನ್ನು ಸೂಚಿಸುವ ಈ ಉಲ್ಲೇಖಗಳು ಒಂದು ಯೋಚನೆಯು ಉದ್ಭವವಾಗುವಂತೆ ಮಾಡಿರುತ್ತದೆ, ಏನೆಂದರೆ ಅರಬ್ಬರು ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ಸಾಧ್ಯತೆಯಿರುವದರಿಂದ, ಅಪೊಸ್ತಲನು ಅರಬಸ್ಥಾನಕ್ಕೆ ಹೋದ ವೇಳೆ ಈ ಕ್ರೈಸ್ತರ ಬಳಿಯಲ್ಲಿ ಉಳಿದುಕೊಂಡಿರಬಹುದಾಗಿದೆ ಎಂಬುದೆ. ಘಟನೆಯ ಈ ಮರುಸೃಷ್ಟಿಯು ಆಸಕ್ತಿಕರ ಮತ್ತು ಸಂಭವನೀಯ ಎರಡೂ ಆಗಿರುವದರಿಂದ, ಅದು ಕೇವಲ ಒಂದು ಊಹನ ಮಾತ್ರವೇ ಆಗಿ ಉಳಿಯುತ್ತದೆ ಯಾಕೆಂದರೆ ಇದಕ್ಕೆ ಶಾಸ್ತ್ರಗಳಲ್ಲಿ ಯಾವದೇ ಪುರಾವೆಯು ಇರುವದಿಲ್ಲ.

ಭೌಗೋಳಿಕ ಅರ್ಥದಲ್ಲಿ, ಅರಬಸ್ಥಾನ (ಅಂದರೆ "ಮರುಭೂಮಿ" ಅಥವಾ "ಅರಣ್ಯ" ಎಂಬರ್ಥ) ಒಂದು ವಿಶಾಲವಾದ ಭೂಪ್ರದೇಶವಾಗಿದ್ದು, ಬಹಳ ಮಟ್ಟಿಗೆ ಮರುಭೂಮಿಯಾಗಿದೆ,

ಅದು ಸುಮಾರು ಒಂದು ದಶಲಕ್ಷ ಮೈಲಿಗಳಷ್ಟು ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿದೆ.[31] ಅರಬ್ಬಿಯದ ಪರ್ಯಾಯ ದ್ವೀಪವು ಭೂಮಿಯ ಮೇಲಿರುವ ಅತ್ಯಂಥ ಬೃಹತ್ ಪರ್ಯಾಯ ದ್ವೀಪವಾಗಿದೆ, ಮರುಭೂಮಿಯ ಪ್ರದೇಶ ಮಾತ್ರವೇ ಅಂದಾಜು ಮೂರರೊಳಗೆ ಒಂದು ಭಾಗವಾಗಿದ್ದು ಅಮೆರಿಕ ಭೂಖಂಡದಷ್ಟು ವಿಸ್ತಾರವಾಗಿದೆ. ಹೇಗೂ, ಪ್ರಾಚೀನ ಕಾಲಗಳಲ್ಲಿ, "ಅರಬಸ್ಥಾನ"ದಲ್ಲಿ ಪರ್ಶಿಯನ್ ಕೊಲ್ಲಿಯಾದ ಕೆಂಪು ಸಮುದ್ರ, ಮತ್ತು ಯೂಫ್ರೇಟಿಸ್ ನದಿಯ ನಡುವಿನ ಇಡೀ ಪ್ರದೇಶ ಅಥವಾ ಪ್ರದೇಶದ ವಿವಿಧ ಭಾಗಗಳನ್ನೊಳಗೊಂಡ ಪ್ರಾಂತ್ಯವಾಗಿದ್ದಿರಬಹುದು.[32] ಅದು ಮೂರು ವಿಭಾಗಗಳಾಗಿ ವಿಂಗಡಿಸಲ್ಪಟ್ಟಿತ್ತು: ಅರಬಿಯ ಪೇಟ್ರಿಯ (ಸೌದಿ ಅರಬಿಯಾದ ಉತ್ತರದ ಭಾಗ, ಅದರಲ್ಲಿ ಸೀನಾಯ್ ಸೇರಿರುತ್ತದೆ), ಅರಬಿಯ ಡೆಜರ್ಟಾ (ಸಿರಿಯಾ ಮತ್ತು ಮೆಸಪೋತಾಮ್ಯದ ನಡುವಿನ ಉತ್ತರದ ದಿಕ್ಕಿನ ವಿಭಾಗ), ಮತ್ತು ಅರಬಿಯ ಫೇಲಿಕ್ಷ (ಪರ್ಯಾಯ ದ್ವೀಪದ ಪ್ರಮುಖ ಭಾಗ).[33]

1:17ರಲ್ಲಿ ಪೌಲನು "ಅರಬಸ್ಥಾನ" ಎಂಬ ಪದವನ್ನು ಬಳಸಿದಾಗ, ಬಹುಶಃ ಆತನು ಪೇಟ್ರಾದ ಉತ್ತರದ ಕಡೆಗೆ ದಮಸ್ಕದ ಸಮೀಪದ ಪ್ರದೇಶದ ವರೆಗೂ ವ್ಯಾಪಿಸಿದ್ದ ನೆಬಾಟಿಯನ್ ರಾಜ್ಯವನ್ನು ಸೂಚಿಸುತ್ತಿರಬಹುದಾಗಿದೆ. ನೆಬಾಟಿಯನ್ ರಾಜ್ಯವು "ಅರಸನಾದ ಅರೇತನ" ಅಧೀನದಲ್ಲಿತ್ತು (2 ಕೊರಿಂಥ 11:32, 33), ಆತನು ಅರಬಿಯ ಪೇಟ್ರಿಯದ ಮೇಲೆ ಅದರ ಇತಿಹಾದ ಅತ್ಯಂಥ ಪ್ರಖ್ಯಾತಿಯ ಕಾಲಾವದಿಯಲ್ಲಿ ಆಳ್ವಿಕೆ ಮಾಡುತ್ತಿದ್ದನು, ಆತನು ಸುಮಾರು ಕ್ರಿ.ಪೂ. 9ರಿಂದ ಕ್ರಿ.ಶ. 40ರ ವರೆಗೆ ಆಳಿದನು.[34] ಆದದರಿಂದ, ಪೌಲನು ದಮಸ್ಕದ ದಕ್ಷಿಣ ಹಾಗೂ ಪೂರ್ವ ದಿಕ್ಕುಗಳಲ್ಲಿ ಮಾತ್ರವೇ ಪ್ರಯಾಣಿಸಿರಬಹುದಾಗಿದೆ, ಅಲ್ಲಿ ಹಲವಾರು ಹತ್ತಿರದ ಪಟ್ಟಣಗಳಿದ್ದವು. ಈ ಸಾಧ್ಯತೆಗೆ ಆತನು ಅನಂತರದಲ್ಲಿ ಯೆರೂಸಲೇಮಿಗೆ ಪ್ರಯಾಣಿಸುವ ಮುನ್ನ ದಮಸ್ಕಕ್ಕೆ ಹಿಂದಿರುಗಿದನು ಎಂಬ ವಾಸ್ತವಾಂಶವು ಬೆಂಬಲವನ್ನು ನೀಡುತ್ತದೆ.

## ಪೌಲನು ಸಾರಿದ ಸುವಾರ್ತೆಯು ಬೇರೆಯವರ ಮೇಲೆ ಅವಲಂಭಿತವಾಗಿರಲಿಲ್ಲ (1:18-24)

**18ಮೂರು ವರುಷಗಳಾದ ಮೇಲೆ ಕೇಫನ ಪರಿಚಿತಿಯನ್ನು ಮಾಡಿಕೊಳ್ಳಬೇಕೆಂದು ಯೆರೂಸಲೇಮಿಗೆ ಹೋಗಿ ಅವನ ಬಳಿಯಲ್ಲಿ ಹದಿನೈದು ದಿವಸ ಇದ್ದೆನು. 19ಕರ್ತನ ತಮ್ಮನಾದ ಯಾಕೋಬನನ್ನಲ್ಲದೆ ಅಪೊಸ್ತಲರಲ್ಲಿ ಬೇರೆ ಯಾರನ್ನೂ ಕಾಣಲಿಲ್ಲ. 20ನಾನು ನಿಮಗೆ ಬರೆಯುವ ಸಂಗತಿಗಳು ಸುಳ್ಳಲ್ಲವೆಂಬದಕ್ಕೆ ಇಗೋ ದೇವರೇ ಸಾಕ್ಷಿ. 21ಆಮೇಲೆ ಸಿರಿಯ ಮತ್ತು ಕಿಲಿಕ್ಯ ಪ್ರಾಂತ್ಯಗಳಿಗೆ ಹೋದೆನು. 22ಆದರೆ ಕ್ರಿಸ್ತನಲ್ಲಿರುವ ಯೂದಾಯದ ಸಭೆಗಳಿಗೆ ನನ್ನ ಗುರುತಿರಲಿಲ್ಲ. 23ಪೂರ್ವದಲ್ಲಿ ನಮ್ಮನ್ನು ಹಿಂಸೆಪಡಿಸಿದವನು ತಾನು ಹಾಳುಮಾಡುತ್ತಿದ್ದ ಮತವನ್ನು ಈಗ ಪ್ರಸಿದ್ಧಿಪಡಿಸುತ್ತಾನೆಂಬ 24ಸುದ್ದಿಯನ್ನು ಮಾತ್ರ ಅವರು ಕೇಳಿ ನನ್ನ ದೆಸೆಯಿಂದ ದೇವರನ್ನು ಕೊಂಡಾಡಿದರು.**

**ವಚನ 18.** 1:13-17ರಲ್ಲಿ ತಾನು ಕ್ರಿಸ್ತನವನಾಗಿ ಪರಿವರ್ತನೆಗೊಂಡದ್ದನ್ನು ತಿಳಿಸಿದ ಬಳಿಕ, ಪೌಲನು ಹೀಗೆ ಬರೆಯುತ್ತಾನೆ, **ಮೂರು ವರುಷಗಳಾದ ಮೇಲೆ ಕೇಫನ ಪರಿಚಿತಿಯನ್ನು ಮಾಡಿಕೊಳ್ಳಬೇಕೆಂದು ಯೆರೂಸಲೇಮಿಗೆ ಹೋಗಿ.** ಈ ಹೇಳಿಕೆಯ ಮೊದಲ ಭಾಗಕ್ಕೆ ಸಂಬಂಧ ಪಟ್ಟಂತೆ ಹೇಳುವದಾದರೆ, ಉದ್ಭವವಾಗುವ ಪ್ರಶ್ನೆ "ಮೂರು ವರ್ಷಗಳಾದ ಬಳಿಕ ಏನಾಯಿತು?" ಅಪೊಸ್ತಲ ಕೃತ್ಯಗಳು ಪುಸ್ತಕದಲ್ಲಿನ ಕಥನದಿಂದ, ಇದು ಪುಟ್ಟಿಯೊಂದರಲ್ಲಿ ಪೌಲನು ತಪ್ಪಿಸಿಕೊಂಡು ದಮಸ್ಕದಿಂದ ಹೊರಟು ಹೋದದಕ್ಕೆ ಸಂಬಂಧ ಪಡಿಸುವಂತೆ

ಕಾಣಿಸುತ್ತದೆ, ಹಾಗಿರುವದೇ ಆದಲ್ಲಿ ಇದು "ಅನೇಕ ದಿವಸಗಳು ಹೋದ ಮೇಲೆ" ಮತ್ತು ಯೆಹೂದ್ಯರು ಆತನನ್ನು ಕೊಲ್ಲಬೇಕೆಂದು ಆಲೋಚನೆ ಮಾಡಿಕೊಂಡರು ಎಂದು ಲೂಕನು ತಿಳಿಸುವ ಮಾತನ್ನು ಸೂಚಿಸುವದಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 9:23). ಹೇಗೂ, ಲೂಕನು ಅರಬಸ್ಥಾನದಲ್ಲಿ ಪೌಲನು ನಡಿಸಿದ ಜೀವನದ ಕುರಿತು ಪ್ರಸ್ತಾಪಿಸುವದಿಲ್ಲ, ಮತ್ತು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಆತನ ಕಥನದ ಪ್ರಕಾರ ಪೌಲನು ನೇರವಾಗಿ ಯೆರೂಸಲೇಮಿಗೆ ಹೋದನು ಎಂಬ ಅನಿಸಿಕೆಯು ವಾಚಕನಲ್ಲಿ ಉಂಟಾಗುತ್ತದೆ. ಪೌಲನ ಹೇಳಿಕೆಯ ಪ್ರಕಾರ, ಹೀಗೆ ಸಂಭವಿಸಿರಲಿಲ್ಲ, ಯಾಕೆಂದರೆ 1:17ರಲ್ಲಿ ಆತನು "ಅರಬಸ್ಥಾನಕ್ಕೆ ಹೋಗಿ" ಮತ್ತು "ತಿರಿಗಿ ದಮಸ್ಕಕ್ಕೆ ಬಂದೆನು" ಎಂದು ಬರೆಯುತ್ತಾನೆ.

ಇನ್ನೊಂದು ಕ್ಲಿಷ್ಟತೆಯು ಅರಸನಾದ ಅರೇತನ ಅಧೀನದಲ್ಲಿದ್ದ ಒಬ್ಬ ಅಧಿಪತಿಯು "[ಪೌಲನನ್ನು] ಹಿಡಿಯಬೇಕೆಂದು ದಮಸ್ಕದವರ ಪಟ್ಟಣವನ್ನು ಕಾಯುತ್ತಿದ್ದನು," ಆದರೆ ಅಪೊಸ್ತಲನು "ಒಂದು ಕಲ್ಲಿಯಲ್ಲಿ ಕೂತು ಗೋಡೆಯಲ್ಲಿದ್ದ ಕಿಟಕಿಯೊಳಗಿಂದ ಇಳಿಸಲ್ಪಟ್ಟು ಅವನ ಕೈಯಿಂದ ತಪ್ಪಿಸಿಕೊಂಡನು" (2 ಕೊರಿಂಥ 11:32, 33). ನಿಶ್ಚಯವಾಗಿಯೂ, ನಾವು ಇದನ್ನು ಲೂಕನಿಂದ ಬಣ್ಣಿಸಲ್ಪಟ್ಟಿರುವ ಅದೇ ಘಟನೆ ಎಂದೇ ಅರ್ಥಮಾಡಿಕೊಳ್ಳುವೆವು, ಏನೆಂದರೆ ದಮಸ್ಕದಲ್ಲಿದ್ದ ಕ್ರೈಸ್ತರು "ಒಂದು ಹೆಡಿಗೆಯಲ್ಲಿ ಕೂಡ್ರಿಸಿ ಗೋಡೆಯೊಳಗಿಂದ [ಪೌಲನನ್ನು] ಇಳಿಸಿದರು" (ಅಪೊಸ್ತಲರ ಕೃತ್ಯಗಳು 9:25). ಪೌಲನು 2 ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ತಿಳಿಸಲಾಗಿರುವ ಅರೇತನ ಅಧೀನದಲ್ಲಿದ್ದ ಸ್ಥಳೀಯ ಆಡಳಿತಗಾರನಿಂದ ("ಅಧಿಪತಿ") ಕಂಟಕವನ್ನು ಎದುರಿಸಿದ್ದನೆಂದು ಹೇಳಲಾಗಿರುತ್ತದೆ, ಆದರೆ ಅಪೊಸ್ತಲರ ಕೃತ್ಯಗಳು 9ನೇ ಅಧ್ಯಾಯದಲ್ಲಿ ಆತನನ್ನು ಕೊಲ್ಲಬೇಕೆಂದು ಸಂಚು ಮಾಡುತ್ತಿದ್ದವರು ಯೆಹೂದ್ಯರಾಗಿದ್ದರು. ಸ್ಪಷ್ಟವಾಗಿರುವ ಪ್ರಕಾರ, ಈ ಅಧಿಕಾರಿಯು ಯೆಹೂದ್ಯರೊಂದಿಗೆ ಸೇರಿಕೊಂಡು ಮತ್ತು ಅವರ ಮನವಿಯ ಮೇರೆಗೆ ಕೆಲಸ ಮಾಡುತ್ತಿದ್ದವನು. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪೌಲನ ಸುವಾರ್ತಾ ಪ್ರಯಾಣಗಳ ಬಗ್ಗೆ ಹೇಳುವ ಅನೇಕ ಸಾರಿ ಲೂಕನ ಕಥನದಲ್ಲಿ ಇದು ಪದೇ ಪದೇ ಸಂಭವಿಸುವ ಒಂದು ನಮೂನೆಯಾಗಿರುತ್ತದೆ.

"ಮೂರು ವರುಷಗಳಾದ ಮೇಲೆ" ಎಂಬ ಪದಗುಚ್ಛದ ವಿಷಯದಲ್ಲಿ ಹೇಳುವದಾದರೆ, ಮೂರು ಪೂರ್ಣ ವರುಷಗಳು (ಮೂವತ್ತಾರು ತಿಂಗಳುಗಳು) ಎಂಬರ್ಥವು ಇಲ್ಲದೆ ಇರಬಹುದು; ಯಾಕೆಂದರೆ, ಯೆಹೂದ್ಯರ ಅನುಗುಣವಾಗಿ, ಸಮಯವು ಒಂದು ಪೂರ್ಣ ವರ್ಷ, ಜೊತೆಗೆ ಮುಂಚಿನ ವರ್ಷದ ಕಡೇ ಭಾಗ ಹಾಗೂ ಮುಂಬರುವ ವರ್ಷದ ಆರಂಭಿಕ ಭಾಗವಲ್ಲದೆ ಅದಕ್ಕಿಂತ ಹೆಚ್ಚಾಗಿ ಇಲ್ಲದಿರಬಹುದು. ಇದು ಎರಡು ಕಥನಗಳಲ್ಲಿ ಸಮನ್ವಯವನ್ನುಂಟು ಮಾಡುವದರಲ್ಲಿ ಯಾವ ಸಮಸ್ಯೆಯನ್ನೂ ತಂದೊಡ್ಡುವದಿಲ್ಲ. "ಮೂರು ವರುಷಗಳಾದ ಮೇಲೆ" ಎಂಬುದು ಪೌಲನ ಪರಿವರ್ತನೆಯ ನಂತರದ ಕಾಲಾವದಿಯನ್ನು ಜ್ಞಾಪಿಸುವದಾಗಿದೆ, ಅದರಲ್ಲಿ ಆತನು ಅರಬಸ್ಥಾನದಲ್ಲಿ ಸ್ವಲ್ಪ ಕಾಲ ನಡಿಸಿದ ಜೀವನ, ಮತ್ತು ಆತನ ಪರಿವರ್ತನೆಯ ಬಳಿಕ ಯೆರೂಸಲೇಮಿಗೆ ಮೊದಲ ಭೇಟಿಯನ್ನು ಕೊಡುವಿಕೆ ಸೇರಿರುತ್ತದೆ, ಅ ಕಾಲದಲ್ಲಿ ಆತನು "ಕೇಫನ ಪರಿಚಿತಿಯನ್ನು ಮಾಡಿಕೊಳ್ಳಬೇಕೆಂದು" (1:18) ಬಯಸಿದ್ದನು. ಮೇಲಿನ ವಿವರದ ಬೆಳಕಿನಲ್ಲಿ, ಈ ಕೆಳಗಿನ ಘಟನಾವಳಿಗಳು ನಡೆದಿರಬಹುದೆಂದು ಮುಂದಿಡಲಾಗಿರುತ್ತದೆ:

1. ಪೌಲನು ದಮಸ್ಕದಲ್ಲಿ ಕ್ರಿಸ್ತನಿಗೆ ಪರಿವರ್ತನೆಗೊಂಡನು (ಅಪೊಸ್ತಲರ ಕೃತ್ಯಗಳು 9:10-19a; 22:12-16).
2. ಆತನು "ತಡಮಾಡದೆ" ಕ್ರಿಸ್ತನನ್ನು ಸಭಾಮಂದಿರಗಳಲ್ಲಿ ಸಾರಲಾರಂಭಿಸಿದನು (ಅಪೊಸ್ತಲರ ಕೃತ್ಯಗಳು 9:19b-22).

3. ಆತನು ನಬಾಟಾಯಿನ ಅರಬಸ್ಥಾನಕ್ಕೆ ಪ್ರಯಾಣಿಸಿದನು, ಬಹು ಸಂಭಾವ್ಯವಾಗಿ ಆ ಕ್ಷೇತ್ರಕ್ಕೆ ಸಹ ಸುವಾರ್ತೆಯನ್ನು ಸಾರಬೇಕೆಂಬುದಕ್ಕಾಗಿ ಇರಬಹುದು (1:17).
4. ಆತನು ದಮಸ್ಕಕ್ಕೆ ಹಿಂದಿರುಗಿದನು (1:17), ಮತ್ತು ಆತನ ಸಾರುವಿಕೆಯು ಎಷ್ಟೊಂದು ಸಫಲವಾಗಿತ್ತೆಂದರೆ ಹಗೆತನಗೊಂಡ ಅವಿಶ್ವಾಸಿಗಳಾದ ಯೆಹೂದ್ಯರು ಆತನ ವಿರುದ್ಧ ಒಂದು ಸಂಚು ರೂಪಿಸಿದರು (ಅಪೊಸ್ತಲರ ಕೃತ್ಯಗಳು 9:23-25). ಸ್ಪಷ್ಟವಾಗಿರುವಂತೆ, ಆತನನ್ನು ಬಂಧಿಸಿ ಕೊಲ್ಲುವಂತೆ ಸ್ಥಳೀಯ ಅಧಿಕಾರಿಗಳನ್ನು ಪ್ರಚೋದಿಸಿದ್ದರು (2 ಕೊರಿಂಥ 11:32, 33).
5. ಆತನು ಪೇತ್ರನ ಪರಿಚಿತಿಯನ್ನು ಮಾಡಿಕೊಳ್ಳಲು ಯೆರೂಸಲೇಮಿಗೆ ಹಿಂದಿರುಗಿದನು, ಇದು ಆತನ ಪರಿವರ್ತನೆ ಬಳಿಕೆ ಮಾಡಿದ ಮೊದಲ ಭೇಟಿಯಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 9:26, 27). ಆತನು ಹದಿನೈದು ದಿನಗಳ ಕಾಲ ಪೇತ್ರನೊಂದಿಗೆ ಉಳಿದುಕೊಂಡನು (1:18, 19).[35]
6. ಯೆರೂಸಲೇಮಿನಲ್ಲಿ ಯೆಹೂದ್ಯರ ಹಗೆತನದಿಂದ ಅಪಾಯಕ್ಕೊಳಗಾಗಿದ್ದರಿಂದ, ಸಹೋದರರು ಆತನನ್ನು ಆತನ ಸ್ವಂತ ಊರು ಕಿಲಿಕ್ಯದ ತಾರ್ಸಗೆ ಕಳುಹಿಸಿ ಕೊಟ್ಟರು, ಅಲ್ಲಿ ಆತನು ಹಲವಾರು ವರ್ಷಗಳನ್ನು ಕಳೆದನು (ಅಪೊಸ್ತಲರ ಕೃತ್ಯಗಳು 9:28-30; 22:17-21). ಈ ಕಾಲಾವದಿಯಲ್ಲಿ ಆತನು ಮಾಡಿದ ಚಟುವಟಿಕೆಗಳ ಬಗ್ಗೆ ಶಾಸ್ತ್ರಗಳು ಮೌನವಾಗಿರುತ್ತವೆ.

ಪೌಲನು ಅರಬಸ್ಥಾನದಿಂದ ಹಿಂದಿರುಗಿದ ಬಳಿಕ ಮತ್ತು ಆತನು ಯೆರೂಸಲೇಮಿಗೆ ಭೇಟಿ ಕೊಡುವ ಮುಂಚೆ ಎಷ್ಟು ಕಾಲ ದಮಸ್ಕದಲ್ಲಿ ಉಳಿದುಕೊಂಡನು ಎಂದು ನಮಗೆ ತಿಳಿಯದು. ಇದು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಘಟನೆಗಳನ್ನು ಜ್ಞಾಪಿಸಿಕೊಳ್ಳುವ ವೇಳೆ ಪ್ರಾಮುಖ್ಯವಾಗಿರಲಿಲ್ಲ ಎಂದು ತೋರುತ್ತದೆ. ಆತನು ತಾನು ಸಾರಿದ ಸುವಾರ್ತೆಯ ವಿಷಯದಲ್ಲಿ ಯಾವ ಮನುಷ್ಯನ ಮೇಲೆಯೂ, ವಿಶೇಷವಾಗಿ ಬೇರೆ ಯಾವ ಅಪೊಸ್ತಲನ ಮೇಲೆ ಅವಲಂಭಿತನಾಗಿಲ್ಲ ಎಂಬುದನ್ನು ಒತ್ತಿ ಹೇಳುತ್ತಿದ್ದಾನೆ.[36] ತಾನು ಈ ಸುವಾರ್ತೆಯನ್ನು ದೇವರಿಂದಲೇ ನೇರವಾಗಿ ಪ್ರಕಟನೆಯನ್ನು ಹೊಂದುವ ಮೂಲಕ ಪಡೆದುಕೊಂಡೆನು ಎಂಬುದಾಗಿ ಒತ್ತಿ ಹೇಳಿದನು (1:11, 12, 16; ನೋಡಿರಿ 2:6-9).[37]

ಪೌಲನು ಯೆರೂಸಲೇಮಿಗೆ ಭೇಟಿ ಕೊಟ್ಟಿದ್ದ ವೇಳೆ, [ಪೇತ್ರನ] **ಬಳಿಯಲ್ಲಿ ಹದಿನೈದು ದಿವಸ ಇದ್ದನು**. "ಪೇತ್ರ" ಎಂಬುದು ಅರಾಮಿಕ್ ಹೆಸರಾದ "ಕೇಫ" ಎಂಬುದಕ್ಕೆ ಸಮವಾಗಿತ್ತು (ಯೋಹಾನ 1:42). ಎರಡೂ ಹೆಸರಿನ ಅರ್ಥವು "ಬಂಡೆ" ಎಂದಾಗಿರುತ್ತದೆ.

ಈ ಎರಡು ವಾರಗಳ ಕಾಲದಲ್ಲಿ, ಪೇತ್ರನು ಅವನಿಗೆ ತಾನು ಹಾಗೂ ಬೇರೆ ಅಪೊಸ್ತಲರು ಯೇಸುವಿನೊಂದಿಗೆ ನಡೆದಾಡಿದ ಮೂರು ವರ್ಷಗಳ ವೇಳೆಯಲ್ಲಿ ಸಾಕ್ಷಿಯಾಗಿದ್ದ ಅನೇಕ ಅದ್ಭುತಕರವಾದ ಮಾತುಗಳನ್ನು ಮತ್ತು ಕಾರ್ಯಗಳ ಕುರಿತು ತಿಳಿಸಿರಬಹುದಾಗಿದೆ.[38] ಅವರು ಆತನೊಂದಿಗೆ ಎಡೆಬಿಡದೆ ಇರುತ್ತಿದ್ದರು; ಯೇಸುವು "[ಅವರಲ್ಲಿ] ಬರುತ್ತಾ ಹೋಗುತ್ತಾ ಇದ್ದ ಕಾಲವೆಲ್ಲಾ, ಅಂದರೆ ಯೋಹಾನನು ದೀಕ್ಷಾಸ್ನಾನಮಾಡಿಸಿದ್ದು ಮೊದಲುಗೊಂಡು ಯೇಸು [ಅವರ] ಬಳಿಯಿಂದ ಮೇಲಣ ಲೋಕವನ್ನೇರಿದ ದಿನದವರೆಗೂ ನಮ್ಮ ಜೊತೆಯಲ್ಲಿದ್ದವರು" (ಅಪೊಸ್ತಲರ ಕೃತ್ಯಗಳು 1:21, 22). ಅಷ್ಟುಮಾತ್ರವಲ್ಲದೆ, ಪೇತ್ರನು ಈ ಮುಂಚೆ ಕ್ರೈಸ್ತರ ಹಿಂಸಕನಾಗಿದ್ದ ಪೌಲನ ಸ್ವಂತ ಬಾಯಿಂದಲೇ ಕೆಲವೊಂದು ವಿವರಗಳನ್ನು ಕೇಳಿಸಿಕೊಳ್ಳಲು ಕಾತುರಗೊಂಡಿರಬಹುದಾಗಿದೆ: ಆತನು ಬಾಲಕನಾಗಿ ತಾರ್ಸದಲ್ಲಿ ಕಳೆದ ದಿನಗಳು, ಆತನು ವಿದ್ಯಾರ್ಥಿಯಾಗಿ ಗೌರವಾನ್ವಿತ ರಬ್ಬೊಯಾದ ಗಮಲಿಯೇಲನ ಬಳಿಯಲ್ಲಿ ಕಲಿತುಕೊಂಡ ದಿನಗಳು, ಮತ್ತು ತಾನು ಯಾವದನ್ನು ನಜರೇಯರ ಪಾಷಂಡ ಮತವೆಂದು ಭಾವಿಸಿಕೊಂಡಿದ್ದ

ಪಂಥವನ್ನು ನಾಶಗೊಳಿಸಬೇಕೆಂದು ಆತನಿಗಿದ್ದ ವೈರಾಗ್ಯ ಇತ್ಯಾದಿಗಳು (ನೋಡಿರಿ ಅಪೊಸ್ತಲರ ಕೃತ್ಯಗಳು 22:3-5; 26:9-11). ಅಲ್ಲದೆ ಪೌಲನ ಪರಿವರ್ತನೆಗೊಳ್ಳುವದಕ್ಕೆ ಸಂಬಂಧಿಸಿದ್ದ ಅತ್ಯಾಶ್ಚರ್ಯಕರ ಘಟನೆಗಳ ಬಗ್ಗೆ, ಮಾತ್ರವಲ್ಲದೆ ಪೌಲನ ಸಿದ್ಧಾಂತದ ವಿಶಿಷ್ಟ ಅಂಶದ ಕುರಿತು ಸಹ ಆಲಿಸಬೇಕೆಂದು ಪೇತ್ರನು ಆಸಕ್ತನಾಗಿದ್ದಿರಬಹುದು. ಆತನ ಬೋಧನೆಯೇ, ಇದುವರೆಗೂ ಇಸ್ರಾಯೇಲಿನ ಒಬ್ಬನೇ ಸತ್ಯ ದೇವರ ಕುರಿತು ಅಷ್ಟಾಗಿ ಕೇಳಿಸಿಕೊಂಡಿರ ಅಥವಾ ಏನನ್ನೂ ಕೇಳಿಸಿಕೊಂಡಿರದ ದೇಶಗಳಿಗೆ ಕ್ರಿಸ್ತನ ಸುವಾರ್ತೆಯನ್ನು ಸಾರುವದಾಗಿತ್ತು.

ಖಂಡಿತವಾಗಿಯೂ, ಕ್ರಿಸ್ತನ ಧ್ಯೇಯವನ್ನು ಸಾಕಾರಗೊಳಿಸಲು ಪರಿಶ್ರಮ ಪಟ್ಟ ಈ ಇಬ್ಬರ ನಡುವಿನ ಮಹತ್ವಪೂರ್ಣವಾದ ಭೇಟಿ ಹಾಗೂ ಪರಸ್ಪರ ಪರಿವರ್ತನೆ ಸಾಕ್ಷಿಗಳನ್ನು ಆಲಿಸಿಬೇಕೆಂದು ಅವರಲ್ಲಿ ಎಷ್ಟೊಂದು ಹಂಬಲವಿದ್ದಿರಬೇಕೆಂದು ಇಂದಿನ ಸುವಾರ್ತೆಯ ವಿದ್ಯಾರ್ಥಿಗಳಲ್ಲಿ ಎಷ್ಟು ಜನರು ಚಕಿತಗೊಂಡಿರುವದಿಲ್ಲ? ದೇವರು, ಆತನಿಗಿರುವ ಒಳ್ಳೇ ಕಾರಣಗಳಿಂದಾಗಿ ಆ ಸಂಗತಿಗಳನ್ನು ನಮಗೆ ಪ್ರಕಟಗೊಳಿಸದಿರಲು ನಿರ್ಧರಿಸಿದ್ದಾನಷ್ಟೆ. ಹಾಗೆಯೇ, ಪೇತ್ರನು ಸುವಾರ್ತೆಯನ್ನು ಸಾರಿದ್ದರೊಳಗೆ ಯೇಸುವಿನ ಭೂಲೋಕದ ಸೇವೆಯ ಕುರಿತಾದ ಹೆಚ್ಚು ವಿವರಗಳಿದ್ದಿರಬಹುದು,[39] ಆದರೆ ಪೌಲನ ವಿಶಿಷ್ಟ ಸಾರುವಿಕೆಯಾದರೋ ಉನ್ನತಕ್ಕೇರಿಸಲ್ಪಟ್ಟ ಕ್ರಿಸ್ತನ ಮೇಲೆ ಹೆಚ್ಚು ಒತ್ತು ಕೊಡುವದಾಗಿತ್ತು. ಈ ಅವಲೋಕನವು ಪೌಲನಿಗೆ ದೀಕ್ಷಾಸ್ನಾನ ಮಾಡಿಸುವ ಸ್ವಲ್ಪ ಮುಂಚೆ, ದಮಸ್ಕದ ದಾರಿಯಲ್ಲಾದ ಅನುಭವದ ವಿಷಯದಲ್ಲಿ ಅನನೀಯನು ಆತನಿಗೆ ಹೇಳಿದ ಮಾತುಗಳೊಂದಿಗೆ ಸಮ್ಮತಿಯನ್ನು ಹೊಂದಿರುತ್ತದೆ: "ನೀನು ಕಂಡು ಕೇಳಿದ್ದರ ವಿಷಯದಲ್ಲಿ ಎಲ್ಲಾ ಮನುಷ್ಯರ ಮುಂದೆ ಆತನಿಗೆ ಸಾಕ್ಷಿಯಾಗಿರಬೇಕು" (ಅಪೊಸ್ತಲರ ಕೃತ್ಯಗಳು 22:15). ಅಷ್ಟುಮಾತ್ರವಲ್ಲದೆ, ಪೌಲನ ಸಾಕ್ಷಿಯ ಕೆಲವೊಂದು ಭಾಗಗಳು ಭವಿಷ್ಯದಲ್ಲಿ ಆತನಿಗಾಗಲಿದ್ದ ಯೇಸುವಿನ ಪ್ರತ್ಯಕ್ಷತೆಗಳಿಗೆ ಸಂಬಂಧ ಹೊಂದಿರುತ್ತವೆ, ಅವುಗಳಲ್ಲಿ ಕೆಲವೊಂದು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ ಮತ್ತು ಪೌಲನು ಬರೆದ ಪತ್ರಿಕೆಗಳಲ್ಲಿ ದಾಖಲಿಸಲ್ಪಟ್ಟಿರುತ್ತವೆ (ಅಪೊಸ್ತಲರ ಕೃತ್ಯಗಳು 18:9, 10; 27:23, 24; ನೋಡಿರಿ 2 ಕೊರಿಂಥ 12:1-4). ಈ ಅಸಾಧಾರಣ ಸಂಗತಿಗಳು ಪೌಲನು ಸಾರಿದ ಸುವಾರ್ತೆಯ ವಿಶಿಷ್ಟ ಭಾಗಗಳಾಗಿದ್ದವು. ಆತನು ಅಂಥ ಸಂಗತಿಗಳನ್ನು ಪೇತ್ರನ ಮುಂದೆ ಜ್ಞಾಪಕ ಪಡಿಸಿರಬಹುದಾದರೂ, ಕರ್ತನು ಭೂಲೋಕದಲ್ಲಿ ಸೇವೆ ಮಾಡಿದ ಮೂರು ವರ್ಷ ಕಾಲ ಪೇತ್ರನು ಯೇಸುವಿನೊಂದಿಗೆ ನಡೆದಾಡಿದ ವೇಳೆಯಲ್ಲಿನ ಘಟನೆಗಳಿಗಿಂತಲೂ ಅಧಿಕವಾಗಿ ಇವುಗಳು ಪೇತ್ರನ ಸುವಾರ್ತೆಯಾಗಿರಲಿಲ್ಲ.

ಸ್ಪಷ್ಟವಾಗಿರುವ ಪ್ರಕಾರ, ಪೌಲನು ಅನ್ಯಜನರಿಗೋಸ್ಕರವಾಗಿದ್ದ ಸುವಾರ್ತೆಯನ್ನು ಪೇತ್ರನಿಂತಲೂ ಹೆಚ್ಚು ಸಂಪೂರ್ಣವಾಗಿ ಗ್ರಹಿಸಿಕೊಂಡಿದ್ದನು, ಇದು ಅಂತಿಯೋಕ್ಯದಲ್ಲಿ ಇಬ್ಬರ ನಡುವಿನ ನೋವುಕರವಾದ ಭೇಟಿಯ ಕಾರಣವನ್ನು ತಿಳಿಸುತ್ತದೆ (2:11-14). ಹೇಗೂ, ಇದು ಆ ಸಂದರ್ಭದಲ್ಲಿ ಪೇತ್ರನು ಮಾಡಿದ ಕೃತ್ಯಗಳಿಗೆ ನೆಪವನ್ನು ಒದಗಿಸುವದಿಲ್ಲ. ಇವರಿಬ್ಬರು ಸಂಧಾನಗೊಂಡರೆಂಬುದು ಸ್ಪಷ್ಟವಾಗಿರುತ್ತದೆ, ಯಾಕೆಂದರೆ ಪೇತ್ರನು ಅನಂತರದಲ್ಲಿ ಪೌಲನಿಗಿರುವ ಅಪೊಸ್ತಲಿಕ ಪ್ರೇರಣೆಯ ಕುರಿತು ಸಾಕ್ಷಿ ಹೇಳುತ್ತಾನೆ. ಪೇತ್ರನಿಗೆ ಈಗಲೂ ಪೌಲನ ಬೋಧನೆಯನ್ನು ಗ್ರಹಿಸಿಕೊಳ್ಳಲು ಸ್ವಲ್ಪ ಕಷ್ಟವಿದ್ದಿರಬಹುದಷ್ಟೆ. ಪೌಲನು ಬರೆದ "ಕೆಲವು ಮಾತುಗಳು ತಿಳಿಯುವದಕ್ಕೆ ಕಷ್ಟವಾಗಿವೆ. ವಿದ್ಯಾಹೀನರೂ ಚಪಲಚಿತ್ತರೂ . . . ಇವುಗಳಿಗೂ ತಪ್ಪಾದ ಅರ್ಥಮಾಡಿಕೊಂಡು" ಇರುತ್ತಾರೆ ಎಂದು ಬರೆದನು (2 ಪೇತ್ರ 3:15, 16).

ವಿಷಯವು ಏನೇ ಇದ್ದರೂ ಸರಿಯೇ, ಈ ಹದಿನೈದು ದಿನಗಳ ಕಾಲ ಆ ಅಗ್ರಗಣ್ಯ ಅಪೊಸ್ತಲರ ನಡುವಿನ ಸಹವಾಸವು - ಅವರು ಮಾಡಿದ ಕಾರ್ಯಗಳು ಹಾಗೂ ಚರ್ಚಿಸಿದ ಸಂಗತಿಗಳು - ಕೆಲವೊಂದು ಮನಮೋಹಕವಾದಂಥ ಪ್ರಶ್ನೆಗಳನ್ನು ಎಬ್ಬಿಸುವದಾಗಿದ್ದು ಅವುಗಳಿಗೆ ನಿತ್ಯತ್ವದ ಈ ಕಡೆಯಲ್ಲಿ ಯಾವದೇ ನಿಖರವಾದ ಉತ್ತರಗಳನ್ನು ನಾವು ಪಡೆಯಲು ಸಾಧ್ಯವಿಲ್ಲ. ಹೇಗೂ, ಇಬ್ಬರೂ ಕೆಲಸ ಮಾಡುವಂಥ ವ್ಯಕ್ತಿಗಳಾಗಿದ್ದು, ಮತ್ತು ಅದು ಹೇಗೆಂದರೆ ಅವರು ಪರಸ್ಪರ ಮಾತಾಡಿಕೊಳ್ಳುವದಕ್ಕಿಂತಲೂ ನಾಶನದಲ್ಲಿರುವವರಿಗೆ ಸುವಾರ್ತೆಯನ್ನು ಸಾರುವದರಲ್ಲಿಯೇ ಅಧಿಕ ಸಮಯವನ್ನು ಕಳೆದರು (ಅಪೊಸ್ತಲರ ಕೃತ್ಯಗಳು 9:28, 29).

ಇಬ್ಬರು ಅಪೊಸ್ತಲರ ನಡುವೆ ಇರುವ ವ್ಯತ್ಯಾಸಗಳು ಮನಸೆಳೆಯುವಂಥವುಗಳಾಗಿವೆ. ಪೇತ್ರನು ಸರಳವಾದ, ಗಟ್ಟಿಮುಟ್ಟಾದ ಬೇಸ್ತನಾಗಿದ್ದು ಆತನ ಆತುರದ ಹಾಗೂ ಪ್ರಭಾವಕಾರಿ ಸ್ವಭಾವವುಳ್ಳವನೆಂದು ಪರಿಚಿತನಾಗಿದ್ದನು. ಅದಕ್ಕೆ ತದ್ವಿರುದ್ಧವಾಗಿ, ಪೌಲನು ತನ್ನ ಬಲವಾದ ಮನವರಿಕೆ ಹಾಗೂ ಅಭಿಮಾನಕ್ಕೆ ಪರಿಚಿತನಾಗಿದ್ದ ವ್ಯಾಸಂಗನಿಷ್ಠ ರಬ್ಬಾನಿಕ್ ಪಂಡಿತನಾಗಿದ್ದನು. ಪೇತ್ರನು ಗಲಲೀಯಾದ ಒಬ್ಬ ಸಾಮಾನ್ಯ ಯೆಹೂದ್ಯನಾಗಿದ್ದು ಆತನು ಅನ್ಯಜನರನ್ನು ಅಂಗೀಕರಿಸಿಕೊಳ್ಳುವದಕ್ಕೆ ಒಂದು ಅದ್ಭುತಕರವಾದ ದರ್ಶನದ ಅಗತ್ಯವಾಗಿತ್ತು. ಪೌಲನು ಯೆಹೂದ್ಯರ ಚದುರಿ ಹೋಗುವಿಕೆ ಕಾಲದಲ್ಲಿ ಹುಟ್ಟಿದ ಕುಲೀನ ವ್ಯಕ್ತಿಯಾಗಿದ್ದನು, ಮಾತ್ರವಲ್ಲದೆ ರೋಮನ್ ಪೌರತ್ವವುಳ್ಳವನಾಗಿದ್ದನು. ಆತನಿಗೆ ಗ್ರೀಕರ ಸಂಸ್ಕೃತಿಯ ಪರಿಚಯವಿದ್ದದರಿಂದ ಅನ್ಯಜನರಿಗೆ ಸುವಾರ್ತೆ ಸಾರುವ ಕೆಲಸಕ್ಕೆ ಆತನು ಉತ್ತಮವಾಗಿ ಸರಿಹೊಂದುವಂತೆ ಮಾಡಿತ್ತು.

ಈ ಮೊದಲ ಭೇಟಿಯಲ್ಲಿ ಬೇರೆ ಅಪೊಸ್ತಲರು ಭಾಗಿಯಾಗಿರಲಿಲ್ಲ (1:19ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪೌಲನು ಪೇತ್ರನ ಪರಿಚಿತಿಯನ್ನು ಮಾಡಿಕೊಳ್ಳಬೇಕೆಂದೇ ಬಯಸಿದ್ದನು. ಆತನು ಪ್ರಶ್ನಾತೀತವಾಗಿ ಹನ್ನೆರಡು ಮಂದಿ ಶಿಷ್ಯರ ನಾಯಕನಾಗಿದ್ದನು. ಪೌಲನ ಕೃತ್ಯವು ಆತನ ಸಾಮಾನ್ಯ ಕಾರ್ಯವಿಧಾನ ಮಾತ್ರವಲ್ಲದೆ ಪೌಲನು ಪೇತ್ರನನ್ನು ಭೇಟಿ ಮಾಡುವದರಲ್ಲಿ ದೇವರಿಗಿದ್ದ ಉದ್ದೇಶದೊಂದಿಗೆ ಅನುಗುಣವಾಗಿರುತ್ತದೆ; ಆತನು ದೊಡ್ಡ ಮೇಲಾಧಿಕಾರಿಯ ಬಳಿಗೆ ಹೋಗಿದ್ದನು. ಪೌಲನು ಇದೇ ಕಾರ್ಯತಂತ್ರವನ್ನು ಫಿಲಿಪ್ಪಿಯಲ್ಲಿ (ಅಪೊಸ್ತಲರ ಕೃತ್ಯಗಳು 16:35-39) ಮತ್ತು ಯೆರೂಸಲೇಮಿನಲ್ಲಿ (ಅಪೊಸ್ತಲರ ಕೃತ್ಯಗಳು 22:24-29) ಅನುಸರಿಸಿದನು. ಎರಡನೆಯ ಉದಾಹರಣೆಯಲ್ಲಿ, ಆತನು ತನಗಾದ ಸೆರೆವಾಸದ ವಿರುದ್ಧ ಪ್ರತಿವಾದ ಮಾಡುವದಕ್ಕೆ ತನ್ನ ರೋಮನ್ ಪೌರತ್ವವನ್ನು ಬಳಸಿದನು. ಹಾಗೆ ಮಾಡುವ ಮೂಲಕ, ಕೊನೆಗೆ ರೋಮನ್ ಸಾಮ್ರಾಜ್ಯದ ಸರ್ವೋಚ್ಚ ಆಡಳಿತಗಾರನಾದ ನಿರೋ ಚಕ್ರವರ್ತಿಯ ಮುಂದೆ ತನ್ನನ್ನು ಕಾಣಿಸಿಕೊಳ್ಳುವದರಲ್ಲಿ ಸಮಾಪ್ತಿಯಾಗಲಿದ್ದಂಥ ಅಧಿಕಾರ ಶ್ರೇಣಿಯಲ್ಲಿ ಏರುವದನ್ನು ಆರಂಭಿಸಿದ್ದನು.[40]

**ವಚನ 19.** ಯೆರೂಸಲೇಮಿನಲ್ಲಿ ತಾನು ಪೇತ್ರನನ್ನು ಭೇಟಿ ಮಾಡಿದ ಕುರಿತು ತಿಳಿಸಿದ ಬಳಿಕ, ಪೌಲನು ಹೀಗೆ ಬರೆದನು, **ಕರ್ತನ ತಮ್ಮನಾದ ಯಾಕೋಬನನ್ನಲ್ಲದೆ ಅಪೊಸ್ತಲರಲ್ಲಿ ಬೇರೆ ಯಾರನ್ನೂ ಕಾಣಲಿಲ್ಲ.** ಈ ವಚನವು ಹಲವಾರು ಪ್ರಶ್ನೆಗಳನ್ನು ಎಬ್ಬಿಸುತ್ತದೆ: (1) ಯಾಕೋಬನಿಗೆ ಸಂಬಂಧ ಪಟ್ಟಂತೆ "ಅಲ್ಲದೆ" ಎಂಬುದರ ಅರ್ಥವೇನು? (2) ಈ ಸನ್ನಿವೇಶದಲ್ಲಿ "ಅಪೊಸ್ತಲರು" ಎಂಬುದರ ಅರ್ಥವೇನು? (3) ಈ ಹೇಳಿಕೆಯು ಅಪೊಸ್ತಲರ ಕೃತ್ಯಗಳು 9:27ರಲ್ಲಿ ಲೂಕನು ಹೇಳುವಂತೆ ಬಾರ್ನಬನು ಪೌಲನನ್ನು "ಅಪೊಸ್ತಲರ" (ಬಹುವಚನ) ಬಳಿಗೆ ಕರೆ ತಂದನು ಎಂಬುದರೊಂದಿಗೆ ಸಮನ್ವಯಗೊಳಿಸುತ್ತದೆ?

ಈ ಪ್ರಶ್ನೆಗಳಿಗೆ ಉತ್ತರಿಸಲು ಆರಂಭಿಸಬೇಕಾದರೆ, ನಾವು "ಕರ್ತನ ತಮ್ಮನಾದ ಯಾಕೋಬ"ನ ಪಾತ್ರದ ಬಗ್ಗೆ ಆಲೋಚಿಸೋಣ. ಯಾಕೋಬನು ಯೆರೂಸಲೇಮಿನ ಸಭೆಯಲ್ಲಿ ಒಂದು ಉನ್ನತವಾದ ಗೌರವ ಹಾಗೂ ಸ್ಥಾನವನ್ನು ಹೊಂದಿದ್ದನೆಂಬುದಾಗಿ ಅಪೊಸ್ತಲರ ಕೃತ್ಯಗಳು ಪುಸ್ತಕ ಹಾಗೂ ಗಲಾತ್ಯದವರಿಗೆ ಬರೆದ ಪತ್ರಿಕೆ ಎರಡೂ ಸೂಚಿಸುತ್ತವೆ. ಪೇತ್ರನು ಸೆರೆಮನೆಯಿಂದ ಅದ್ಭುತಕರವಾಗಿ ಬಿಡುಗಡೆಗೊಳಿಸಲ್ಪಟ್ಟ ವೇಳೆ, ಆತನು ಮರಿಯಳ ಮನೆಯಲ್ಲಿ ಕೂಡಿ ಬಂದಿದ್ದ ಕ್ರೈಸ್ತರಿಗೆ "ಈ ಸಂಗತಿಗಳನ್ನು ಯಾಕೋಬನಿಗೂ ಸಹೋದರರೆಲ್ಲರಿಗೂ ತಿಳಿಸಿರೆಂದು" ಅಪ್ಪಣೆ ಕೊಟ್ಟನು (ಅಪೊಸ್ತಲರ ಕೃತ್ಯಗಳು 12:17). ಯೆರೂಸಲೇಮಿನಲ್ಲಾದ ಸಮಾಲೋಚನಾ ಸಭೆಯಲ್ಲಿ, ಅನ್ಯಜನರನ್ನು ತನ್ನ ರಾಜ್ಯದಲ್ಲಿ ಸೇರಿಸಿಕೊಳ್ಳಬೇಕೆಂದು ದೇವರಿಗೆ ಯೋಜನೆಯಿದೆ ಎಂಬುದರ ಕುರಿತು ಯಾಕೋಬನ ಮಾತುಗಳನ್ನು ಆಲಿಸಿದರು ಮತ್ತು ಅನ್ಯಜನಾಂಗದ ಕ್ರೈಸ್ತರು ಏನನ್ನು ಮಾಡುವ ಅಗತ್ಯವಿದೆ ಎಂಬುದರ ಕುರಿತಾದ ಆತನು ನೀಡಿದ ತೀರ್ಪನ್ನು ಸಭೆಯ ನಾಯಕರು ಒಪ್ಪಿಕೊಂಡರು (ಅಪೊಸ್ತಲರ ಕೃತ್ಯಗಳು 15:13-29). ಪೌಲನ ಮೂರನೆಯ ಸುವಾರ್ತಾ ಪ್ರಯಾಣದ ಬಳಿಕ, ಆತನು ಯೆರೂಸಲೇಮಿನಲ್ಲಿದ್ದ "ಯಾಕೋಬನ ಬಳಿಗೆ ಹೋದನು. ಸಭೆಹಿರಿಯರೆಲ್ಲರು ಸಹ ಬಂದರು" (ಅಪೊಸ್ತಲರ ಕೃತ್ಯಗಳು 21:17, 18). ಪೌಲನು "ಯಾಕೋಬ ಕೇಫ ಯೋಹಾನರು" ಯೆರೂಸಲೇಮಿನ ಸಭೆಯಲ್ಲಿ "ಸಭಾಸ್ತಂಭಗಳೆಂದು ಹೆಸರುಗೊಂಡವರು" ಎಂದು ಪಟ್ಟಿ ಮಾಡುತ್ತಾನೆ; ಈ ವ್ಯಕ್ತಿಗಳು ಆತನಿಗೆ ಮತ್ತು ಬಾರ್ನಬನಿಗೂ ಬಲಗೈ ಕೊಟ್ಟು "ಅನ್ಯಜನರ ಬಳಿಗೆ ಹೋಗಿರಿ, ನಾವು ಸುನ್ನತಿಯವರ ಬಳಿಗೆ ಹೋಗುತ್ತೇವೆ" ಎಂದು ಹೇಳಿದರು (2:9). "ಯಾಕೋಬನ ಕಡೆಯಿಂದ ಕೆಲವರು [ಬಂದಾಗ]" ಪೇತ್ರನಿಗೆ ಆತಂಕವಾಗಿದ್ದರಿಂದ ಆತನು "ಸುನ್ನತಿಯವರಾದ ಅವರಿಗೆ ಅವನು ಭಯಪಟ್ಟು [φοβέω, *phobeō*]" ಅಂತಿಯೋಕ್ಯದಲ್ಲಿನ ಅನ್ಯಜನಾಂಗದ ಸಹೋದರರನ್ನು ಬಿಟ್ಟು ದೂರ ಹೋದನು (2:12).

*"ಅಲ್ಲದೆ" ಎಂಬುದರ ಅರ್ಥ.* ಯೆರೂಸಲೇಮಿನಲ್ಲಿ ಯಾಕೋಬನಿಗೆ ಪ್ರಭಾವವಿತ್ತೆಂಬುದನ್ನು ನಿರಾಕರಿಸಲಾಗದು, ಆದರೆ ಆತನು ಒಬ್ಬ ಅಪೊಸ್ತಲನಾಗಿದ್ದನು ಎಂಬ ಅಭಿಪ್ರಾಯವು ಪ್ರಾಥಮಿಕವಾಗಿ ಗ್ರೀಕ್ ಭಾಷೆಯ ಎರಡು ಚಿಕ್ಕ ಪದಗಳ (εἰ μὴ, *ei mē*) ಅನುವಾದದ ಮೇಲೆ ಆಧಾರವಾಗಿರುತ್ತದೆ. NASB ಈ ಪದಗುಚ್ಛವನ್ನು "ಅಲ್ಲದೆ" ಎಂದು ಅನುವಾದಿಸುತ್ತದೆ; ಆದರೆ ಬೇರೆ ಸಂಭಾವ್ಯತೆಗಳಲ್ಲಿ "ಇಲ್ಲವಾದರೆ," "ಹೊರತು," "ಆದರೆ ಮಾತ್ರವೇ," ಅಥವಾ "ಆದರೆ ಬದಲಾಗಿ" ಎಂಬುವುಗಳೇ. ಈ ಪದಗುಚ್ಛವು ಗ್ರೀಕ್ ಹೊಸ ಒಡಂಬಡಿಕೆಯಲ್ಲಿ ಅನೇಕ ಸಾರಿ ಕಾಣಿಸಿಕೊಳ್ಳುತ್ತದೆ. ಅಂತಹ ಮೂರು ಕಾಣಿಸಿಕೊಳ್ಳುವಿಕೆಗಳು ಗಲಾತ್ಯದವರಿಗೆ ಬರೆದ ಪತ್ರಿಕೆಯೊಂದರಲ್ಲೇ ಸಿಕ್ಕುತ್ತವೆ (1:7, 19; 6:14); ಇವುಗಳೊಳಗೆ, ಒಂದಕ್ಕೆ ಮಾತ್ರವೇ ಅದರ ಸನ್ನಿವೇಶಕ್ಕನುಗುಣವಾಗಿ "ಅಲ್ಲದೆ" ಎಂಬ ಅನುವಾದವನ್ನು ಮಾಡುವದು ಅಗತ್ಯವಾಗಿರುತ್ತದೆ (6:14). ಉಳಿದ ಎರಡಕ್ಕೆ ಸಂಬಂಧ ಪಟ್ಟಂತೆ, 1:7ರಲ್ಲಿನ ಪದವನ್ನು "ಆದರೆ," "ಆದರೆ ಬದಲಾಗಿ," ಅಥವಾ "ಆದರೆ ಮಾತ್ರವೇ" ಎಂಬರ್ಥ ಕೊಡುತ್ತದೆಂದು ಅರ್ಥಮಾಡಿಕೊಳ್ಳತಕ್ಕದ್ದು (ಒಂದು ಅರ್ಥದಲ್ಲಿ ಒಂದೇ ವರ್ಗಕ್ಕೆ ಸೇರಿರುವದಲ್ಲ, ಆದರೆ ಬೇರೊಂದಕ್ಕೆ ಸೇರಿದ ಎಂಬುದು). 1:19ರಲ್ಲಿ ಪ್ರಕರಣದಲ್ಲಿ ಅದು ಯಾವದೇ ಅನುವಾದಕ್ಕೂ ಮುಕ್ತವಾಗಿರುತ್ತದೆ, ಅದು ಯಾಕೋಬನನ್ನು ಪ್ರಶ್ನೆಯಲ್ಲಿರುವ ಗುಂಪಿನ ಭಾಗವೆಂದು ಪರಿಗಣಿಸತಕ್ಕದ್ದೋ ("ಯಾಕೋಬನಲ್ಲದೆ ಬೇರೆ ಯಾವ ಅಪೊಸ್ತಲರನ್ನು") ಅಥವಾ ಆತನನ್ನು ಪರಿಗಣಿಸಬಾರದೋ ("ಬೇರೆ ಯಾವ ಅಪೊಸ್ತಲರನ್ನು ಅಲ್ಲ, ಆದರೆ ಯಾಕೋಬನನ್ನು") ಎಂಬುದಕ್ಕೆ ಪುರಾವೆಯಿರುತ್ತದೋ ಎಂಬುದರ ಆಧಾರದಲ್ಲಿ

ಅನುವಾದಿಸಬೇಕಾಗುತ್ತದೆ.[41] ಸ್ವತಃ ಸನ್ನಿವೇಶವು ಬೇರೆ ಆಯ್ಕೆಗಳಿಗೆ ಅವಕಾಶವನ್ನು ಕೊಡುತ್ತದಾದ್ದರಿಂದ, ನಾವು ಬೇರೆ ಪರಿಗಣನೆಗಳ ಕಡೆಗೆ ತಿರುಗಿಕೊಳ್ಳಬೇಕು.

*"ಅಪೊಸ್ತಲರು" ಎಂಬುದರ ಅರ್ಥ.* ಈ ಮುಂಚೆ ಗಮನಿಸಿರುವ ಪ್ರಕಾರ, ಯೆರೂಸಲೇಮಿನಲ್ಲಿ ಅಪೊಸ್ತಲರು ಹಾಗೂ ಹಿರಿಯರಿ ಸಮಾಲೋಚನ ಸಭೆಯಲ್ಲಿ ಮಾಡಲಾದ ತೀರ್ಮಾನವು ಯಾಕೋಬನ ಮಾತುಗಳ ಮೇಲೆ ಆಧಾರವಾಗಿತ್ತೆಂದು ಕಾಣಿಸುತ್ತದೆ. ಅನ್ಯಜನರು ಸುನ್ನತಿ ಮಾಡಿಸಿಕೊಂಡು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಬೇಕೋ ಅಥವಾ ಬೇಡವೋ ಎಂಬುದರ ಕುರಿತು ಸಹೋದರರು ಈತನ ಸಲಹೆಯನ್ನು ಅವಲಂಭಿಸಿದ್ದರೆಂದು ತೋರುತ್ತದೆ (ಅಪೊಸ್ತಲರ ಕೃತ್ಯಗಳು 15:13-22). ಈ ಕೂಟದ ದಾಖಲೆಯಲ್ಲಿ, ಯಾಕೋಬನು ಎಲ್ಲಿಯೂ ಒಬ್ಬ "ಅಪೊಸ್ತಲ" ಅಥವಾ ಒಬ್ಬ "ಹಿರಿಯ" ಎಂದು ಕರೆಯಲ್ಪಟ್ಟಿಲ್ಲ. ಖಂಡಿತವಾಗಿಯೂ, ಎರಡರಲ್ಲಿ ಒಬ್ಬನಾಗಿರಬಹುದಾದ ಅಥವಾ ಎರಡೂ ಆಗಿರುವ ಸಾಧ್ಯತೆಯಿರುತ್ತದೆ, ಪೇತ್ರನು ಸಹ ಎರಡೂ ಆಗಿದ್ದನಷ್ಟೆ (1 ಪೇತ್ರ 5:1); ಆದರೆ ನಿರ್ಣಾಯಕ ಪ್ರಶ್ನೆಯಂತೂ ಹಾಗೆಯೇ ಉಳಿಯುತ್ತದೆ: ಯಾಕೋಬನು ಒಬ್ಬ ಅಪೊಸ್ತಲನು ಎಂಬುದಕ್ಕೆ ಶಾಸ್ತ್ರದದಲ್ಲಿ ಪ್ರತ್ಯೇಕವಾದ ಪುರಾವೆಯು ಇರುತ್ತದೋ?[42]

ಯೇಸುವು ಹನ್ನೆರಡು ಮಂದಿ ಶಿಷ್ಯರನ್ನು "ಅವರು ತನ್ನ ಸಂಗಡ ಇರಬೇಕೆಂತ" ಆರಿಸಿಕೊಂಡನು (ಮಾರ್ಕ 3:13, 14). ಈ ವ್ಯಕ್ತಿಗಳು, ಈ ಮುಂಚೆ "ಶಿಷ್ಯರು" ಎಂದು ಕರೆಯಲ್ಪಟ್ಟಿದ್ದು, ಅವರಿಗೆ ಆತನು "ಅಪೊಸ್ತಲರೆಂತ ಹೆಸರಿಟ್ಟನು" (ಲೂಕ 6:12, 13). ಅವರ ಹೆಸರುಗಳು ಮತ್ತಾಯ 10:2-4; ಮಾರ್ಕ 3:16-19; ಲೂಕ 6:13-16; ಮತ್ತು ಅಪೊಸ್ತಲರ ಕೃತ್ಯಗಳು 1:13ರಲ್ಲಿ ಕೊಡಲಾಗಿದೆ. ಈ ಪಟ್ಟಿಗಳಲ್ಲಿ ಸಿಕ್ಕುವ ಯಾಕೋಬ ಎಂದು ಹೆಸರುಳ್ಳ ಇಬ್ಬರೊಳಗೆ ಒಬ್ಬನೂ ಕರ್ತನ ತಮ್ಮನಾಗಿರಲಿಲ್ಲ. ಅಪೊಸ್ತಲರು, ಅವರಿಗೆ ಯೇಸುವು ಹೇಳಿದ ಪ್ರಕಾರವಾಗಿ ಸಾಕ್ಷಿಯಾಗಿರುವದಕ್ಕೆ ಅರ್ಹರಾಗಿದ್ದರು, ಯಾಕೆಂದರೆ ಅವರು "ಮೊದಲಿನಿಂದ" ಆತನ ಸಂಗಡ ಇದ್ದರು (ಯೋಹಾನ 15:27). ಆತನು ಪವಿತ್ರಾತ್ಮನ ವಾಗ್ದಾನವನ್ನು ಕೊಟ್ಟಿದ್ದು ಮೊದಲ ಹನ್ನೆರಡು ಮಂದಿ ಶಿಷ್ಯರಿಗೇ ಆಗಿತ್ತು, ಪವಿತ್ರಾತ್ಮನು "[ಅವರನ್ನು] ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾನ 16:13) - ತನಗೆ ದ್ರೋಹ ಮಾಡಲ್ಪಡುವ ರಾತ್ರಿಯಂದು ಯಾರ ಪಾದಗಳನ್ನು ತೊಳೆದನೋ ಅವರಿಗೆ ವಾಗ್ದಾನ ಮಾಡಿದ್ದನು (ಯೊಹಾನ 13:1-5). ಕರ್ತನ ತಮ್ಮನಾದ ಯಾಕೋಬನು (ಮತ್ತಾಯ 13:55; ಮಾರ್ಕ 6:3), ಅವರ ಸಂಖ್ಯೆಯಲ್ಲಿ ಸೇರಿರಲಿಲ್ಲ. ವಾಸ್ತವಿಕದಲ್ಲಿ, ಯೇಸುವು ಭೂಲೋಕದಲ್ಲಿ ಸೇವೆಯನ್ನು ಮಾಡಿದ ಬಹಳಷ್ಟು ಕಾಲ ಆತನ ಸಹೋದರರು ಆತನಲ್ಲಿ ನಂಬಿಕೆಯಿಡಲಿಲ್ಲ (ಯೋಹಾನ 7:1-5). ಕೆಲವು ಸಾರಿ, ಈತನಿಗೆ ಹುಚ್ಚು ಹಿಡಿದಿರಬೇಕೆಂದು ಅವರು ಭಾವಿಸಿದ್ದರು (ಮಾರ್ಕ 3:20, 21)! ಇಸ್ಕರಿಯೋತ ಯೂದನು ಹಿಂಜಾರಿ ಬಿದ್ದು ಹೋದಾಗ ಮತ್ತು ಆತನ ಸ್ಥಾನಕ್ಕೆ ಬೇರೊಬ್ಬರನ್ನು ಆರಿಸಿಕೊಳ್ಳಬೇಕಾದ ಸಂದರ್ಭ ಬಂದಾಗ, ಪೇತ್ರನು ಹೀಗೆ ಘೋಷಿಸಿದನು,

> ಆದದರಿಂದ ಕರ್ತನಾದ ಯೇಸು ನಮ್ಮಲ್ಲಿ ಬರುತ್ತಾ ಹೋಗುತ್ತಾ ಇದ್ದ ಕಾಲವೆಲ್ಲಾ, ಅಂದರೆ ಯೋಹಾನನು ದೀಕ್ಷಾಸ್ನಾನಮಾಡಿಸಿದ್ದು ಮೊದಲುಗೊಂಡು ಯೇಸು ನಮ್ಮ ಬಳಿಯಿಂದ ಮೇಲಣ ಲೋಕವನ್ನೇರಿದ ದಿನದವರೆಗೂ ನಮ್ಮ ಜೊತೆಯಲ್ಲಿದ್ದವರೊಳಗೆ ಒಬ್ಬನು ನಮ್ಮೊಂದಿಗೆ ಆತನ ಪುನರುತ್ಥಾನದ ವಿಷಯದಲ್ಲಿ ಸಾಕ್ಷಿ ಹೇಳುವವನಾಗಬೇಕು (ಅಪೊಸ್ತಲರ ಕೃತ್ಯಗಳು 1:21, 22).

ಅಪೊಸ್ತಲರು ಚೀಟು ಹಾಕಿದರು, ಮತ್ತು ಹನ್ನೊಂದು ಮಂದಿ ಶಿಷ್ಯರೊಂದಿಗೆ ಸೇರ್ಪಡೆಗೊಳ್ಳಲು

ಮತ್ತೀಯನು ಆರಿಸಿಕೊಳ್ಳಲ್ಪಟ್ಟನು (ಅಪೊಸ್ತಲರ ಕೃತ್ಯಗಳು 1:25, 26).

ಯಾಕೋಬನು ಹನ್ನೆರಡು ಮಂದಿ ಶಿಷ್ಯರಲ್ಲೊಬ್ಬನಾಗಿರಲಿಲ್ಲ ಎಂಬುದನ್ನು ಎತ್ತಿ ತೋರಿಸುವದು ಕರ್ತನ ತಮ್ಮನನ್ನು ಕೀಳಾಗಿಸಬೇಕೆಂಬ ಉದ್ದೇಶದಿಂದಲ್ಲ. ಯೆರೂಸಲೇಮಿನಲ್ಲಿ ಒಟ್ಟಾಗಿ ಕೂಡಿ ಬಂದು ಪವಿತ್ರಾತ್ಮನಿಗೋಸ್ಕರ ಕಾದುಕೊಂಡಿದ್ದ ಅಂದಾಜು 120 ಮಂದಿ ಶಿಷ್ಯರೊಳಗೆ, "ಯೇಸುವಿನ ತಾಯಿಯಾದ ಮರಿಯಳೂ ಆತನ ತಮ್ಮಂದಿರೂ ಅವರ ಸಂಗಡ ಇದ್ದರು" ಎಂಬುದನ್ನು ಓದುವಾಗ ಆನಂದಕರವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 1:12-14). ಅಲ್ಲದೆ ಇದು ಸಹ ಸತ್ಯವೇನೆಂದರೆ, ಪೌಲನು ಯೇಸುವಿನ ಪುನರುತ್ಥಾನಗಳ ಬಳಿಕ ಕಾಣಿಸಿಕೊಂಡ ಕೆಲವು ಸಂದರ್ಭಗಳನ್ನು ಒಂದೊಂದಾಗಿ ಹೇಳುವ ವೇಳೆ, "ಆತನು ಯಾಕೋಬನಿಗೂ ಆಮೇಲೆ ಅಪೊಸ್ತಲರೆಲ್ಲರಿಗೂ ಕಾಣಿಸಿಕೊಂಡನು" ಎಂದು ಪ್ರಸ್ತಾಪಿಸುತ್ತಾನೆ (1 ಕೊರಿಂಥ 15:7). ಮತ್ತೀಯನ ಪ್ರಕರಣವೊಂದನ್ನು ಹೊರತು ಪಡಿಸಿ, ಸಭೆಯಲ್ಲಿ "ಅಸ್ತಿವಾರ"ದ ಕಲ್ಲುಗಳಾಗಿರುವಂಥ, ಆ ಮಹತ್ವಪೂರ್ಣವಾದ ಹಾಗೂ ಸಾಂಕೇತಿಕ ಹನ್ನೆರಡು ಮಂದಿಯ ಸಂಖ್ಯೆಯಲ್ಲಿ ಯಾವದೇ ಉತ್ತರಾಧಿಕಾರಿಯು ಹೆಸರಿಸಲ್ಪಟ್ಟಿರುವ ದಾಖಲೆಗಳಿರುವದಿಲ್ಲ (ನೋಡಿರಿ ಎಫೆಸ 2:19, 20; ಪ್ರಕಟನೆ 21:10-14).

ಹನ್ನೆರಡು ಮಂದಿಯ ಜೊತೆಯಲ್ಲಿ ಹಲವಾರು ವ್ಯಕ್ತಿಗಳು "ಅಪೊಸ್ತಲರು" ಎಂದು ಕರೆಯಲ್ಪಟ್ಟಿದ್ದಾರೆ, ಅವರಲ್ಲಿ ಅತ್ಯಂಥ ಸ್ಪಷ್ಟವಾಗಿ ಕಾಣಿಸುವವನೆಂದರೆ ಬಾರ್ನಬನು. ಆತನು ಹನ್ನೆರಡು ಮಂದಿಯೊಳಗೆ ಒಬ್ಬನಾಗಿರಲಿಲ್ಲ, ಆದರೆ ಲೂಕನು ಅಪೊಸ್ತಲರ ಕೃತ್ಯಗಳು 14:14ರಲ್ಲಿ ಪೌಲನ ಜೊತೆಯಲ್ಲಿ ಒಬ್ಬ ಅಪೊಸ್ತಲನೆಂದು ಕರೆದನು. ಕೆಲವರು ಸಭೆಗಳ "ಅಪೊಸ್ತಲರು" ಆಗಿದ್ದರು, ವಿವಿಧ ಉದ್ದೇಶಗಳಿಗೋಸ್ಕರ ಕಳುಹಿಸಲ್ಪಟ್ಟವರಾಗಿದ್ದರು. ಉದಾಹರಣೆಗೆ, ಸಭಿಕರು ಪೌಲನ ಸಂಗಡ ಪ್ರಯಾಣಿಸುವಂತೆ ಮತ್ತು ಪರಿಹಾರದ ಹಣಸಂಗ್ರಹವನ್ನು ಯೂದಾಯದಲ್ಲಿನ ಬಡ ದೇವಜನರಿಗೆ ತಲುಪಿಸುವಂತೆ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿದ್ದರು (2 ಕೊರಿಂಥ 8:16-23). ಆಂಗ್ಲದ ಆವೃತ್ತಿಗಳು 2 ಕೊರಿಂಥ 8:23ರಲ್ಲಿರುವಂತಹ ಪ್ರಕರಣಗಳನ್ನು "ಸಭೆಗಳ ಪ್ರತಿನಿಧಿಗಳು" (NIV) ಅಥವಾ "ಸಭೆಯ ಸಂದೇಶಕರು" (NASB) ಎಂದು ಅನುವಾದಿಸುವ ಮೂಲಕ ಅಸ್ಪಷ್ಟಗೊಳಿಸುತ್ತವಾದರೂ, ಮೂಲ ವಾಕ್ಯದಲ್ಲಿರುವ ಪದವು ἀπόστολος (*apostolos*) ಎಂದಿರುತ್ತದೆ. ಈ ಪದವು "ಅಪೊಸ್ತಲ" ಎಂದು ಲಿಪ್ಯಂತರಣ ಮಾಡಲ್ಪಟ್ಟಿದೆ, ಮತ್ತು ಅದು ಹನ್ನೆರಡು ಮಂದಿ ಶಿಷ್ಯರಿಗೆ ಬಳಸಲ್ಪಟ್ಟ ಅದೇ ಪದವೇ ಆಗಿರುತ್ತದೆ.

ಈ ಎಲ್ಲಾ ಪ್ರಕರಣಗಳಲ್ಲಿಯೂ *ಅಪೊಸ್ಟೊಲೊಸ* ಎಂಬ ಪದವು ಸೂಕ್ತವಾಗಿರುತ್ತದೆ ಯಾಕೆಂದರೆ ಅದರ ಮೂಲಭೂತ ಸೂಚ್ಯಾರ್ಥವು ಒಂದು ನಿರ್ದಿಷ್ಟವಾದ ನಿಯೋಗದ ಮೇಲೆ "ಕಳುಹಿಸಿ ಕೊಟ್ಟವನು" ಅಥವಾ "ಕಳುಹಿಸಲ್ಪಟ್ಟವನು" ಎಂದಾಗಿರುತ್ತದೆ. ಹನ್ನೊಂದು ಮಂದಿ ಶಿಷ್ಯರು (ಯೂದನ ಮರಣದ ಬಳಿಕ) ಸಂಪ್ರದಾಯಿಕವಾಗಿ ಕರೆಯಲ್ಪಡುವಂಥ "ಮಹಾ ಆದೇಶ"ದೊಂದಿಗೆ ಕಳುಹಿಸಲ್ಪಟ್ಟರು (ಮತ್ತಾಯ 28:18-20). "ಆದೇಶ" ಎಂಬುದರ ಲ್ಯಾಟಿನ್ ಪದದ ಕಡೇ ಭಾಗವು, ಖಂಡಿತವಾಗಿಯೂ "ನಿಯೋಗ" ಎಂದಾಗಿರುತ್ತದೆ (ಲ್ಯಾಟಿನ್ ಕ್ರಿಯಾಪದವಾದ *ಮಿಸೆಯೊ* ಎಂಬುದರಿಂದ ಬಂದದ್ದು, ಅದರರ್ಥವು "ಕಳುಹಿಸು"). ಬಹುಶಃ *ಅಪೊಸ್ಟೊಲೊಸ* ಎಂಬುದರ ಅತ್ಯುತ್ತಮ ಅನುವಾದವೆಂದರೆ ಅದು "ಮಿಶನರಿ" ಎಂದಾಗಿರುತ್ತದೆಂದು ಹೇಳಲಾಗಿರುತ್ತದೆ, ಅದು ಹೊರ ಸ್ಥಳಕ್ಕೆ ಕಳುಹಿಸಲ್ಪಟ್ಟವನು, ಸಾಮಾನ್ಯವಾಗಿ ಒಂದು ಪರದೇಶ ಅಥವಾ ದೂರದ ದೇಶಕ್ಕೆ ಕ್ರಿಸ್ತನ ಸುವಾರ್ತೆಯನ್ನು ಸಾರುವದಕ್ಕೆ ಕಳುಹಿಸಲ್ಪಟ್ಟವನು ಎಂಬುದಾಗಿ ಎಲ್ಲರಿಂದಲೂ ಅರ್ಥಮಾಡಿಕೊಳ್ಳಲ್ಪಟ್ಟಿರುತ್ತದೆ.

ಹೊಸ ಒಡಂಬಡಿಕೆಯಲ್ಲಿ ಕಾಣಿಸಿಕೊಳ್ಳುವ ಪದಗಳ ಕುಟುಂಬದಲ್ಲಿ ಈ ಮೂರು ಮುಖ್ಯ ಪದಗಳು ಸೇರಿರುತ್ತವೆ: ನಾಮಪದ ἀπόστολος (*apostolos*), ಅಂದರೆ "ಅಪೊಸ್ತಲ" ಅಥವಾ "ಕಳುಹಿಸಲ್ಪಟ್ಟವನು"; ನಾಮಪದ ἀποστολή (*apostolē*), ಅದರರ್ಥವು "ಅಪೊಸ್ತಲತ್ವ" ಅಥವಾ "ನಿಯೋಗ" ಮತ್ತು ಕ್ರಿಯಾಪದ ἀποστέλλω (*apostellō*), ಇದರರ್ಥವು "ಕಳುಹಿಸಲ್ಪಟ್ಟವನು." ಈ ಎಲ್ಲಾ ಮೂರು ಪದಗಳಲ್ಲಿ ಅಂತರ್ಗತವಾಗಿರುವ ಭಾವನೆಯು ಒಂದು ನಿರ್ದಿಷ್ಟವಾದ ಹೊರ ಸ್ಥಳಕ್ಕೆ ಕಳುಹಿಸಲ್ಪಡುವದು ಎಂಬುದೆ. ಸ್ವತಃ ಯೇಸುವು ಒಂದು ಸಾರಿ "ದೇವಪ್ರೇಷಿತನೂ ಮಹಾಯಾಜಕನೂ" ಎಂದು ಕರೆಯಲ್ಪಟ್ಟಿದ್ದಾನೆ (ಇಬ್ರಿಯ 3:1), ಮತ್ತು ಆತನು ಎಷ್ಟು ಸಾರಿ ತಾನು ಕಳುಹಿಸಲ್ಪಟ್ಟವನು ಎಂಬುದರ ಕುರಿತಾಗಿ ಮಾತಾಡಿದನು ಎಂಬುದು ಗಮನಾರ್ಹವಾದದ್ದು (ಮತ್ತಾಯ 10:40; 15:24; ಲೂಕ 4:18, 43; ಯೋಹಾನ 3:17; 5:36, 37; 6:29; 7:28, 29; 8:42; 9:4; 17:18; 20:21).

ಹನ್ನೆರಡು ಮಂದಿ ಶಿಷ್ಯರ ನಿಯೋಗವು ಅಥವಾ ಧ್ಯೇಯವು ಯೇಸುವಿನಲ್ಲಿ ರಕ್ಷಣೆಯು ಸಿಕ್ಕುವದೆಂಬ ಶುಭವಾರ್ತೆಯನ್ನು ಇಡೀ ಲೋಕಕ್ಕೆ ಸಾರುವದೇ ಆಗಿತ್ತು (ಮತ್ತಾಯ 28:18-20). ಪೌಲನು ಅನ್ಯಜನರಿಗೆ ಕ್ರಿಸ್ತನ ವಿಶೇಷವಾದ ಅಪೊಸ್ತಲನಾಗಿದ್ದನು (ರೋಮಾ 11:13). ಮೂಲ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾಗಿರಲಿಲ್ಲವಾದರೂ, ಆತನು ಯಾವ ವಿಧದಲ್ಲಿಯೂ, ಹನ್ನೆರಡು ಮಂದಿ ಶಿಷ್ಯರಲ್ಲಿ ಪ್ರಮುಖನಾಗಿದ್ದ ಪೇತ್ರನಿಗಿಂತ ಕಡಿಮೆಯಾದವನಾಗಿರಲಿಲ್ಲ (2:6-10). ಬಾರ್ನಬ ಹಾಗೂ ಪೌಲರು ಅಂತಿಯೋಕ್ಯದಲ್ಲಿನ ಪ್ರವಾದಿಗಳ ಮೂಲಕ ಕಳುಹಿಸಲ್ಪಟ್ಟರು; ಪವಿತ್ರಾತ್ಮನು "ನಾನು ಬಾರ್ನಬ ಸೌಲರನ್ನು ಕರೆದ [ಕರೆದಿದ್ದ] ಕೆಲಸಕ್ಕಾಗಿ [ಅವರನ್ನು] ಪ್ರತ್ಯೇಕಿಸಿರಿ" (ಅಪೊಸ್ತಲರ ಕೃತ್ಯಗಳು 13:1-4). ಹನ್ನೆರಡು ಮಂದಿ ಶಿಷ್ಯರು ಮಾತ್ರವಲ್ಲದೆ ಪೌಲ ಹಾಗೂ ಬಾರ್ನಬರ ಪ್ರಕರಣದಲ್ಲಿ, ಎಲ್ಲರೂ ಸೂಕ್ತವಾಗಿಯೇ "ಮಿಶನರಿಗಳು" ಅಥವಾ "ಸಂದೇಶಕರು" ಎಂದು ಕರೆಯಲ್ಪಡಬಹುದು. "ಸಭೆಯ ಅಪೊಸ್ತಲರಿಗೆ" ಈ ಸಭೆಗಳಲ್ಲಿ ಸಂಗ್ರಹಿಸಲಾಗಿದ್ದ ಹಣವನ್ನು ಯೆರೂಸಲೇಮಿನಲ್ಲಿದ್ದ ಬಡ ದೇವಜನರಿಗೆ ಕೊಂಡೊಯ್ದು ಕೊಡುವದಾಗಿತ್ತು. ಅವರ ಸೇವೆಯು ಹೆಚ್ಚಿನ ಮಟ್ಟಿಗೆ ಹಣಕ್ಕೆ ಸಂಬಂಧಿಸಿತ್ತಾದ್ದರಿಂದ, NASBಯು 2 ಕೊರಿಂಥ 8:23ನ್ನು "ಸಂದೇಶಕರು" ಎಂದು ಅನುವಾದಿಸುವದು ಒಂದು ರೀತಿಯಲ್ಲಿ ಆ ಸನ್ನಿವೇಶಕ್ಕೆ ಸರಿಯಲ್ಲವೆಂದು ತೋರುತ್ತದೆ.

"ಅಪೊಸ್ತಲ" ಎಂಬ ಶಬ್ದದ ಮೂಲಭೂತ ಅರ್ಥದ ಬೆಳಕಿನಲ್ಲಿ, ಯಾಕೋಬನನ್ನು ಯಾವ ಅರ್ಥದಲ್ಲಿ ಅಪೊಸ್ತಲ ಎಂದು ಕರೆಯುವದಕ್ಕೆ ಸಾಧ್ಯ? ಮೇಲ್ಗಡೆಯಲ್ಲಿ ಅವಲೋಕಿಸಿದ ಎಲ್ಲಾ ಪ್ರಕರಣಗಳಲ್ಲಿ, ಕಳುಹಿಸಲ್ಪಡುವದು ಸೇರಿರುತ್ತದೆ, ಒಂದು ನಿರ್ದಿಷ್ಟವಾದ ಉದ್ದೇಶ ಅಥವಾ ಲಕ್ಷ್ಯವನ್ನು ನೆರವೇರಿಸುವದಕ್ಕೆ ಕಳುಹಿಸಲ್ಪಡುವದು. ಹನ್ನೆರಡು ಮಂದಿಯು ಕ್ರಿಸ್ತನ ರಾಯಭಾರಿಗಳಾಗಿ ಸಂಪೂರ್ಣ ಶಕ್ತಿಯನ್ನು ಕೊಡಲ್ಪಟ್ಟಿದ್ದರು, ದಿವ್ಯಶಕ್ತಿಯ ವ್ಯಾಪಕ ಪ್ರಮಾಣದಲ್ಲಿ ವರಗಳನ್ನು ಕೊಡಲ್ಪಟ್ಟಿದ್ದರು. ಈ ವರಗಳು ಸೂಚನೆಗಳಾಗಿ ಕೆಲಸ ಮಾಡಿದವು, ಅದರ ಉದ್ದೇಶವು ಸಂದೇಶವನ್ನು ಕೊಡುವವರ ಕುರಿತು ಮತ್ತು ಸ್ವತಃ ಸಂದೇಶದ ಕುರಿತು ಪ್ರಮಾಣೀಕರಣ ಹಾಗೂ ಅಧಿಕಾರಕ್ಕೆ ಮಾನ್ಯತೆಯನ್ನು ಒದಗಿಸುವದಾಗಿತ್ತು (ಮಾರ್ಕ 16:15-20; 1 ಕೊರಿಂಥ 14:18, 19, 22; 2 ಕೊರಿಂಥ 12:12; ಇಬ್ರಿಯ 2:4).

"ಅಪೊಸ್ತಲ" ಎಂಬ ಪದವು ಮೊಟ್ಟಮೊದಲನೆಯದಾಗಿ ಒಂದು ಕೆಲಸವನ್ನು ಸೂಚಿಸುತ್ತದೆ, ಹೊರತು ಕೇವಲ ಅಂತಸ್ತು ಅಲ್ಲ. ಕರ್ತನ ತಮ್ಮನಾದ ಯಾಕೋಬನನ್ನು ಯಾವದೇ ರೀತಿಯ ಅಪೊಸ್ತಲನಾಗಿ, ಅದರಲ್ಲೂ ನಿರ್ದಿಷ್ಟವಾಗಿ ಹನ್ನೆರಡು

ಮಂದಿಯಲ್ಲೊಬ್ಬನಾಗಿ ಇರುವದಕ್ಕೆ ಬೇರೆ ಯಾವದಕ್ಕಿಂತಲೂ ಈ ಪರಿಗಣನೆಯು ಅಡ್ಡಿಯಾಗಿರುತ್ತದೆ. ಆತನು ಯಾರಿಂದ ಕಳುಹಿಸಲ್ಪಟ್ಟಿದ್ದನು, ಮತ್ತು ಆತನು ಎಲ್ಲಿಗೆ ಕಳುಹಿಸಲ್ಪಟ್ಟಿದ್ದನು? ಹೊಸ ಒಡಂಬಡಿಕೆಯಲ್ಲಿ ಯಾಕೋಬನ ಕುರಿತಾಗಿ ಹೇಳಿರುವದೆಲ್ಲದರಿಂದ ಗಮನಿಸುವದಾದರೆ, ಆತನು ಯೆರೂಸಲೇಮಿನ ಶಾಶ್ವತ ನಿವಾಸಿಯಾಗಿದ್ದನೆಂದು ತೋರುತ್ತದೆ. ಆತನು ಯಾವದೇ ವಿಧವಾದ ಸುವಾರ್ತಾ ಪ್ರಯಾಣಕ್ಕೆ ಎಂದಾದರೂ - ಕರ್ತನಿಂದಾಗಲಿ, ಅಪೊಸ್ತಲರಿಂದಾಗಲಿ ಅಥವಾ ಯೆರೂಸಲೇಮಿನ ಸಭೆಯಿಂದಾಗಲಿ - ಕಳುಹಿಸಲ್ಪಟ್ಟನೆಂದು ಬೈಬಲ್ ಪುರಾವೆಯು ಇರುವದೇ ಇಲ್ಲ. ಯಾಕೋಬನು ಒಬ್ಬ ಹಿರಿಯನಾಗಿದ್ದು ಆತನ ಸೇವೆಯು ಸ್ಥಳೀಯ ಕೆಲಸವಾಗಿರುವ ಹೆಚ್ಚು ಸಾಧ್ಯತೆಯಿತ್ತೆಂಬುದನ್ನು ಪುರಾವೆಯು ಸೂಚಿಸುತ್ತದೆ. ಪ್ರಾಥಮಿಕವಾಗಿ ಈ ಪರಿಗಣನೆಯೇ, ಪೌಲನು ಯೆರೂಸಲೇಮಿನಲ್ಲಿರುವ ಪೇತ್ರನನ್ನು ಭೇಟಿಯಾಗುವ ಸನ್ನಿವೇಶದಲ್ಲಿ ಗಲಾತ್ಯ 1:19ನ್ನು ಹೀಗೆ ಓದತಕ್ಕದೆಂಬ ಮುಕ್ತಾಯಕ್ಕೆ ಬರುವಂತೆ ಮಾಡುತ್ತದೆ, ಏನೆಂದರೆ "ಆದರೆ ನಾನು ಅಪೊಸ್ತಲರನ್ನಲ್ಲದೆ ಬೇರೆ ಯಾರನ್ನೂ ಭೇಟಿಯಾಗಲಿಲ್ಲ, ಆದರೆ [*ei mē*] ಕರ್ತನ ತಮ್ಮನಾದ ಯಾಕೋಬನನ್ನು ಮಾತ್ರವೇ ಬೇಟಿಯಾದೆನು."

ಪೌಲನು ಬೇರೆ ಯಾವದೇ ಅಪೊಸ್ತಲರನ್ನು ಭೇಟಿಯಾಗದೆ ಯೆರೂಸಲೇಮಿನಲ್ಲಿ ಎರಡು ವಾರಗಳನ್ನು ಕಳೆಯುವದಕ್ಕೆ ಹೇಗೆ ಸಾಧ್ಯವಾಗಿತ್ತು? ಬಹುಶಃ, ಅಪೊಸ್ತಲರಾಗಿ (ಮಿಶನರಿಗಳು) ಅವರಿಗಿರುತ್ತಿದ್ದ ಚಟುವಟಿಕೆಯ ಫಲಿತವಾಗಿ ಈ ಸ್ಥಿತಿಯುಂಟಾಗಿದ್ದಿರಬಹುದು. ವೈಶಿಷ್ಟ್ಯವಾಗಿ, ಅವರು ರಕ್ಷಣೆಯ ಸಂದೇಶವನ್ನು ಹೊರಗಿನ ಸ್ಥಳಗಳಿಗೆ ಹರಡಿಸುವದರಲ್ಲಿ ಅಥವಾ ಅವಕಾಶ ಸಿಕ್ಕಾಗಲೆಲ್ಲಾ ಅಥವಾ ಅಗತ್ಯವು ಎದುರಾದಲ್ಲಿ - ಎಲ್ಲೆಲ್ಲಿ "ಬಾಗಿಲು ತೆರೆದಿರುತ್ತದೋ" ಅಲ್ಲಿ (ನೋಡಿರಿ ಅಪೊಸ್ತಲರ ಕೃತ್ಯಗಳು 14:27; 1 ಕೊರಿಂಥ 16:9; 2 ಕೊರಿಂಥ 2:12; ಕೊಲೊಸ್ಸೆ 4:3) - ಸಭೆಗಳನ್ನು ಬಲಪಡಿಸುವದರಲ್ಲಿ ತೊಡಗಿರುತ್ತಿದ್ದರು. ಈ ಎಲ್ಲಾ ವಾಕ್ಯಭಾಗಗಳು ಪೌಲನ ವಿಷಯವಾಗಿರುತ್ತವಾದರೂ, ಕ್ರೈಸ್ತ ಚಳುವಳಿಯ ಆರಂಭಿಕ ದಿನಗಳಲ್ಲಿ, ಅಪೊಸ್ತಲರಾದ ಯೋಹಾನ ಹಾಗೂ ಪೇತ್ರರು ಸಮಾರ್ಯದ ಸೀಮೆಯ ಕಡೆಗೆ ಸಾಗಿದರು (ಅಪೊಸ್ತಲರ ಕೃತ್ಯಗಳು 8:14). ಅದರ ಜೊತೆಗೆ, ಪೇತ್ರನು ಲುದ್ದಕ್ಕೆ ಪ್ರಯಾಣಿಸಿದನು (ಅಪೊಸ್ತಲರ ಕೃತ್ಯಗಳು 9:32), ಯೋಪ್ಪ (ಅಪೊಸ್ತಲರ ಕೃತ್ಯಗಳು 9:36), ಕೈಸರೈಯಕ್ಕೆ (ಅಪೊಸ್ತಲರ ಕೃತ್ಯಗಳು 10:24), ಮತ್ತು ಕ್ರಮೇಣದಲ್ಲಿ ಅಂತಿಯೋಕ್ಯದಷ್ಟು ದೂರದ ಪ್ರದೇಶಕ್ಕೆ ಪ್ರಯಾಣಿಸಿದ್ದನು (ಗಲಾತ್ಯ 2:11). ಯೋಹಾನನು ಪ್ರಕಟನೆ ಪುಸ್ತಕದೊಳಗೆ ಪತ್ಮೋಸ್ ದ್ವೀಪದ ಮೇಲೆ ಬೈಬಲ್ ವಾಕ್ಯದಲ್ಲಿ ಪುನಃ ಕಾಣಿಸಿಕೊಳ್ಳುತ್ತಾನೆ (ಪ್ರಕಟನೆ 1:9).

ಅನೇಕ ಪ್ರಾಚೀನ ಬೈಬಲೇತರ ಸಂಪ್ರದಾಯಗಳು ಅಪೊಸ್ತಲರನ್ನು ಮೆಡಿಟೆರ್ರೇನಿಯನ್ ಜಗತ್ತಿನ ಹಾಗೂ ಅದರಾಚೆಯ ವಿವಿಧ ಭಾಗಗಳೊಂದಿಗೆ ಜೋಡನೆ ಮಾಡುತ್ತವೆ. ಅಪೊಸ್ತಲತ್ವದ ಸ್ವಭಾವದಿಂದಾಗಿಯೇ ಈ ವ್ಯಕ್ತಿಗಳು ಪ್ರಯಾಣಿಕರಾಗಿದ್ದರು, ಮಹಾ ಆದೇಶವನ್ನು ಕಾರ್ಯರೂಪಕ್ಕೆ ತರುವವರಾಗಿ, ಸಮೀಪದ ಮತ್ತು ದೂರದ ದೇಶಗಳಿಗೆ, ತಮ್ಮ ಹೆಂಡತಿಯರನ್ನು ಜೊತೆಗೆ ಕರೆದುಕೊಳ್ಳುವ ಮೂಲಕ ಸಹ ಕ್ರಿಸ್ತನನ್ನು ಸಾರುವವರಾಗಿ ಪ್ರಯಾಣಿಸಿದರು (1 ಕೊರಿಂಥ 9:5). ಹೇಗೂ, ಯಾಕೋಬನು ಶಾಸ್ತ್ರಗಳಲ್ಲಿ ಸೂಚಿಸಲ್ಪಟ್ಟಿರುವ ಪ್ರಕಾರ ಯೆರೂಸಲೇಮಿನಲ್ಲಿಯೇ ಉಳಿದುಕೊಂಡಿದ್ದನು.

ಯಾಕೋಬನು ಒಬ್ಬ ಹಿರಿಯನಾಗಿದ್ದದರಿಂದ ಆತನು ಮಂದೆಯು ಎಲ್ಲಿ ಇರುತ್ತದೋ ಅಲ್ಲಿಯೇ ಇದ್ದು ಕುರುಬನಾಗಿ ಪಾಲನೆ ಮಾಡುವದು ಆತನ ಕೆಲಸ ಸ್ವಭಾವವಾಗಿರುತ್ತದೆ

(ನೋಡಿರಿ 1 ಪೇತ್ರ 5:1-3). ಆತನು ಒಬ್ಬ ಹಿರಿಯನಾಗಿದ್ದನೆಂಬುದಕ್ಕೆ ಯಾವದೇ ನಿಖರವಾದ ಪುರಾವೆಯು ಇರುವದಿಲ್ಲವಾದರೂ, ಲಭ್ಯವಿರುವ ಪುರಾವೆ ಪ್ರಕಾರ ಆತನು ಯೆರೂಸಲೇಮಿನಲ್ಲಿ ನಿವಾಸಿಸುತ್ತಿದ್ದನೆಂಬುದನ್ನು ಸೂಚಿಸುತ್ತದೆ, ಅಲ್ಲಿ ಆತನು ಸ್ಪಷ್ಟವಾಗಿ ಒಬ್ಬ ಸಭೆಯ ನಾಯಕನೆಂದು ಪರಿಗಣಿಸಲ್ಪಟ್ಟಿದ್ದನು.

*ಗಲಾತ್ಯ 1:19 ಮತ್ತು ಅಪೊಸ್ತಲರ ಕೃತ್ಯಗಳು 9:27ರ ನಡುವೆ ಸಮನ್ವಯಗೊಳಿಸುವದು.* ಪೌಲನು ಯೆರೂಸಲೇಮಿನಲ್ಲಿದ್ದ ಎಲ್ಲಾ ಅಪೊಸ್ತಲರೊಳಗೆ, ಪೇತ್ರನನ್ನು ಮಾತ್ರವೇ ಭೇಟಿಯಾಗಿದ್ದಲ್ಲಿ, ಇದು ಅಪೊಸ್ತಲರ ಕೃತ್ಯಗಳು 9:27ರೊಂದಿಗೆ ಹೇಗೆ ಸಂಧಾನವಾಗಲು ಸಾಧ್ಯ, ಅಲ್ಲಿ ಲೂಕನು ಹೀಗೆ ಬರೆದನು, "ಬಾರ್ನಬನು ಅವನನ್ನು ಕೈಹಿಡಿದು *ಅಪೊಸ್ತಲರ ಬಳಿಗೆ ಕರೆದುಕೊಂಡುಹೋಗಿ"!* (ಒತ್ತಿ ಹೇಳಿದ್ದು ನನ್ನದು). ಇಲ್ಲಿ ಒಂದು ವಿಚಾರವೇನೆಂದರೆ ಮಿಕ್ಕ ಅಪೊಸ್ತಲರೆಲ್ಲಾ ಪೌಲನ ಭೇಟಿಯ ವೇಳೆ ಸುವಾರ್ತೆಯನ್ನು ಸಾರುವದಕ್ಕೆ ಹೋಗಿದ್ದರಿಂದ, ಅಪೊಸ್ತಲರ ಪ್ರತಿನಿಧಿಯಾಗಿ ಪೇತ್ರನನ್ನು ಬಳಸಲಾಗಿತ್ತು ಎಂಬುದೆ. ಹೀಗೆ ಇದ್ದದ್ದಾದಲ್ಲಿ, "ಅಪೊಸ್ತಲರು" ಎಂಬ ಪದವು ಒಂದು "ಸಾಮಾನ್ಯೀಕರಣ ಬಹುವಚನ"ವಾಗಿ ಬಳಸಲ್ಪಟ್ಟಿರುತ್ತದೆ.[43] David J. Williamsನು ಇಬ್ಬರು ಲೇಖಕರ ಲಕ್ಷ್ಯಗಳಲ್ಲಿ ತದ್ವಿರುದ್ಧತೆಯಿದ್ದ ಫಲಿತವಾಗಿ ಈ ಭಾಷಾ ವ್ಯತ್ಯಾಸವು ಉಂಟಾಗಿರುತ್ತದೆ ಎಂದು ಹೇಳುತ್ತಾನೆ. "[ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ] ಪೌಲನು ಅಪೊಸ್ತಲರಿಂದ ಅಂಗೀಕರಿಸಿಕೊಳ್ಳಲ್ಪಟ್ಟನು ಎಂಬುದನ್ನು ತೋರಿಸುವದು ಲೂಕನಿಗೆ ಪ್ರಾಮುಖ್ಯವಾಗಿತ್ತು, ಆದರೆ ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನಿಗಾದರೋ ತಾನು ಅವರಿಂದ ಸ್ವತಂತ್ರನಾಗಿರುತ್ತಾನೆಂಬುದನ್ನು ಒತ್ತಿ ಹೇಳುವದು ಪ್ರಾಮುಖ್ಯವಾಗಿತ್ತು."[44]

ಇನ್ನೊಂದು ಸಂಭಾವ್ಯತೆಯು ಏನೆಂದರೆ ಲೂಕನು "ಅಪೊಸ್ತಲರು" ಎಂಬ ಪದವನ್ನು ಹನ್ನೆರಡು ಮಂದಿ ಶಿಷ್ಯರು ಎಂಬುದಕ್ಕಿಂತ ವಿಶಾಲವಾದ ಅರ್ಥದಲ್ಲಿ ಬಳಸಿದನು ಎಂಬುದೆ. J. W. McGarveyನು ಈ ಅಭಿಪ್ರಾಯವನ್ನು ತೆಗೆದುಕೊಳ್ಳುವವನಾಗಿ, ಲೂಕನ ತಾತ್ಪರ್ಯವು "ಎಲ್ಲಾ ಅಪೊಸ್ತಲರು" ಅಥವಾ "ಅವರಲ್ಲಿ ಬಹಳಷ್ಟು ಮಂದಿ" ಎಂದಾಗಿತ್ತೆಂದು, ಅಥವಾ "ಪದವು ಹನ್ನೆರಡು ಮಂದಿಗಲ್ಲದೆ ಬೇರೆ ಯಾರಿಗೂ ಅನ್ವಯವಾಗುವದಿಲ್ಲ" ಎಂದು ಭಾವಿಸುವದು ತಪ್ಪಾಗಿರುತ್ತದೆಂದು ವಾದಿಸುತ್ತಾನೆ. ಆತನು ಸಮರ್ಥಿಸಿದ್ದೇನೆಂದರೆ "ಹನ್ನೆರಡು ಮಂದಿಯಲ್ಲಿ ಒಬ್ಬನಲ್ಲವಾದರೂ, ಯಾಕೋಬನು ಒಂದು ಅರ್ಥದಲ್ಲಿ ಅಪೊಸ್ತಲನೆಂದು ಪರಿಗಣಿಸಲ್ಪಟ್ಟಿದ್ದನು."[45] ಇದು ಸರಿ ಎಂದಾದರೆ, ಲೂಕನು "ಅಪೊಸ್ತಲರು" ಎಂದು ಬಹುವಚನವನ್ನು ಬಳಸುವದರಲ್ಲಿ ಪೇತ್ರ ಹಾಗೂ ಯಾಕೋಬರನ್ನು ಒಳಗೊಂಡಿರುವದು. ಖಂಡಿತವಾಗಿಯೂ, ಯಾಕೋಬನು ಒಬ್ಬ ಅಪೊಸ್ತಲನಾಗಿ ಪರಿಗಣಿಸಲ್ಪಟ್ಟಿರಲಿಲ್ಲ ಎಂದು ನಾವು ವಾದಿಸಿರುತ್ತೇವೆ.

**ವಚನ 20.** ಪೌಲನು ತನ್ನ ಆತ್ಮಚರಿತ್ರಾತ್ಮಕ ಪ್ರತಿವಾದವನ್ನು ಮುಂದುವರೆಸಿದಂತೆ, ಆತನು ಮಧ್ಯದಲ್ಲಿ ಈ ಹೇಳಿಕೆಯನ್ನು ಸೇರ್ಪಡೆಗೊಳಿಸುತ್ತಾನೆ: **ನಾನು ನಿಮಗೆ ಬರೆಯುವ ಸಂಗತಿಗಳು ಸುಳ್ಳಲ್ಲವೆಂಬದಕ್ಕೆ ಇಗೋ ದೇವರೇ ಸಾಕ್ಷಿ.** ಈ ಮಾತುಗಳು ಎಷ್ಟೊಂದು ಅಸಂಬದ್ಧವಾಗಿವೆಯೆಂದರೆ, ಅವುಗಳು ನಿರರ್ಗಳವಾಗಿ ಸಾಗಿದ್ದ ವಿಚಾರಧಾರೆಗೆ ಅಡ್ಡ ಬರುತ್ತವೆ. ಈ ಕಾರಣಕ್ಕಾಗಿ, ಹಲವಾರು ಆಂಗ್ಲ ತರ್ಜುಮೆಗಳು (NASBಯೂ ಸೇರಿದಂತೆ) ಈ ಮಾತುಗಳನ್ನು ಪ್ರಕ್ಷೇಪ ಚಿಹ್ನೆಗಳಿಂದ ಮುಚ್ಚಿರುತ್ತವೆ.

20ನೇ ವಚನದ ಕಡೇ ಭಾಗವು ಒಂದು ಪ್ರತಿಜ್ಞೆಯಾಗಿರುತ್ತವೆ. NIV ರೀತಿಯಲ್ಲಿಯೇ, NASB ತರ್ಜುಮೆಯು "ನಾನು ನಿಮಗೆ ನಿಶ್ಚಯ ಕೊಡುತ್ತೇನೆ" ಎಂಬ ಪದಗಳನ್ನು ಸೇರಿಸಿ

ಪೌಲನ ಘೋಷಣೆಯನ್ನು ಮೃದುಗೊಳಿಸುತ್ತದೆ. ಈ ಅನುವಾದಕ್ಕೆ ಮೂಲ ವಾಕ್ಯದಲ್ಲಿ ಯಾವ ಆಧಾರವೂ ಇರುವದಿಲ್ಲ, ಅಲ್ಲಿ ಪೌಲನ ವಾಕ್ಯರಚನೆಯನ್ನು ಮೃದುಗೊಳಿಸುವ ಪ್ರಯತ್ನವಷ್ಟೇ ಇರುತ್ತದೆ. ಗ್ರೀಕ್ ವಾಕ್ಯವು ಅಕ್ಷರಶಃ ಹೀಗೆ ಹೇಳುತ್ತದೆ, "ಇಗೋ, ನಾನು ಸುಳ್ಳಾಡುತ್ತಿಲ್ಲ ಎಂದು ದೇವರ ಮುಂದೆ ಹೇಳುತ್ತೇನೆ." "ಇಗೋ" (ἰδού, *idou*) ಎಂಬುದರ ಮುಂದಿನ ಅಲ್ಪವಿರಾಮ ಚಿಹ್ನೆಯು ತೆಗೆಯಲ್ಪಟ್ಟರೆ ಈ ಮಾತುಗಳಿಗೆ ಅರ್ಥವು ಬರುತ್ತದೆ. ಹೇಗೂ, "ಇಗೋ" ಎಂಬ ಮಾತು ಒಂದು ಕ್ರಿಯಾಪದವಾಗಿ ತನ್ನ ಅರ್ಥವನ್ನು ಕಳೆದುಕೊಂಡಿತ್ತು ಮತ್ತು ಮಾತಾಡುವವನು ಅಥವಾ ಲೇಖಕನು ಹೇಳಲಿರುವದರ ಕಡೆಗೆ ವಿಶೇಷ ಗಮನವನ್ನು ಕೊಡುವಂತೆ ಕರೆಯುವದಕ್ಕಾಗಿ ಒಂದು ಪ್ರಕ್ಷಿಪ್ತದಂತೆ ಮಾತ್ರವೇ ಬಳಸಲ್ಪಡುತ್ತಿತ್ತು. ಇನ್ನೊಂದು ಆಯ್ಕೆಯೆಂದರೆ "ಎಂಬದಕ್ಕೆ" (ὅτι, *hoti*) ಎಂಬುದನ್ನು ಅನುವಾದಿಸದೆ ಬಿಟ್ಟು ಬಿಡುವದು, KJVಯು "ಇಗೋ, ದೇವರ ಸಾಕ್ಷಿಯಾಗಿ, ನಾನು ಸುಳ್ಳಾಡುವದಿಲ್ಲ" ಎಂಬುದಾಗಿ ಅನುವಾದಿಸಿರುವ ಪ್ರಕಾರವೇ.

"ದೇವರೇ ಸಾಕ್ಷಿ" ಎಂಬುದು ಒಂದು ಆಣೆಯ ರೂಪದಲ್ಲಿದ್ದು ಅದನ್ನು ಈಗಿನ ಕಾಲದಲ್ಲಿ ಸಾಮಾನ್ಯವಾಗಿ ಬಳಸಲಾಗುವ ಅಪವಿತ್ರೀಕರಿಸುವ ಆಣೆಯೊಂದಿಗೆ ("ದೇವರಾಣೆಗೂ") ಹೋಲಿಕೆ ಮಾಡಬಹುದು. ಖಂಡಿತವಾಗಿಯೂ, ಪೌಲನು ಒಂದು ಅಪವಿತ್ರೀಕರಿಸುವ ಆಣೆಯಂತಹ ಮಾತೊಂದನ್ನು ಹೇಳಿದನೆಂಬುದಾಗಿ ನಾವು ಆರೋಪವನ್ನು ಮಾಡುತ್ತಿಲ್ಲ.[46] ಬದಲಾಗಿ, ಆತನ ಆಣೆಯು ಒಂದು ಘನಗಂಭೀರವಾದ ದೃಢೀಕರಿಸುವಿಕೆಯಾಗಿದ್ದು ಜೀವಸ್ವರೂಪನಾದ ದೇವರು ಆತನ ಮಾತುಗಳಿಗೆ ಮಾತ್ರವಲ್ಲ ಆದರೆ ಆತನ ಹೃದಯ ಆಲೋಚನೆ ಹಾಗೂ ಉದ್ದೇಶಗಳಿಗೆ ಸಹ ದೇವರೇ ಸಾಕ್ಷಿಯಾಗಿದ್ದಾನೆಂಬುದರ ಕಡೆಗೆ ಗಮನವನ್ನು ಸೆಳೆಯುತ್ತಿದ್ದಾನೆ. ಆತನು ಇಲ್ಲಿ ಅಷ್ಟೊಂದು ಬಲವಾಗಿ ದೃಢಪಡಿಸುತ್ತಿರುವ ಕಾರ್ಯವು ಸತ್ಯವಲ್ಲವಾಗಿದ್ದರೆ, ಆತನು ಲೋಕದ ನ್ಯಾಯಾಧಿಪತಿಯ ಮುಂದೆ ಅಪರಾಧಿಯಾಗಿ ನಿಲ್ಲುತ್ತಿದ್ದನು!

ಪೌಲನು ಇಲ್ಲಿ ಹೇಳುತ್ತಿರುವದರ ಸತ್ಯಾಸತ್ಯತೆಯ ಕುರಿತು ಅಷ್ಟೊಂದು ತೀಕ್ಷ್ಣವಾಗಿ ಏಕೆ ತನ್ನನ್ನು ವ್ಯಕ್ತಪಡಿಸಿಕೊಳ್ಳುವಂತೆ ಒತ್ತಾಯಿಸಲ್ಪಟ್ಟನು? ಪೌಲನು ತಾನು ಸಾರುವ ಸುವಾರ್ತೆಯನ್ನು ಸಾರಹೀನಗೊಳಿಸುತ್ತಿದ್ದಾನೆಂಬುದಾಗಿ ಆತನ ವೈರಿಗಳು ಗಲಾತ್ಯದ ಕ್ರೈಸ್ತರನ್ನು ಒಡಂಬಡಿಸುವ ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದರೆಂದು ತೋರುತ್ತದೆ. ಪೌಲನು ತನ್ನ ಶ್ರೋತೃಗಳಿಗೆ ಅವರು ಸುನ್ನತಿ ಮಾಡಿಕೊಳ್ಳುವದು ಅಥವಾ ಮೋಶೆಯ ಧರ್ಮಶಾಸ್ತ್ರದ ಕಠಿಣ ವಿಧಿಗಳನ್ನು ಕೈಕೊಂಡು ನಡೆಯುವ ಅಗತ್ಯವಿಲ್ಲ ಎಂದು ನಿಶ್ಚಯತೆಯನ್ನು ಕೊಡುವ ಮೂಲಕ ಪ್ರಾಮುಖ್ಯವಾದ ಆಜ್ಞೆಗಳನ್ನು ನಿರ್ಲಕ್ಷ್ಯಿಸುವಂತೆ ಪ್ರೋತ್ಸಾಹಿಸುತ್ತಿದ್ದಾನೆಂದು ಅವರು ವಾದಿಸಿರಬಹುದಿತ್ತು.

ಅಷ್ಟುಮಾತ್ರವಲ್ಲದೆ, ಪೌಲನು ಪತ್ರಿಕೆಯ ರೂಪದಲ್ಲಿ ಗಲಾತ್ಯದವರಿಗೆ ಬರೆಯುತ್ತಿರುವ ಕಾರಣದಿಂದಾಗಿ ಬಲವಾದ ಪದಗಳನ್ನು ಬಳಸಿರಬಹುದಾಗಿದೆ. ಆತನ ಕಾಲದ ಜನರು ಸಾಮಾನ್ಯವಾಗಿ ಬರೆದ ಮಾತುಗಳಿಗಿಂತ ಮಾತಾಡಿದ ಮಾತುಗಳು ಹೆಚ್ಚು ವಿಶ್ವಾಸರ್ಹವಾದವುಗಳೆಂದು ನಂಬುತ್ತಿದ್ದರು. ಖಂಡಿತವಾಗಿಯೂ, ಹಳೆಯ ಒಡಂಬಡಿಕೆಯ ಶಾಸ್ತ್ರಗಳನ್ನು ಬಲ್ಲವರಾಗಿದ್ದ ಮತ್ತು ನಂಬಿದಂಥವರು ಬಹು ಬಲವಾಗಿ ಈ ನಿಯಮಕ್ಕೆ ಹೊರತಾದವರಾಗಿದ್ದರು.[47] ಇಲ್ಲವಾದರೆ, ಮಾತಾಡಿದ ಮಾತುಗಳಿಗೆ ಸಾಮಾನ್ಯವಾಗು ಹೆಚ್ಚು ತೂಕವಿರುತ್ತಿತ್ತು, ಯಾಕೆಂದರೆ ಆಗ ಸುಳ್ಳು ಪತ್ರ ಹಾಗೂ ದೋಷಗಳು ಸರ್ವಸಾಧಾರಣವಾಗಿರುತ್ತಿದ್ದವು.

ಲಿಖಿತ ದಸ್ತಾವೇಜುಗಳಿಗೆ ಪ್ರಮಾಣೀಕರಿಸುವ ಒಂದು ಗುರುತು ಅಥವಾ ಹಸ್ತಾಕ್ಷರ ಇಲ್ಲವಾದರೆ ಸಂದೇಹಕ್ಕೆ ಒಳಗಾಗಬಹುದಾಗಿತ್ತು. ಮಣ್ಣಿನ ಅಥವಾ ಮೇಣದ ಮುದ್ರೆಗಳ ಮೇಲೆ ಒಂದು ಚಿತ್ರಸಂಕೇತಗಳನ್ನು, ಸಂಕೇತಗಳನ್ನು, ಅಥವಾ ಹೆಸರುಗಳ ಅಚ್ಚು ಒತ್ತುವದಕ್ಕೆ ಸಹಿಯ ಉಂಗುರವೊಂದನ್ನು ಬಳಸಲಾಗುತ್ತಿತ್ತು. ಅಚ್ಚು ಯಜಮಾನತ್ವ, ಪ್ರಾಮಾಣೀಕರ, ಅಥವಾ ನಿಯೋಜಿಸಲ್ಪಟ್ಟ ಅಧಿಕಾರವನ್ನು ಸೂಚಿಸುತ್ತಿತ್ತು. ಅದು ಅರಸನ ಶಾಸನಗಳನ್ನು ಮತ್ತು ಮಂಜೂರಾದ ಒಪ್ಪಂದಗಳನ್ನು ಅಧಿಕೃತಗೊಳಿಸುತ್ತದೆ.[48] ಕ್ರಿ.ಪೂ. ನಾಲ್ಕನೆಯ ಸಹಸ್ರವರ್ಷದಷ್ಟು ಪುರಾತನ ಕಾಲದ ಉತ್ಖನನದಲ್ಲಿ ಸಿಕ್ಕಿರುವ ಸಂಗತಿಗಳು, ಅಂಥ ಆಚಾರಗಳಿಗೆ ಪೂರ್ವದ ದಿಕ್ಕಿನ ಮೆಸಪೋತಾಮ್ಯದಿಂದ ಪಶ್ಚಿಮದಲ್ಲಿದ್ದ ರೋಮಿನ ತನಕದ ನಾಗರೀಕ ಜಗತ್ತಿನಲ್ಲಿ ಮನ್ನಣೆಯಿತ್ತೆಂಬುದನ್ನು ತೋರಿಸುತ್ತವೆ.

ಲಿಖಿತ ಸಾಕ್ಷಿಗಿಂತಲೂ ಒಬ್ಬ ಜೀವಂತ ಸಾಕ್ಷಿಯನ್ನ ನಂಬುವ ಪ್ರಾಚೀನ ಪ್ರವೃತ್ತಿಗೆ ಇನ್ನೊಂದು ಕಾರಣಾಂಶವು ಇರುತ್ತದೆ: ಒಬ್ಬ ಜೀವಂತ ಸಾಕ್ಷಿಯನ್ನು ಪ್ರಶ್ನಿಸಬಹುದು, ಮತ್ತು ಆತನು ಒತ್ತಡದಲ್ಲಿರುವ ವೇಳೆ ತನ್ನ ಆತ್ಮ-ಸ್ಥೈರ್ಯವನ್ನು ಹೇಗೆ ಕಾಪಾಡಿಕೊಳ್ಳುತ್ತಾನೆಂಬುದರ ಮೇಲೆ ಆತನ ವಿಶ್ವಾಸರ್ಹತೆಯನ್ನು ಮೌಲ್ಯಮಾಪನ ಮಾಡಬಹುದಿತ್ತು. ಹೋಲಿಕೆ ಮಾಡುವಾಗ, ಲಿಖಿತ ಮಾತಿನ ಜೊತೆಗೆ ಒಂದು ವಿಧದ ಪ್ರಮಾಣೀಕರಣವನ್ನು ಕೊಡದಿದ್ದರೆ ಅದು ಮೌನವಾಗಿಯೇ ಉಳಿಯುವದಾಗಿತ್ತು (6:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಪೌಲನು ಸತ್ಯವನ್ನು ಹೇಳುತ್ತಿದ್ದನು, ಆದರೆ ಆತನು "ಹದಿನೈದು ದಿನಗಳಿಂತ" ಅಧಿಕ ಕಾಲ ಏಕೆ ಯೆರೂಸಲೇಮಿನಲ್ಲಿ ಉಳಿದುಕೊಳ್ಳಲಿಲ್ಲ (1:18)? ಯೆರೂಸಲೇಮಿನಲ್ಲಿರುವ ಸಹೋದರರಿಗೆ ತಾರ್ಸದ ಹಳೇ ಸೌಲನ ವೈಯಕ್ತಿಕ ಚರಿತ್ರೆಯ ಕುರಿತು ಹಾಗೂ ಅವರನ್ನು (ಯೆರೂಸಲೇಮಿನಲ್ಲಿ ಮಾತ್ರವಲ್ಲ ಆದರೆ ಹೊರ ಪಟ್ಟಣಗಳಲ್ಲಿ) ಹಿಂಸಿಸಬೇಕೆಂದು ಆತನಲ್ಲಿದ್ದ ಅಭಿಮಾನವನ್ನು ಕುರಿತು ತಿಳಿದಿದ್ದರಿಂದಾಗಿ, ಅವರು ಆತನನ್ನು ಸ್ವಾಗತಿಸಿರಲಿಲ್ಲ ಎಂಬುದರಲ್ಲಿ ಯಾವ ರಹಸ್ಯವೂ ಇರುವದಿಲ್ಲ. ಆತನು ಸ್ವತಃ ಪ್ರವೃತ್ತವಾಗಿ ಮಹಾ ಯಾಜಕನ ಬಳಿಗೆ ಹೋಗಿ "ಆ ಮಾರ್ಗವನ್ನು ಹಿಡಿದವರು ಯಾರಾದರೂ ಸಿಕ್ಕಿದರೆ ಅವರು ಗಂಡಸರಾದರೂ ಸರಿಯೇ ಹೆಂಗಸರಾದರೂ ಸರಿಯೇ ನಾನು ಅವರಿಗೆ ಬೇಡಿಹಾಕಿಸಿ ಯೆರೂಸಲೇಮಿಗೆ ತರುವಂತೆ ದಮಸ್ಕದಲ್ಲಿರುವ ಆಯಾ ಸಭಾಮಂದಿರದವರಿಗೆ ನೀನು ಕಾಗದವನ್ನು ಕೊಡಬೇಕು ಎಂದು ಅವನನ್ನು ಬೇಡಿಕೊಂಡನು" ಎಂಬುದನ್ನು ಅವರು ತಿಳಿದಿರಬಹುದಾದ ಸಾಧ್ಯತೆಯಿರುತ್ತದೆ (ಅಪೊಸ್ತಲರ ಕೃತ್ಯಗಳು 9:1, 2). ವಿಶೇಷವಾಗಿ ಅಲ್ಲಿದ್ದವರೊಳಗೆ ಒಬ್ಬನು ಆ "ಮಾರ್ಗ"ಕ್ಕೆ ಸಂಬಂಧಪಟ್ಟವನಾಗಿದ್ದನು - ಅನನೀಯ ಎಂಬ ವ್ಯಕ್ತಿ, ಈತನನ್ನು ಕರ್ತನು ಸೌಲನಿಗಾದ ಕರೆಯ ಕುರಿತು ತಿಳಿಸಲು ಆತನ ಬಳಿಗೆ ಕಳುಹಿಸಿದನು. ಈ ವ್ಯಕ್ತಿಯು ಕರ್ತನಿಗೆ ಪೌಲನು ಎಷ್ಟೊಂದು ಅಪಾಯಕಾರಿಯಾಗಬಲ್ಲನು ಎಂಬುದಾಗಿ ಹೇಳಿದನು (ಅಪೊಸ್ತಲರ ಕೃತ್ಯಗಳು 9:10-16).

ಒಬ್ಬ ಕ್ರೈಸ್ತನಾದ ಮೇಲೆ, ಪೌಲನು ದಮಸ್ಕದ ಸಭಾಮಂದಿರಗಳಲ್ಲಿ ಪರಿಣಾಮಕಾರಿಯಾದ ಕೆಲಸವನ್ನು ಮಾಡಿದನು (ಅಪೊಸ್ತಲರ ಕೃತ್ಯಗಳು 9:18-22). ಆತನು ಅರಬಸ್ಥಾನಕ್ಕೆ ಪ್ರಯಾಣಿಸುವ ಮುಂಚೆ ಸ್ವಲ್ಪ ಕಾಲ ಅಲ್ಲಿ ಸುವಾರ್ತೆ ಸಾರಿದನು. ಬಳಿಕ ಆತನು ದಮಸ್ಕಕ್ಕೆ ಹಿಂದಿರುಗಿ ಬಂದನು, ಅಲ್ಲಿ ಆತನು ಸುವಾರ್ತೆ ಸಾರುವದನ್ನು ಮುಂದುವರೆಸಿದನು (ಗಲಾತ್ಯ 1:17). ಆ ಪಟ್ಟಣದಲ್ಲಿ ಆತನನ್ನು ಕೊಲ್ಲಬೇಕೆಂಬ ಸಂಚಿನಿಂದ ತಪ್ಪಿಸಿಕೊಂಡನು (ಅಪೊಸ್ತಲರ ಕೃತ್ಯಗಳು 9:23-25), ಮತ್ತು ಬಳಿಕ ಪೇತ್ರನ ಪರಿಚಿತಿ

ಮಾಡಿಕೊಳ್ಳಬೇಕೆಂದು ಯೆರೂಸಲೇಮಿಗೆ ಹೋದನು (ಗಲಾತ್ಯ 1:18). John McRayನು ಅಭಿಪ್ರಾಯ ಪಟ್ಟದ್ದೇನೆಂದರೆ ಪೌಲನ ಪರಿವರ್ತನೆಯ ಸಮಯದಿಂದ ಆತನು ಯೆರೂಸಲೇಮಿಗೆ ಮೊದಲ ಬಾರಿಗೆ ಪ್ರಯಾಣಿಸಿದ ವರೆಗಿನ ಕಾಲಾವಧಿಯು ಸುಮಾರು ಕ್ರಿ.ಶ. 34ರಿಂದ 37ರ ನಡುವೆ ಸಂಭವಿಸಿದ್ದಾಗಿದೆ.[49]

ದಮಸ್ಕ ಹಾಗೂ ಯೆರೂಸಲೇಮಿನ ನಡುವಿನ ಅಂತರವು ಕಡಿಮೆಯಿರುವದರಿಂದ, ಎರಡು ಪ್ರಮುಖ ಪಟ್ಟಣಗಳ ನಡುವೆ, ಮತ್ತು ವಿಶೇಷವಾಗಿ ಅವುಗಳ ಸಭಾಮಂದಿರಗಳ ನಡುವೆ ಸಾಕಷ್ಟು ಪ್ರಮಾಣದ ಸಂವಹನವು ನಡೆದಿತ್ತೆಂಬುದು ತಾರ್ಕಿಕವೆಂದು ತೋರುತ್ತದೆ. ಆದದರಿಂದ, ಯೆರೂಸಲೇಮಿನಲ್ಲಿದ್ದ ಸಹೋದರರಿಗೆ ಉತ್ತರದಲ್ಲಿರುವ ದಮಸ್ಕದಲ್ಲಿ ಇತ್ತೀಚೆಗೆ ನಡೆದ ಎಲ್ಲಾ ರೋಮಾಂಚಕಾರಿ ಸಂಗತಿಗಳ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳಿದಿದ್ದರು ಅಥವಾ ಏನೂ ಗೊತ್ತಿರಲಿಲ್ಲ ಎಂದರೆ ಆಶ್ಚರ್ಯವಾಗುತ್ತದೆ. ವಾಸ್ತವಿಕದಲ್ಲಿ, ಸಹೋದರರು ಆ ಘಟನೆಗಳ ಕುರಿತು ಎಷ್ಟೊಂದು ತಿಳುವಳಿಕೆಯುಳ್ಳವರಾಗಿದ್ದರೆಂದರೆ, ಪೌಲನ ಪರಿವರ್ತನೆಯಾದ ಬಳಿಕ ಮೊದಲ ಸಾರಿ ಯೆರೂಸಲೇಮಿಗೆ ಭೇಟಿ ಕೊಟ್ಟ ವೇಳೆ, ಆತನು ಅಲ್ಲಿನ ಶಿಷ್ಯರ ಸಂಗಡ ಸಂಬಂಧವನ್ನಿಟ್ಟುಕೊಳ್ಳಲು ಕಷ್ಟ ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 9:26).

ಬಾರ್ನಬನಿಗೆ ಮಾತ್ರವೇ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಮಾಹಿತಿಯಿತ್ತೆಂದು ಕಾಣಿಸುತ್ತದೆ. ಆತನು ಒಂದು ಅಗತ್ಯವನ್ನು ಕಂಡನು ಮತ್ತು ಸಂಕೋಚವಿಲ್ಲದೆ ಅದನ್ನು ನೆರವೇರಿಸುವದಕ್ಕೆ ಮುಂದೆ ಹೆಜ್ಜೆಯನ್ನಿಟ್ಟನು (ಅಪೊಸ್ತಲರ ಕೃತ್ಯಗಳು 9:27). ಇದು ಬಾರ್ನಬನಿಗಾದರೋ ಇದೊಂದು ಅಸಹಜವಾದ ಕೆಲಸವೇನೂ ಆಗಿರಲಿಲ್ಲ (ನೋಡಿರಿ ಅಪೊಸ್ತಲರ ಕೃತ್ಯಗಳು 4:32-37; 11:19-26), ಮತ್ತು ಈ ಕೃತ್ಯಗಳಿಂದಾಗಿ ಮುಂದೆ ಯೆರೂಸಲೇಮಿನ ಸಭೆಯಲ್ಲಿ ಪೂರ್ಣ ಭರವಸೆಯುಂಟಾಗುವದಕ್ಕೆ ದಾರಿಯಾಗಿತ್ತು. ಈ ನಿರ್ದಿಷ್ಟವಾದ ಬಿಕ್ಕಟ್ಟಿನಲ್ಲಿ, ಮಿಕ್ಕ ಎಲ್ಲರೂ ಹಿಂದೇಟು ಹಾಕಿದರೆ, ಬಾರ್ನಬನು ಪೌಲನ ಕೈಯನ್ನು ಹಿಡಿದುಕೊಂಡು ಆತನನ್ನು "ಅಪೊಸ್ತಲರ ಬಳಿಗೆ ಕರೆದುಕೊಂಡುಹೋದನು." ಬಾರ್ನಬನಿಗೆ ಈ ಸಂಗತಿಗಳು ಹೇಗೆ ಗೊತ್ತಿದ್ದವು, ವಿಶೇಷವಾಗಿ ಮಿಕ್ಕವರು ತಮ್ಮ ಅಜ್ಞಾನದಲ್ಲಿ ಮುದುಡಿಕೊಂಡಿದ್ದ ವೇಳೆ ಈತನು ಮಾತ್ರ ಹೇಗೆ ತಿಳಿದುಕೊಂಡಿದ್ದನು? ಸೌಲನು ಪಟ್ಟಣದಲ್ಲಿದ್ದಾನೆಂದು ಯಾರೋ ಹೇಳಿದ್ದನ್ನು ಕೇಳಿದಾಗ, ಬಾರ್ನಬನು ಧೈರ್ಯವಾಗಿ ಮುಂದೆ ಹೆಜ್ಜೆಯನ್ನಿಟ್ಟು ಸೌಲನ ಗುರಿಗಳು ಹಾಗೂ ಉದ್ದೇಶವೇನೆಂದು ಕೇಳಿದನೋ? ಬಹುಶಃ ಅದು ನಮಗೆ ಎಂದಿಗೂ ತಿಳಿದು ಬರದಿರಬಹುದು, ಆದರೆ ಒಂದು ಸಂಗತಿಯಂತೂ ಖಚಿತವಾಗಿರುತ್ತದೆ: ಯೆರೂಸಲೇಮಿನ ಸಭೆಯು ಬಾರ್ನಬನಲ್ಲಿ ಬಹಳವಾಗಿ ಭರವಸವನ್ನು ಹೊಂದಿತ್ತು; ತಾವು ಆತನನ್ನು ವಿಶ್ವಾಸಿಬಹುದೆಂದು ತಿಳಿದಿದ್ದರು. ಅದರ ಫಲಿತವೇನಾಗಿತ್ತೆಂದರೆ ಪೌಲನು "ಯೆರೂಸಲೇಮಿನಲ್ಲಿದ್ದುಕೊಂಡು ಅವರಲ್ಲಿ ಬರುತ್ತಾ ಹೋಗುತ್ತಾ ಕರ್ತನ ಹೆಸರಿನಲ್ಲಿ ಧೈರ್ಯದಿಂದ ಬೋಧಿಸಿದನು" (ಅಪೊಸ್ತಲರ ಕೃತ್ಯಗಳು 9:28).

ಯೆಹೂದ್ಯರ ರಾಜಧಾನಿ ನಗರವಾದ ಯೆರೂಸಲೇಮಿನಲ್ಲಿ, ಇದೂ ಎಂದಿಗೂ ನಡೆಯದು. ಪೌಲನು "ಗ್ರೀಕ್ ಹಿನ್ನಲೆಯ ಯೆಹೂದ್ಯರೊಂದಿಗೆ ಮಾತಾಡುತ್ತಾ, ವಾದವನ್ನು ಮಾಡುತ್ತಿದ್ದರೆ"[50] ಅವರು "ಅವರು ಅವನನ್ನು ಕೊಲ್ಲುವದಕ್ಕೆ ಪ್ರಯತ್ನ" ಮಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 9:29). ಗಮಲಿಯೇಲನ ವಿದ್ಯಾರ್ಥಿಯಾಗಿ ಮತ್ತು ರೋಮನ್ ಪೌರತ್ವವನ್ನು ಹೊಂದಿದವನಾಗಿದ್ದ, ಪೌಲನು ಯೆಹೂದಿ ಧರ್ಮ ಮತ್ತು ಸಂಸ್ಕೃತಿಯಲ್ಲಿ ಶಿಕ್ಷಣವನ್ನು ಹೊಂದಿದ್ದು ಮಾತ್ರವೇ ಅಲ್ಲ ಆದರೆ (ಸ್ವಲ್ಪ ಮಟ್ಟಿಗೆ) ಗ್ರೀಕ್ ಸಾಹಿತ್ಯ ಹಾಗೂ

ಪದ್ಯದಲ್ಲಿ ಸಹ ಶಿಕ್ಷಣವನ್ನು ಪಡೆದಿದ್ದನು. ಆತನು ಗ್ರೀಕ್ ಸಾಹಿತ್ಯದೊಂದಿಗೆ ತನಗಿದ್ದ ಪರಿಚಿತಿಯನ್ನು ಅಪೊಸ್ತಲರ ಕೃತ್ಯಗಳು 17:28ರಲ್ಲಿ ಅವರ ಕವಿಗಳಲ್ಲಿ ಕೆಲವರನ್ನು ಉಲ್ಲೇಖ ಮಾಡುವ ಮೂಲಕ ಮತ್ತು ತೀತನಿಗೆ 1:12ರಲ್ಲಿ ಅವರ ಪ್ರವಾದಿಗಳಲ್ಲೊಬ್ಬನನ್ನು ಸೂಚಿಸುವ ಮೂಲಕ ತೋರ್ಪಡಿಸಿದನು.

ಪೌಲನು ಅವಿಶ್ವಾಸಿಗಳಾದ ಯೆಹೂದ್ಯರ ದ್ವೇಷಕ್ಕೆ ಗುರಿಯಾಗುವದಕ್ಕೆ ಇದೇ ಕಾರಣವಾಗಿತ್ತು. ಆತನು ತಾನು ಕರೆಯಲ್ಪಟ್ಟ ವಿಶೇಷ ನಿಯೋಗಕ್ಕಾಗಿ ದೈವಾನುಗ್ರಹದಿಂದ ಮತ್ತು ಶಿಕ್ಷಣದಿಂದ ಸನ್ನದ್ಧುಗೊಂಡವನು ಮಾತ್ರವೇ ಆಗಿರಲಿಲ್ಲ, ಆದರೆ ಅವರೊಳಗೆ ಒಬ್ಬನಾಗಿ ಸಹ ಇದ್ದನು. ಅವರು ಯಾವ ನಜರೇಯರ ಮತಭ್ರಷ್ಟ ಪಂಥವು ತಮ್ಮ ಪಿತೃಗಳ ನಂಬಿಕೆಯನ್ನು ಭ್ರಷ್ಟಗೊಳಿಸುತ್ತಿದೆ ಎಂದು ಪರಿಗಣಿಸಿಕೊಂಡಿದ್ದರೋ ಅದರ ನಾಶನದ ಕಡೆಗೆ ಆತನ ವೈರಾಗ್ಯದ ರೋಷವು ಸಮರ್ಪಿತವಾಗಿತ್ತು. ಹೇಗೂ, ಈಗ ಅವರು ಸೌಲನ್ನು ನಜರೇಯರಲ್ಲಿ ಒಬ್ಬನಾಗಿ ಧರ್ಮಶಾಸ್ತ್ರವನ್ನು ನಾಶಗೊಳಿಸಲು, ಅವರ ಕುರಿಗಳನ್ನು ಕದ್ದುಕೊಳ್ಳಲು, ಮತ್ತು ನಜರೇತಿನ ಸುಳ್ಳು ಮೆಸ್ಸೀಯನನ್ನು ಹಿಂಬಾಲಿಸಬೇಕೆಂದು ಅವರಿಗೆ ಬೋಧಿಸುವದಕ್ಕೆ ಮುಂದಾಗಿದ್ದಾನೆಂದು ಕಂಡಿದ್ದರು.[51] ಹೊರಗಿನವರಿಂದ ಬಂದ ವಿರೋಧವು ಸಾಕಷ್ಟು ಕೆಟ್ಟದ್ದಾಗಿತ್ತು, ಆದರೆ ಒಳಗಿನವರಿಂದ ಎದುರಾಗುವ ವಿರೋಧದಷ್ಟು ಕೆಟ್ಟ ಹಾಗೂ ಅಪಾಯಕರವೆಂದು ಬೇರೆ ಇನ್ನಾವ ವಿರೋಧವನು ಕಾಣಲ್ಪಡುವದಿಲ್ಲ.

ಯೆರೂಸಲೇಮಿನಲ್ಲಿದ್ದ ಸಹೋದರರು ಪೌಲನ ವಿರುದ್ಧ ಯೆಹೂದ್ಯರಿಗಿದ್ದ ದ್ವೇಷದ ತೀವ್ರತೆಯನ್ನು ಗ್ರಹಿಸಿಕೊಂಡಾಗ ಮತ್ತು ಆತನು ಎಂಥ ಅಪಾಯದಲ್ಲಿದ್ದಾನೆಂದು ಕಂಡಾಗ, "ಅವರು ಅವನನ್ನು ಕೈಸರೈಯಕ್ಕೆ ಕರಕೊಂಡು ಹೋಗಿ ಅಲ್ಲಿಂದ ತಾರ್ಸಕ್ಕೆ ಕಳುಹಿಸಿದರು" (ಅಪೊಸ್ತಲರ ಕೃತ್ಯಗಳು 9:30). ಲೂಕನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ತನ್ನ ಕಥನವನ್ನು ಮುಂದುವರೆಸಿದ ರೀತಿಯನ್ನು ನೋಡುವದಾದರೆ, ಅವರ ರೌದ್ರವು ಪ್ರಮುಖವಾಗಿ (ಪ್ರತ್ಯೇಕವಾಗಿ ಅಲ್ಲದಿದ್ದರೂ) ಪೌಲನ ಮೇಲೆಯೇ ಕೇಂದ್ರಿಕೃತವಾಗಿತ್ತೆಂದು, ಮತ್ತು ಒಟ್ಟಾರೆಯಾಗಿ ಯೆರೂಸಲೇಮಿನ ಕ್ರೈಸ್ತರ ಮೇಲೆ ಆಗಿರಲಿಲ್ಲ ಎಂದು ತೋರುತ್ತದೆ. ಅಷ್ಟುಮಾತ್ರವಲ್ಲದೆ, ಆ ಸಮಯದಲ್ಲಿ ಸಭೆಗೆ, ಯೂದಾಯದಲ್ಲಾಗಲಿ ಅಥವಾ ಫಿಲಿಷ್ಟಿಯದಲ್ಲಾಗಲಿ ಯಾವದೇ ವಿಧವಾದ ಹಿಂಸೆಯು ಉದ್ಭವವಾಗಿದ್ದರ ಕುರಿತು ಆತನು ವರದಿ ಮಾಡಿರುವದಿಲ್ಲ. ಪೌಲನನ್ನು ಅಲ್ಲಿಂದ ಹೊರಗೆ ಕರೆದುಕೊಂಡು ಹೋದ ಬಳಿಕ, "ಯೂದಾಯ ಗಲಿಲಾಯ ಸಮಾರ್ಯ ಸೀಮೆಗಳಲ್ಲಿದ್ದ ಸಭೆಯು ಸಮಾಧಾನ ಹೊಂದಿತು; ಮತ್ತು ಭಕ್ತಿಯಲ್ಲಿ ಬೆಳೆದು ಕರ್ತನ ಭಯದಲ್ಲಿ[52] ನಡೆದು ಪವಿತ್ರಾತ್ಮನಿಂದ ಪ್ರೋತ್ಸಾಹವನ್ನು ಹೊಂದಿ ಹೆಚ್ಚುತ್ತಾ ಬಂತು" (ಅಪೊಸ್ತಲರ ಕೃತ್ಯಗಳು 9:31).

**ವಚನ 21.** ವಚನ 20ರಲ್ಲಿ ಪ್ರಕ್ಷೇಪ ಚಿಹ್ನೆಯಲ್ಲಿನ ಹೇಳಿಕೆಯ ಬಳಿಕ, ಪೌಲನು ತನ್ನ ಕಥೆಯನ್ನು ಮುಂದುವರೆಸುತ್ತಾನೆ: **ಆಮೇಲೆ ಸಿರಿಯ ಮತ್ತು ಕಿಲಿಕ್ಯ ಪ್ರಾಂತ್ಯಗಳಿಗೆ ಹೋದೆನು.** ಆತನು ಈ ಕ್ಷೇತ್ರಗಳನ್ನು ಹಿಮ್ಮೊಗವಾದ ಕಾಲಾನುಕ್ರಮದಲ್ಲಿ ಪಟ್ಟಿ ಮಾಡಿರುವಂತೆ ಕಾಣಿಸುತ್ತದೆ, ಯಾಕೆಂದರೆ ಅಪೊಸ್ತಲರ ಕೃತ್ಯಗಳು 9:30ರಲ್ಲಿ ಸಹೋದರರು ಆತನನ್ನು ಕೈಸರೈಕ್ಕೆ ಕರೆದುಕೊಂಡು ಹೋಗಿ ನಂತರ ತಾರ್ಸಕ್ಕೆ ಕಳುಹಿಸಿ ಕೊಟ್ಟರು ಎಂಬುದಾಗಿ ಲೂಕನು ವರದಿ ಮಾಡುತ್ತಾನೆ, ತಾರ್ಸವು ಕಿಲಿಕ್ಯದಲ್ಲಿದ್ದ ಊರಾಗಿತ್ತು. ಅನಂತರ, ಅಪೊಸ್ತಲರ ಕೃತ್ಯಗಳು 11:25, 26ರಲ್ಲಿ, ಬಾರ್ನಬನು ಪೌಲನನ್ನು ಹುಡುಕುವದಕ್ಕೆ ತಾರ್ಸಗೆ ಹೋದನು ಮತ್ತು ಸಿರಿಯಾದ ಅಂತಿಯೋಕ್ಯದಲ್ಲಿ ಸೇವೆಯನ್ನು ಮಾಡುವದಕ್ಕೆ ಅಲ್ಲಿಗೆ ಕರೆದುಕೊಂಡು ಬಂದನು. ಹೇಗೂ, ಆ ಕ್ರಮಾನುಸಾರದಲ್ಲಿ ಹೇಳಿರುವದಕ್ಕೆ ಕಾರಣವು ಆ ಕಾಲದಲ್ಲಿ ಸಿರಿಯ

ಮತ್ತು ಪೂರ್ವ ದಿಕ್ಕಿನ ಕಿಲಿಕ್ಯವು ಜೊತೆಗೂಡಿ ಒಂದೇ ಪ್ರಾಂತ್ಯವಾಗಿದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 15:23, 41).[53] ಎರಡು ಕ್ಷೇತ್ರಗಳೊಳಗೆ ಸಿರಿಯವು ಹೆಚ್ಚು ಪ್ರಬಲವಾಗಿತ್ತಾದ್ದರಿಂದ ಅದನ್ನು ಪಟ್ಟಿಯಲ್ಲಿ ಮೊದಲಲ್ಲಿ ಸೇರಿಸಲಾಗಿದೆ.

ಅಪೊಸ್ತಲರ ಕೃತ್ಯಗಳು 9:28-30ರಲ್ಲಿ ಲೂಕನು ನೀಡುವ ಕಥನದ ದಾಟಿಯು ಗಲಾತ್ಯ 1:21ರಲ್ಲಿ ಪೌಲನು ನೀಡುವ ಕಥನದಿಂದ ಗಮನಾರ್ಹವಾದ ರೀತಿಯಲ್ಲಿ ಭಿನ್ನವಾಗಿರುತ್ತದೆ. ಪೌಲನು ತನ್ನನ್ನು ಸಹೋದರರು ಕಳುಹಿಸಿ ಕೊಡುವಂತೆ ಕಾರಣವಾದ ಪರಿಸ್ಥಿತಿಗಳ ಬಗ್ಗೆಯಾಗಲಿ ಅಥವಾ ತನ್ನ ಮೇಲೆ ನೇತಾಡುತ್ತಿದ್ದ ವೈಯಕ್ತಿಕ ಅಪಾಯದ ಕುರಿತಾಗಲಿ ಏನನ್ನೂ ಹೇಳಲಿಲ್ಲ. ಇದು ನಂತರದ ಸಂದರ್ಭವೊಂದರಲ್ಲಿ ಪೌಲನು ಯೆರೂಸಲೇಮಿಗೆ ಹೋಗುವ ದಾರಿಯಲ್ಲಿ ಕೈಸರೈಯಕ್ಕೆ ಬಂದ ವೇಳೆ ಆತನ ಸಹೋದರರು, ಪ್ರವಾದಿಗಳೂ ಸೇರಿದಂತೆ ಆತನ ಸುರಕ್ಷತೆಯ ಕುರಿತು ಚಿಂತೆಗೊಳಗಾಗಿದ್ದನ್ನು ಜ್ಞಾಪಿಸುವದಾಗಿದೆ. ಅವರು ಆತನನ್ನು ಅಲ್ಲಿಗೆ ಹೋಗಬಾರದೆಂದು ಬೇಡಿಕೊಂಡಾಗ, ಆತನ ಪ್ರತ್ಯುತ್ತರವು ಇಷ್ಟೆ ಆಗಿತ್ತು: "ನೀವು ಅತ್ತತ್ತು ಯಾಕೆ ನನ್ನನ್ನು ಎದೆ ಒಡಿಸುತ್ತೀರಿ? ನಾನು ಕರ್ತನಾದ ಯೇಸುವಿನ ಹೆಸರಿನ ನಿಮಿತ್ತವಾಗಿ ಯೆರೂಸಲೇಮಿನಲ್ಲಿ ಬೇಡೀಹಾಕಿಸಿಕೊಳ್ಳುವದಕ್ಕೆ ಮಾತ್ರವಲ್ಲದೆ ಸಾಯುವದಕ್ಕೂ ಸಿದ್ಧವಾಗಿದ್ದೇನೆ" (ಅಪೊಸ್ತಲರ ಕೃತ್ಯಗಳು 21:8-13).

ತಾನು ಯೆರೂಸಲೇಮಿನಲ್ಲಿದ್ದ ವೇಳೆ ತಾರ್ಸಗೆ ಪಲಾಯನ ಮಾಡುವಂತೆ ಮಾಡಿದ ವಿರೋಧವನ್ನು ಕುರಿತು ಪೌಲನು ಒತ್ತಿ ಹೇಳಲಿಲ್ಲ. ಇದು ಆತನ ಸಂದೇಶಕ್ಕೆ ಪ್ರಾಮುಖ್ಯವಾಗಿದ್ದಿರಬಹುದು. ಆತನು ಯೆರೂಸಲೇಮಿನಲ್ಲಿ ಕಳೆದ ಸಮಯವು ಕ್ರಿಸ್ತನನ್ನು ಮತ್ತು ಆತನಲ್ಲಿ ಸಿಕ್ಕುವ ರಕ್ಷಣೆಯ ಕುರಿತು ಸಾರುವದಕ್ಕೆ ಸಿಕ್ಕ ಮತ್ತೊಂದು ಸದವಕಾಶವಾಗಿತ್ತಷ್ಟೆ. ಪೌಲನು ಪೇತ್ರನ ಪರಿಚಿತಿಯನ್ನು ಮಾಡಿಕೊಳ್ಳಲು ಬಂದಿದ್ದನು, ಮತ್ತು ಈ ಉದ್ದೇಶವು ಸಾಧಿಸಲ್ಪಟ್ಟಿತ್ತು. ಅಲ್ಲಿ ಒತ್ತಿ ಹೇಳಲಾದ ಅಂಶವು ಏನೆಂದರೆ ಆತನು ತನ್ನ ಅಪೊಸ್ತಲತ್ವದ ನೈಜತೆ ಹಾಗೂ ಅಧಿಕಾರದ ವಿಷಯದಲ್ಲಿ ಪ್ರಮಾಣೀಕರಿಸಲು ಯಾವ ಮನುಷ್ಯನ ಮೇಲಾಗಲಿ, ಯಾವದೇ ಅಪೊಸ್ತಲರೂ ಸೇರಿದಂತೆ, ಯಾರ ಮೇಲೆಯೂ ಅವಲಂಭಿತನಾಗಿರಲಿಲ್ಲ ಎಂಬುದೆ.

**ವಚನ 22.** ಪೌಲನು ತನ್ನ ಚರ್ಚೆಯಾಂಶವನ್ನು ಮುಂದುವರೆಸುತ್ತಾ ಹೀಗೆ ಹೇಳುತ್ತಾನೆ, **ಆದರೆ ಕ್ರಿಸ್ತನಲ್ಲಿರುವ ಯೂದಾಯದ ಸಭೆಗಳಿಗೆ ನನ್ನ ಗುರುತಿರಲಿಲ್ಲ.** ನಿಶ್ಚಯವಾಗಿಯೂ, ಆತನು ತನ್ನ ಅಪೊಸ್ತಲಿಕ ಅಧಿಕಾರವನ್ನು ಯೂದಾಯದ ಸಭೆಯಿಂದ ಪಡೆದುಕೊಳ್ಳಲಿಲ್ಲ, ಯಾಕೆಂದರೆ ಆ ವಿಶ್ವಾಸಿಗಳು ಖ್ಯಾತಿಯ ಮೂಲಕವಾಗಿ ಮಾತ್ರವೇ ಆತನ ಪರಿಚಯವನ್ನು ಹೊಂದಿದ್ದರು. ಗ್ರೀಕ್ ವಾಕ್ಯವು ಅಕ್ಷರಶಃ ಹೇಳುವದೇನೆಂದರೆ ಆತನ "ಮುಖ ಪರಿಚಯವಿರಲಿಲ್ಲ" ಎಂದು ಹೇಳುತ್ತದೆ; NIVಯು ಆತನು ಅವರಿಗೆ "ವೈಯಕ್ತಿಕವಾಗಿ ಪರಿಚಯವಿಲ್ಲದವನಾಗಿದ್ದನು" ಎಂದು ಹೇಳುತ್ತದೆ. ಯೂದಾಯದ ಸಹೋದರರು ಬೀದಿಯಲ್ಲಿ ಹಾದು ಹೋಗುವಾಗ ಪೌಲನನ್ನು ದಾಟಿಕೊಂಡು ಹೋಗಿದ್ದರೆ ಆತನ ಗುರುತು ಹಿಡಿದಿರುತ್ತಿರಲಿಲ್ಲ.

"ಯೂದಾಯದ ಸಭೆಗಳಿಗೆ" ಎಂಬ ಪದಗುಚ್ಛದಲ್ಲಿ, "ಯೂದಾಯ" ಎಂಬುದರ ಅರ್ಥವೇನು? ಅದು ಕೇವಲ ಯೆರೂಸಲೇಮಿನ ಸುತ್ತಲಿರುವ ಕ್ಷೇತ್ರವನ್ನು ಮಾತ್ರವೇ ಸೂಚಿಸುತ್ತದೋ, ಅಥವಾ ಅದರು ವಿಶಾಲವಾದ ಅರ್ಥ ಸೂಚನೆಯನ್ನು ಹೊಂದಿದೆಯೋ? F. F. Bruceನು ಹೇಳಿದ್ದೇನೆಂದರೆ, ಗಲಾತ್ಯವರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆ, "ಯೂದಾಯದ ರೋಮನ್ ಪ್ರಾಂತ್ಯದೊಳಗೆ ಗಲಿಲಾಯವು ಮಾತ್ರವಲ್ಲದೆ ಯೂದಾಯ

(ಸಂಕುಚಿತ ಅರ್ಥದಲ್ಲಿ) ಮತ್ತು ಸಮಾರ್ಯಗಳು ಸೇರಿದ್ದವು (ಅದು ಕ್ರಿ.ಶ. 44ರಲ್ಲಿ ಹೆರೋದ ಅಗ್ರಿಪ್ಪ Iನ ಮರಣದ ಸಮಯದಿಂದಲೂ ಹಾಗೆಯೇ ಇರುತ್ತದೆ); ಹಾಗಾದರೆ 'ಯೂದಾಯ' ಎಂಬುದು ಇಲ್ಲಿ ಇಡೀ ಫಿಲಿಷ್ಟಿಯವನ್ನು ಸೂಚಿಸುತ್ತಿರಬಹುದಾಗಿದೆ."[54]

ಈ ಅರ್ಥವು ಸರಿಯಿರುವದಾದರೆ, "ಯೂದಾಯದ ಸಭೆಗಳು" ಎಂಬುದು ಅಪೊಸ್ತಲರ ಕೃತ್ಯಗಳು 9:31ರಲ್ಲಿರುವ "ಯೂದಾಯ ಗಲಿಲಾಯ ಸಮಾರ್ಯ ಸೀಮೆಗಳಲ್ಲಿದ್ದ ಸಭೆಯು" ಎಂಬ ಪದಗುಚ್ಛದಂತೆಯೇ ಇರಬಹುದಾಗಿದೆ. ಈ ಸಭೆಗಳು ಸ್ತೇಫನನಿಗೆ ಕಲ್ಲೆಸೆದು ಕೊಲ್ಲಲ್ಪಟ್ಟ ಬಳಿಕ ಯೆರೂಸಲೇಮಿನಲ್ಲಿ ಉದ್ಭವವಾದ ಹಿಂಸೆಯ ಫಲಿತವಾಗಿ ಸ್ಥಾಪಿಸಲ್ಪಟ್ಟಿದ್ದವು. ಸೌಲನು ಕ್ರೈಸ್ತರನ್ನು ಬಂಧಿಸುವದಕ್ಕೆ ಹುಡುಕಾಡುತ್ತಿದರಿಂದಾಗಿ, ಅನೇಕರು ಯೂದಾಯ ಹಾಗೂ ಸಮಾರ್ಯ ಸೀಮೆಗಳಿಗೆ ಓಡಿ ಹೋಗಿದ್ದರು. ಈ ಸಹೋದರರು "ಚದುರಿ ಹೋದ" ಕಡೆಗಳಲ್ಲೆಲ್ಲಾ "ಸುವಾರ್ತಾವಾಕ್ಯವನ್ನು ಸಾರುತ್ತಿದ್ದರು" (ಅಪೊಸ್ತಲರ ಕೃತ್ಯಗಳು 8:1–4). ಅವರ ಸಂದೇಶವನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡವರು ಕ್ರಿಸ್ತನಿಂದ ಸಭೆಗೆ ಸೇರಿಸಲ್ಪಟ್ಟರು. ಅವರು "ಕ್ರಿಸ್ತನಲ್ಲಿ" ಜೀವಿಸುವ ಜನರಾಗಿದ್ದರು (ನೋಡಿರಿ 3:26–28; 1 ಕೊರಿಂಥ 1:2; ಎಫೆಸ 1:1; ಫಿಲಿಪ್ಪಿ 1:1; ಕೊಲೊಸ್ಸೆ 1:2; 1 ಥೆಸಲೋನಿಕ 1:1; 2 ಥೆಸಲೋನಿಕ 1:1).

**ವಚನ 23.** ಪೌಲನು ತನ್ನ ಮೊದಲೇ ಹೇಳಿದ್ದ ತನ್ನ ಹೇಳಿಕೆಗೆ ಈ ಕೆಳಗಿನದನ್ನು ಹೊರತುಪಡಿಸುತ್ತಾನೆ: **ಪೂರ್ವದಲ್ಲಿ ನಮ್ಮನ್ನು ಹಿಂಸೆಪಡಿಸಿದವನು ತಾನು ಹಾಳುಮಾಡುತ್ತಿದ್ದ ಮತವನ್ನು ಈಗ ಪ್ರಸಿದ್ಧಿಪಡಿಸುತ್ತಾನೆಂಬ.** ಈ ಮಾತುಗಳು ಪೌಲನು ಕೇಳಿಸಿಕೊಂಡಿದ್ದ ವರದಿಯ ಸಾರಾಂಶವಾಗಿದ್ದು, ಆತನ ವಿಷಯದಲ್ಲಿ ಯೂದಾಯದಲ್ಲಿನ ಸಭೆಗಳೊಳಗೆ ಹರಿದಾಡುತ್ತಿದ್ದವು.[55] ಪೌಲನು ಯೆರೂಸಲೇಮಿಗೆ ನೀಡಿದ ಕ್ಲುಪ್ತ ಭೇಟಿಯ ನಂತರದಲ್ಲಿ ಇಂಥ ವರದಿಗಳು ಹುಟ್ಟಿಕೊಂಡಿರಬಹುದಾಗಿದೆ, ಅಲ್ಲಿ ಆತನು ಹದಿನೈದು ದಿನಗಳ ಕಾಲ ಕ್ರೈಸ್ತರ ಚಿಕ್ಕ ಗುಂಪನ್ನು ಮಾತ್ರವೇ ಭೇಟಿ ಮಾಡಿದ್ನು (1:18, 19; ಅಪೊಸ್ತಲರ ಕೃತ್ಯಗಳು 9:26–30). ಆ ವರದಿಗಳು ಉತ್ತರದಲ್ಲಿರುವ ದಮಸ್ಕದಿಂದ ಅಲ್ಲಿಗೆ ಬಂದಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 9:19–22).

ಯೂದಾಯದಲ್ಲಿನ ಬಹಳಷ್ಟು ಕ್ರೈಸ್ತರು ಪೌಲನನ್ನು ವೈಯಕ್ತಿಕವಾಗಿ ತಿಳಿದಿರಲಿಲ್ಲವಾದರೂ, ಆತನು ದೇವರ ಜನರ ವಿರುದ್ಧ ಮಾಡಿದ ತನ್ನ ಹೀನವಾದ ಪಾಪಗಳಿಗೋಸ್ಕರ ಪಶ್ಚಾತ್ತಾಪ ಪಟ್ಟಿರುತ್ತಾನೆ ಮತ್ತು ಒಬ್ಬ ಕ್ರೈಸ್ತನಾಗಿದ್ದಾನೆ ಎಂಬ ಶುಭವರ್ತಮಾನವನ್ನು ಕೇಳಿಸಿಕೊಂಡಿದ್ದರು. "ಹಿಂಸೆಪಡಿಸಿದವನು" (διώκω, *diōkō*) ಮತ್ತು "ಹಾಳು ಮಾಡುತ್ತಿದ್ದ" (πορθέω, *portheō*) ಎಂಬ ಕ್ರಿಯಾಪದಗಳು 1:13ರಿಂದ ಪುನರಾವರ್ತಿಸಲ್ಪಟ್ಟಿರುತ್ತವೆ, ಅಲ್ಲಿ ಪೌಲನು ತಾನು "ದೇವರ ಸಭೆಯನ್ನು ಅತ್ಯಂತವಾಗಿ *ಹಿಂಸೆಪಡಿಸಿ ಹಾಳುಮಾಡುತ್ತಿದ್ದೆನು*" ಎಂದು ಹೇಳಿದನು (ಒತ್ತಿ ಹೇಳಿದ್ದು ನನ್ನದು). ಹೇಗೂ, 13ನೇ ವಚನದಲ್ಲಿ ಆತನ ಹಗೆತನದ ಲಕ್ಷ್ಯವಾಗಿದ್ದ "ಸಭೆ"ಯು, 23ನೇ ವಚನದಲ್ಲಿ "ಮತ" ಎಂದು ಗುರುತಿಸಲ್ಪಟ್ಟಿದೆ. ಖಂಡಿತವಾಗಿಯೂ, ಆ ಎರಡು ಭಾವನೆಗಳು ನಿಕಟವಾಗಿ ಸಂಬಂಧ ಹೊಂದಿವೆ; "ಸಭೆ"ಯು "ಮತ" (ಸುವಾರ್ತಾ ಸಂದೇಶದ) ಮೇಲೆ ಕಟ್ಟಲ್ಪಟ್ಟಿರುತ್ತದೆ. ಪೌಲನು ಕ್ರೈಸ್ತತ್ವವನ್ನು ನಿರ್ಮೂಲನೆ ಮಾಡಬೇಕೆಂದು ಬಯಸಿದ್ದನು, ಅದನ್ನು ಆತನು ಸಂಪ್ರದಾಯಿಕ ಯೆಹೂದಿಮತಕ್ಕೆ ಸಂಚಕಾರ ಎಂದು ಎಣಿಸಿದ್ದನು. ವಿಪರ್ಯಾಸವೆಂದರೆ, ಹಿಂದೊಮ್ಮೆ ತಾನು ನಾಶ ಮಾಡಬೇಕೆಂದು ಪ್ರಯತ್ನಿಸಿದ್ದ ಅದೇ ಸುವಾರ್ತೆಯನ್ನೇ ಈಗ ಸ್ವತಃ ಸಾರುವವನಾಗಿ ಮಾರ್ಪಟ್ಟಿದ್ದನು.

**ವಚನ 24.** ಹಿಂಸಕನಾಗಿದ್ದವನು-ಬೋಧಕನಾಗಿರುವ ಕುರಿತು ಕೇಳಿಸಿಕೊಂಡಿದ್ದರ ಫಲಿತವಾಗಿ, ಯೂದಾಯದಲ್ಲಿನ ಸಭೆಗಳು **ದೇವರನ್ನು ಕೊಂಡಾಡಿದರು**. ಪೌಲನು ಈ ಹೇಳಿಕೆಯನ್ನು ನೀಡಿದ ಉದ್ದೇಶವು ಯೆಹೂದಿಕರಣಗೊಳಿಸುವ ವ್ಯಕ್ತಿಗಳಿಗೆ ಒಂದು ಗದರಿಕೆಯಾಗಬೇಕೆಂದು ಆಗಿತ್ತೆಂಬುದರಲ್ಲಿ ಸಂಶಯವಿಲ್ಲ. ಯೂದಾಯದಲ್ಲಿನ ಯೆಹೂದಿ ಕ್ರೈಸ್ತರು ಆತನ ಪರಿವರ್ತನೆ ಹಾಗೂ ಸೇವೆಯ ವಿಷಯದಲ್ಲಿ ಸಂತೋಷ ಪಟ್ಟಿದ್ದರೆ, ಗಲಾಗತ್ಯದಲ್ಲಿ ಸಭೆಗಳೊಳಗೆ ನುಸುಳಿಕೊಂಡಿದ್ದ ಯೆಹೂದಿಕರಣ ಮಾಡುವವರು ಆತನ ಅಪೊಸ್ತಲತ್ವವನ್ನು ಹೀನೈಸಿ ಮಾತಾಡುತ್ತಿದ್ದರು ಹಾಗೂ ಆತನ ಸಂದೇಶವನ್ನು ಅಲ್ಲಗಳೆಯುತ್ತಿದ್ದರು. ಯೂದಾಯದ ಕ್ರೈಸ್ತರು ಸರಿಯಾದ ವಿಧದಲ್ಲಿ ಪ್ರತಿಕ್ರಿಯಿಸಿದ್ದರು, ಪೌಲನ ಜೀವಿತದಲ್ಲಿ ದೇವರ ಕೃಪೆಯಿಂದಾದ ಪ್ರಭಾವಕ್ಕಾಗಿ ಕೃತಜ್ಞತೆಯುಳ್ಳವರಾಗಿದ್ದರು.

ಅಧ್ಯಾಯದ ಈ ಅಂತಿಮ ವಚನವು ಪೌಲನು ಯೂದಾಯವನ್ನು ಬಿಟ್ಟು ತಾರ್ಸಗೆ ಹೋದ ನಂತರದಲ್ಲಿ ಲೂಕನು ನೀಡಿದ ಸಕಾರಾತ್ಮಕ ವರದಿಯೊಂದಿಗೆ ಹೊಂದಾಣಿಕೆಯಾಗುತ್ತದೆ: “ಹೀಗಿರಲಾಗಿ ಯೂದಾಯ ಗಲಿಲಾಯ ಸಮಾರ್ಯ ಸೀಮೆಗಳಲ್ಲಿದ್ದ ಸಭೆಯು ಸಮಾಧಾನ ಹೊಂದಿತು; ಮತ್ತು ಭಕ್ತಿಯಲ್ಲಿ ಬೆಳೆದು ಕರ್ತನ ಭಯದಲ್ಲಿ ನಡೆದು ಪವಿತ್ರಾತ್ಮನಿಂದ ಪ್ರೋತ್ಸಾಹವನ್ನು ಹೊಂದಿ ಹೆಚ್ಚುತ್ತಾ ಬಂತು” (ಅಪೊಸ್ತಲರ ಕೃತ್ಯಗಳು 9:31).

# ಅನ್ವಯಿಸುವಿಕೆ

## ಪರಿಚಯ ಭಾಗಗಳ ಮಹತ್ವ (1:1-5)

ದೇವರ ವಾಕ್ಯದ ವಿದ್ಯಾರ್ಥಿಗಳು ಹೊಸ ಒಡಂಬಡಿಕೆಯ ಅಪೊಸ್ತಲಿಕ ಹಾಗೂ ಪ್ರವಾನಾತ್ಮಕ ಬರಹಗಳಿಗೆ ನೀಡುವ ಪರಿಚಯ ಭಾಗಗಳನ್ನು ಎಂದಿಗೂ ಲಘುವಾದ ರೀತಿಯಲ್ಲಿ ಸ್ಥೂಲವಾಗಿ ಕಣ್ಣಾಡಿಸಬಾರದು. ಆರಂಭಿಕ ಮಾತುಗಳಲ್ಲಿ, ಪ್ರೇರಿತ ಲೇಕಕನು ಅನೇಕ ಸಾರಿ ಪ್ರಮುಖ ಚರ್ಚೆಯಾಂಶ ಅಥವಾ ಆತನು ಪುಸ್ತಕದ ಉಳಿದ ಭಾಗದಲ್ಲೆಲ್ಲಾ ಚರ್ಚಿಸಲಿಚ್ಛಿಸುವ ಚರ್ಚೆಯಾಂಶಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುತ್ತಾನೆ. ಮೇಲಿಂದಮೇಲೆ, ಇವುಗಳು ಪರಿಚಿತವಾದವುಗಳು ಆದಾಗ್ಯೂ ಕ್ರೈಸ್ತ ನಂಬಿಕೆಗೆ ಅತ್ಯಾವಶ್ಯಕವಾಗಿರುವಂಥ ಸಾರಭೂತ ಸತ್ಯಗಳಾಗಿವೆ. ಗಲಾತ್ಯದವರಿಗೆ ಬರೆದ ಪತ್ರಿಕೆಯ ಪರಿಚಯ ಭಾಗದಲ್ಲಿ (1:1–5), ಪೌಲನು ತನ್ನ ಅಪೊಸ್ತಲಿಕ ಅಧಿಕಾರದ ಕುರಿತು, ದೇವರ ಕೃಪೆ ಹಾಗೂ ಶಾಂತಿ, ಮತ್ತು ಯೇಸು ಕ್ರಿಸ್ತನ ಯಜ್ಞ ಹಾಗೂ ಪುನರುತ್ಥಾನದ ಕುರಿತಾಗಿ ಹೇಳುತ್ತಾನೆ.

## ಪುನರುತ್ಥಾನದಲ್ಲಿ ನಿರೀಕ್ಷೆ (1:1)

ಈ ಲೋಕದಲ್ಲಿ, ನಮ್ಮನ್ನು ಶ್ರಮೆ ಹಾಗೂ ಮರಣಗಳು ಸುತ್ತವರೆದಿರುತ್ತವೆ. ಈ ಜೀವನವನ್ನು ಒಂದು ಭೂಲೋಕದ ದೃಷ್ಟಿಕೋನದಿಂದ ನೋಡುವದಾದರೆ, ಅದು ನಿಜಕ್ಕೂ ಒಂದು ಕಣ್ಣೀರಿನ ಕಣಿವೆಯೇ ಸರಿ. ಹೇಗೂ, ನಾವು ಕಡೇ ದಿನದಲ್ಲಾಗುವ ಪುನರುತ್ಥಾನದ ವಿಷಯದಲ್ಲಿ ದೊಡ್ಡ ನಿರೀಕ್ಷೆಯನ್ನಿಟ್ಟುಕೊಂಡಿದ್ದೇವೆ. ಈ ಲೋಕವು ನಮ್ಮ ನಿವಾಸವಲ್ಲ ಎಂಬುದನ್ನು ನಂಬಿಕೆ ಮತ್ತು ಅನುಭವ ಎರಡರ ಮೂಲಕವೂ ತಿಳಿದುಕೊಂಡವದಾಗಿರುವದರಿಂದ, ನಮ್ಮ ನಿರ್ಲಯತ್ವದ ಸಮ್ಮುಖದಲ್ಲಿ ಸಹ ನಿರೀಕ್ಷೆಯನ್ನು ಹಿಡಿದುಕೊಂಡಿರಬಲ್ಲೆವು. ಫಿಲಿಪ್ಪಿ 3:20, 21ರಲ್ಲಿ, ಪೌಲನು ಈ ಪ್ರೋತ್ಸಾಹವನ್ನು ನೀಡುತ್ತಾನೆ,

> ನಾವಾದರೊ ಪರಲೋಕ ನಿವಾಸಿಗಳು; ಅಲ್ಲಿಂದಲೇ ರಕ್ಷಕನು ಬರುವದನ್ನು ಎದುರು ನೋಡುತ್ತಾ ಇದ್ದೇವೆ; ಆತನೇ ಕರ್ತನಾದ ಯೇಸು ಕ್ರಿಸ್ತನು. ಆತನು ಎಲ್ಲವನ್ನೂ ತನಗೆ ಅಧೀನ ಮಾಡಿಕೊಳ್ಳಲಾಗುವ ಪರಾಕ್ರಮವನ್ನು ಸಾಧಿಸಿ ದೀನಾ ವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸುವದಕ್ಕೆ ಶಕ್ತನಾಗಿದ್ದು ಪ್ರಭಾವವುಳ್ಳ ತನ್ನ ದೇಹಕ್ಕೆ ಸಾರೂಪ್ಯವಾಗುವಂತೆ ಮಾಡುವನು (NKJV).

## ಕ್ರಿಸ್ತನು ತನ್ನನ್ನು ಒಪ್ಪಿಸಿಕೊಂಡನು (1:4)

ದೇವತ್ವದ ಮನಸ್ಸನ್ನು ಅವಲೋಕಿಸುವ ವೇಳೆ, ನಾವು ನಮಗಿರುವ ಮಿತಿಗಳನ್ನು ಗ್ರಹಿಸಿಕೊಳ್ಳತಕ್ಕದ್ದು (ಯೆಶಾಯ 55:8, 9); ನಾವು ದಾರಿ ಬಿಟ್ಟು ನಿಷ್ಫಲವಾದ ಊಹಾಪೋಹಗಳೊಳಗೆ ಸಾಗುವಂತೆ ನಮಗೆ ಅವಕಾಶವನ್ನು ಕೊಡಕೂಡದರು. ಇನ್ನೂ ಹೇಳುವದಾದರೆ, ನಾವು ವಾಕ್ಯವನ್ನು ಧ್ಯಾನಿಸಬೇಕು ಎಂದು ಶಾಸ್ತ್ರಗಳಿಂದ ಪ್ರೋತ್ಸಾಹಿಸಲ್ಪಟ್ಟಿರುತ್ತೇವೆ, ಮತ್ತು ದೇವರು ತನ್ನ ಚಿತ್ತವನ್ನು ದೀನರಾಗಿಯೂ ಪ್ರಮಾಣಿಕರಾಗಿಯೂ ಅರ್ಥಮಾಡಿಕೊಳ್ಳಲು ಅಪೇಕ್ಷಿಸುವವರಿಗೆ ಪ್ರತಿಫಲವನ್ನು ಕೊಡುವನು (ಯೆಹೋಶುವ 1:8; ಕೀರ್ತನೆ 1:1-3; 119:15, 46-48).

ಕರ್ತನು ಗೆತ್ಸೇಮನೆ ತೋಟದಲ್ಲಿ ಪ್ರಾರ್ಥನೆಯನ್ನು ಮಾಡುತ್ತಿದ್ದ ವೇಳೆಯಲ್ಲಿ ಆತನ ಮುಖದಿಂದ ಬಿದ್ದ ಬೆವರಿನ ಹನಿಗಳನ್ನು ನಾವು ಕಣ್ಣ ಮುಂದೆ ಚಿತ್ರಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು (ಲೂಕ 22:44).[56] ಆತನ ಆತ್ಮವು ತಂದೆಯ ಆತ್ಮದೊಂದಿಗೆ ಒಂದಾಗಿತ್ತು, ಆದಾಗ್ಯೂ "ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು" ಎಂಬುದನ್ನು ಸಹ ನಾವು ಅವಲೋಕನ ಮಾಡಬೇಕು (1 ಪೇತ್ರ 2:24). ಹಾಗೆ ಮಾಡುವ ಮೂಲಕ, ಬಹುಶಃ ನಮಗೆ "ಯಜ್ಞ" ಎಂಬ ಪದದ ಅರ್ಥದಲ್ಲಿರುವ ಹೃದಯಭಾಗವು ಏನೆಂಬುದರ ಕುರಿತು ಮತ್ತು ದೇವರ ಮರ್ಮದ ಕುರಿತು ಸಹ ಸ್ವಲ್ಪ ತಿಳುವಳಿಕೆ ಸಿಕ್ಕಬಹುದು. ಸ್ವಭಾವತಃ, ಯೇಸುವು ಪರಿಶುದ್ಧತೆಯಲ್ಲಿ ಪರಿಪೂರ್ಣನು, ತಾನು ಸ್ವಲ್ಪ ಸಮಯದಲ್ಲಿಯೇ ಯಾವ ಪಾಪವಾಗಿ ಮಾರ್ಪಡಲಿದ್ದನೋ ಆ ಪಾಪವನ್ನು ದ್ವೇಷಿಸಿದವನಾಗಿದ್ದನು (ಇಬ್ರಿಯ 1:9). ಅದೇ ವೇಳೆಯಲ್ಲಿ, ದೇವರೊಂದಿಗೆ ಪರಿಪೂರ್ಣವಾದ ಆತ್ಮೀಕ ಸಾಮರಸ್ಯದಲ್ಲಿದ್ದವನಾಗಿ, ಆತನು ದೇವರ ಚಿತ್ತವನ್ನು ಮಾಡಲು ನಿರ್ಧರಿಸಿದನು ಮತ್ತು ಹಾಗೆ ಮಾಡುವ ಮೂಲಕ ಆತನು ದೇಹಬಲವನ್ನು ಪಡೆದುಕೊಂಡನು (ಯೋಹಾನ 4:34).

ದೇವರು ಆತನಿಗೆ ಬೇರೆ ಏನೆಲ್ಲಾ ಮಾಡುವಂತೆ ಹೇಳಿದನೋ ಅದನ್ನೆಲ್ಲಾ ಆತನು ಮನಃಪೂರ್ವಕವಾಗಿ ಮಾಡಿದನು, ಮತ್ತು ಆತನು ನಿಜಕ್ಕೂ ಹಾಗೆ ಮಾಡುವದಕ್ಕೆ ಬಯಸಿದನು; ಆದರೆ ಪಾಪವಾಗಿ ಮಾರ್ಪಡುವದನ್ನು ಯೋಚಿಸುವಾಗ ಆತನ ಪರಿಶುದ್ಧತೆಯು ಹಿಮ್ಮೆಟ್ಟಿರಬಹುದು. ಆತನು ನರಾವತಾರವೆತ್ತುವ ಮುನ್ನವೇ ಜೀವದ ಪರಿಶುದ್ಧ ಪ್ರಭುವು, ಮರಣದ ಪ್ರಭು ಮತ್ತು ಸರ್ವಕಾಲಕ್ಕೂ ಅಸ್ತಿತ್ವದಲ್ಲಿದ್ದವರಲ್ಲಿಯೇ ಅತ್ಯಂಥ ಅಪರಿಶುದ್ಧ ಜೀವಿಯಾಗಿದ್ದ ಸೈತಾನನ ಮಂಡಲಕ್ಕೆ ಒಪ್ಪಿಸಲ್ಪಡಬೇಕಾಗಿರುತ್ತದೆ ಎಂಬುದನ್ನು ತಿಳಿದಿರಬೇಕಷ್ಟೆ. ಇಲ್ಲಿ ಪ್ರಾರ್ಥನೆಯಲ್ಲಿ ಹೋರಾಟವನ್ನು ಅನುಭವಿಸುವವನಾಗಿ, ನಿಶ್ಚಯವಾಗಿಯೂ ಇಲ್ಲಿಯೇ ನಮ್ಮ ಕರ್ತನು ವಿಧೇಯತೆಯನ್ನು ಕಲಿತುಕೊಂಡನು, ಆತನ ವ್ಯಕ್ತಿತ್ವದ ಆತ್ಮೀಕ ಪ್ರಕೃತಿಗೆ ಸಂಪೂರ್ಣ ತದ್ವಿರುದ್ಧವಾದಂಥ ಕಾರ್ಯವೊಂದನ್ನು ಮಾಡುವದಕ್ಕೆ ತಂದೆಯ ಚಿತ್ತವನ್ನು ಮಾಡಿ ಅದಕ್ಕೆ ಒಪ್ಪಿಸಿಕೊಂಡನು. ನಾವು ಅಂಥ ವಿಧೇಯತೆಯನ್ನು ಕಲಿತುಕೊಳ್ಳತಕ್ಕದ್ದು, ಪಾಪದ ಕಡೆಗೆ ಅಂಥ ಹಗೆತನ, ಅಂಥ

ಪ್ರೀತಿಪೂರ್ವಕವಾದ ಯಜ್ಞವನ್ನು ಕಲಿತುಕೊಳ್ಳಬೇಕು - ಹೀಗೆ ಆತನ ಪರಿಶುದ್ಧತೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಪಾಲುಗಾರರಾಗುವೆವು!

ಎಲ್ಲಾ ಮನುಷ್ಯರು "ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾ 3:23). ಈ ಗ್ರಹಿಕೆಯ ಮೇರೆಗೆ ಸಂಭವನೀಯವಾಗಿ, ಬಿದ್ದು ಹೋಗಿರುವ ಮನುಷ್ಯನು ತನ್ನ ವಿಮೋಚನಾತ್ಮಕ ಮರಣದ ಮೂಲಕವಾಗಿ ಯೇಸುವು ಕೊಡುವ ರಕ್ಷಣೆಯನ್ನು ಸ್ವೀಕರಿಸಿಕೊಳ್ಳುವದರ ಕಡೆಗೆ ಮೊದಲ ಹೆಜ್ಜೆಯನ್ನು ಇಡತಕ್ಕದ್ದು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಬರೆದನು, "ಸಮಸ್ತವು ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವದು ಆತನಿಗೆ ಯುಕ್ತವಾಗಿತ್ತು" (ಇಬ್ರಿಯ 2:10). ಯೇಸು ಗೆತ್ಸೇಮನೆಯಲ್ಲಿ ಅನುಭವಿಸಿದ ವೇದನೆಯು, ದೇವರ ಚಿತ್ತದಲ್ಲಿ, ತಾನು ಭೂಲೋಕಕ್ಕೆ ಕಳುಹಿಸಲ್ಪಟ್ಟ ಉದ್ದೇಶವನ್ನು ನೆರವೇರಿಸುವದಕ್ಕೆ ಇದ್ದ ಏಕೈಕ ದಾರಿಯಾಗಿತ್ತು (1 ತಿಮೊಥೆ 1:15). ವಿಮೋಚಕನಾದ ಆತನು, ನಮ್ಮ ಪಾಪಗಳಿಗೋಸ್ಕರ ಪೂರ್ಣ ಈಡು ಕೊಟ್ಟನು (1 ಪೇತ್ರ 1:17-21). ಆತನು ನಮ್ಮ ಪಾಪಗಳನ್ನು ಹೊತ್ತುಕೊಂಡ ದೇವರ ಕುರಿ ಮರಿಯಾಗಿದ್ದನು (ಯೋಹಾನ 1:29). ದೇವರು ಆತನನ್ನು "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು" (2 ಕೊರಿಂಥ 5:21). "ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಂಡನು" (2 ಕೊರಿಂಥ 5:19). ನಮ್ಮ ನೀತಿವಂತರೆಂಬ ನಿರ್ಣಯವು "ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು" (ರೋಮಾ 3:24).[57]

## "ಈಗಿನ ದುಷ್ಟಯುಗ" (1:4)

1:4ರಲ್ಲಿ ಕೇವಲ "ಈಗಿನ ದುಷ್ಟಯುಗ" ಎಂದು ಪ್ರಸ್ತಾಪಿಸಲ್ಪಡುವಿಕೆಯು "ಹಿಂದಿನ ಯುಗಗಳನ್ನು" ಮಾತ್ರವೇ ಅಲ್ಲ ಆದರೆ ಶಾಸ್ತ್ರವು ಕರೆಯುವ ಪ್ರಕಾರ, "ಮುಂದಿನ ಯುಗ" ಅಥವಾ "ಬರಲಿರುವ ಜಗತ್ತನ್ನು" ಸಹ ಸೂಚಿಸುತ್ತದೆ. ನಾವು ಹಾಡುವ ಪ್ರಿಯ ಸಭಾ ಸಂಕೀರ್ತನೆಗಳಲ್ಲೊಂದು ಹಾಡು ಹೀಗಿರುತ್ತದೆ, "ಓ ದೇವರೇ, ಗತ ಯುಗಗಳಲ್ಲಿ ನಮ್ಮ ಸಹಾಯಕನೇ, ಮುಂಬರುವ ವರ್ಷಗಳಲ್ಲಿ ನಮ್ಮ ನಿರೀಕ್ಷೆಯೇ."[58] ನಾವು ಈ ಹಾಡನ್ನು ನಮ್ಮ ವೈಯಕ್ತಿಕ ಅನುಭವಗಳನ್ನು, ಆತನು ಕ್ರಿಸ್ತನಲ್ಲಿ ನಮ್ಮೊಂದಿಗೆ ಸ್ಥಾಪಿಸಿರುವ ಒಡಂಬಡಿಕೆ ಮಾತ್ರವಲ್ಲದೆ ಮುಂದಿನ ಯುಗ ಮತ್ತು ನಾವು ಅದರೊಂದಿಗೆ ಸಿಕ್ಕುವ ಪ್ರಭಾವದ ನಿರೀಕ್ಷೆಯನ್ನು ಸಂಬಂಧಪಡಿಸಿ ಹಾಡುತ್ತೇವೆ. ಹೇಗೂ, ನಾನು ನಮ್ಮ ಕಾಲಕ್ಕೆ ಮುಂಚೆ ಮತ್ತು ಸಂಭಾವ್ಯವಾಗಿ ಅದಾದ ನಂತರದಲ್ಲಿ ತನ್ನ ಜನರೊಂದಿಗೆ ದೇವರು ಹೊಂದಿದ್ದ ಒಡಂಬಡಿಕೆಯನ್ನು ಸಹ ಅವಲೋಕಿಸಬಹುದು.

ಯಾವ ಸಂಶಯವೂ ಇಲ್ಲದೆ, ನಾವು ಒಂದು ದುಷ್ಟ ಯುಗದಲ್ಲಿ ಜೀವಿಸುತ್ತಿದ್ದೇವೆ. ಒಬ್ಬನು ದೈನಂದಿನ ಸುದ್ದಿಗಳನ್ನು, ಮನೋರಂಜನಾ ಉದ್ಯಮದಲ್ಲಿ ಒಳವ್ಯಾಪಿಸಿಕೊಂಡಿರುವ ನೈತಿಕ ಭ್ರಷ್ಟತೆ, ಮತ್ತು ಟಿವಿಯಲ್ಲಿ ಬರುವ ಸಿನಿಮಾಗಳಲ್ಲಿನ ಅಶ್ಲೀಲ ಹಾಗೂ ಹಿಂಸಾಚಾರದ ಕಾರ್ಯಕ್ರಮಗಳು ಮತ್ತು ಮಕ್ಕಳನ್ನು ಹಾಗೂ ಪ್ರಾಯಸ್ಥರನ್ನು ಕೇಡಿಸುವದಕ್ಕಾಗಿ ರೂಪಿಸಲ್ಪಟ್ಟಿರುವ ಅಂತರ್ಜಾಲ ಇವುಗಳನ್ನು ಕುರಿತು ಚಿಂತನೆ ಮಾಡುವ ಅಗತ್ಯವಿರುತ್ತದಷ್ಟೆ.

ಬಹುಶಃ ನಾವು ನಮ್ಮ ಸ್ವಜೀವಿತಗಳ ಕುರಿತು, ನಮ್ಮ ಹೃದಯಗಳ ನಿರಂತರವಾಗಿ

ಆವರಿಸಿಕೊಂಡಿರುವ ದುಷ್ಟ ಉದ್ದೇಶಗಳನ್ನು ಮತ್ತು ಅವುಗಳಲ್ಲಿ ಅನೇಕ ಸಂಗತಿಗಳನ್ನು ತೊಲಗಿಸಿಕೊಳ್ಳಲು ನಾವು ಹೇಗೆ ಪ್ರಯತ್ನಿಸಿ ವಿಫಲರಾಗಿರುತ್ತೇವೆಂಬುದನ್ನು ಸಹ ವಿಮರ್ಶೆ ಮಾಡಿಕೊಳ್ಳಬೇಕಾಗಿರುತ್ತದೆ. ಸೈತಾನನು ನಿಶ್ಚಯವಾಗಿಯೂ ಭೂಮಿಯ ಮೇಲೆ ಬದುಕಿದ್ದಾನೆ ಮತ್ತು ಸಕ್ರಿಯವಾಗಿದ್ದಾನೆ. ವಾಸ್ತವಾಂಶದಲ್ಲಿ, ನಾವು "ಇಲಹಲೋಕಾಧಿಪತಿ"[59]ಯನ್ನು ಎದುರುಗೊಳ್ಳುವ ಸಂಭವ ಎಷ್ಟಿರುತ್ತದೆಂಬುದನ್ನು ಗ್ರಹಿಸಿಕೊಂಡರೆ, ನಾವು ದೈವಿಕ ಕೃಪೆಯ ವಾಗ್ದಾನದಲ್ಲಿ ಕೇವಲ ಸಂತೋಷ ಪಡಬಲ್ಲೆವಷ್ಟೆ: "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು" (1 ಯೋಹಾನ 1:9). ದೇವರ ಮಕ್ಕಳಾದ ನಮಗೆ ಆತನ ಕೃಪೆಯು ಸದಾ ಲಭ್ಯವಿರುತ್ತದೆಂಬುದನ್ನು ತಿಳಿಯುವದು ಎಷ್ಟೊಂದು ಧೈರ್ಯ ಕೊಡುವಂಥದ್ದದ್ದು!

ಈ ಕೃಪೆಯು, ನಮಗಿರುವ ಪರಲೋಕದ ನಿರೀಕ್ಷೆಯ ಜೊತೆಗೂಡಿ, ನಮ್ಮನ್ನು ಮೇಲಕ್ಕೆತ್ತಿ, "ಈಗಿನ ದುಷ್ಟಯುಗದಲ್ಲಿ" ಸಹ ಜಯಭರಿತವಾಗಿ ಜೀವಿಸುವಂತೆ ನಮಗೆ ಬಲವನ್ನು ಕೊಡುತ್ತದೆ. ಈ ಜಯಭರಿತ ಜೀವನವು ನಾವು ಸಾಧಿಸುವ ಯಾವದೇ ಕಾರ್ಯದ ಫಲಿತವಾಗಿ ಸಿಕ್ಕುವಂಥದ್ದಲ್ಲ (ಎಫೆಸ 2:8, 9; ತೀತನಿಗೆ 3:4-7), ಆದರೆ ದೇವರು ಕ್ರಿಸ್ತನಲ್ಲಿ ನಮಗೋಸ್ಕರ ಮಾಡಿರುವಂಥ ಕಾರ್ಯದ ನಿಮಿತ್ತವೇ ಆಗಿದೆ. ನಾವು ಪ್ರತಿಕ್ಷೆಯ ಜೀವಿತವನ್ನು ನಡಿಸುವಂತೆ, "ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ" ಜೀವಿಸಬೇಕೆಂದು ಕರೆಯಲ್ಪಟ್ಟಿದ್ದೇವೆ (1 ಕೊರಿಂಥ 1:7; ನೋಡಿರಿ ಫಿಲಿಪ್ಪಿ 1:6; 1 ಥೆಸಲೋನಿಕ 5:23). ಪೇತ್ರನು ಬರೆದ ಪ್ರಕಾರ, "ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಹಾರೈಸುತ್ತಾ . . . ಉಳ್ಳವರಾಗಿರಬೇಕಲ್ಲಾ; ಆ ದಿನದಲ್ಲಿ ಆಕಾಶಮಂಡಲವು ಬೆಂಕಿ ಹತ್ತಿ ಲಯವಾಗಿ ಹೋಗುವದು, ಸೂರ್ಯಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವವು." ಅಷ್ಟುಮಾತ್ರವಲ್ಲದೆ "ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವದು" (2 ಪೇತ್ರ 3:12, 13).

ನಮ್ಮ ಕ್ರೈಸ್ತ ನಡೆಯಲ್ಲಿ ಒಂದು ಭವಿಷ್ಯದ ಲೋಕದ ಕಡೆಗೆ ಪರಿಯಾತ್ಮಕತೆಯನ್ನು ಬೆಳೆಸಿಕೊಳ್ಳುವದು ಅತ್ಯಾವಶ್ಯಕವಾಗಿರುತ್ತದೆ. ಅನೇಕ ಆಕರ್ಷಣೆಗಳನ್ನು ಒಳಗೊಂಡಿರುವ ಈ ಲೋಕವು ಉರಿದು ನಾಶವಾಗುವದಕ್ಕೆ ನೇಮಿಸಲ್ಪಟ್ಟಿದೆ ಎಂದು ನಾವು ನಂಬುವದಾದರೆ, ಇದು ಯಾವದೇ ಅಧಿಕವಾದ ಹೂಡಿಕೆಗೆ ಯೋಗ್ಯವಾದದ್ದಲ್ಲವೆಂದು ಪರಿಗಣಿಸುತ್ತೇವೆ. ವ್ಯತಿರೇಕವಾಗಿ, "ನಮ್ಮನ್ನು ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆಯನ್ನು ಎದುರುನೋಡುವವರನ್ನಾಗಿ ಮಾಡಿದನು. ಆ ಬಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವದು" (1 ಪೇತ್ರ 1:4) ಎಂಬುದು ಒಂದು ಅತ್ಯದ್ಭುತವಾದ ಹೂಡಿಕೆಯೆಂದು ಅನ್ನಿಸುತ್ತದೆ, ಏನೇ ತ್ಯಾಗವನ್ನು ಮಾಡಬೇಕಾದರೂ ಸರಿಯೇ. ಪರಲೋಕದಲ್ಲಿ ಒಂದು ನಿವಾಸವನ್ನು ಪಡೆಯಬೇಕೆಂಬುದನ್ನೇ ನಮ್ಮ ಲಕ್ಷ್ಯವನ್ನಾಗಿ ಮಾಡಿಕೊಳ್ಳೋಣ.

## "ದೇವರಿಗೆ ಯುಗಯುಗಾಂತರಗಳಲ್ಲಿಯೂ ಸ್ತೋತ್ರ" (1:5)

ತಂದೆಯಾದ ದೇವರ ವಿಯಷವಾಗಿ, 1:5ರಲ್ಲಿ ಪೌಲನು ಹೀಗೆ ಬರೆದನು, "ದೇವರಿಗೆ ಯುಗಯುಗಾಂತರಗಳಲ್ಲಿಯೂ ಸ್ತೋತ್ರ." ಯಾವ ಮನುಷ್ಯ ಮಾತ್ರದವನು ಕ್ರಿಸ್ತನ ಹಾಗೂ ದೇವರ ರಾಜ್ಯದಲ್ಲಿ ತನಗೋಸ್ಕರ ಮತ್ತು ತನ್ನ ಸೇವೆಗಾಗಿ ಮಹಿಮೆಯನ್ನು ಹೊಂದಿಕೊಳ್ಳಲು ಧೈರ್ಯಮಾಡುವನು? ಯಾರೂ ಯೋಗ್ಯರಲ್ಲ, ಯಾಕೆಂದರೆ "ಎಲ್ಲರೂ ಪಾಪ ಮಾಡಿದ್ದಾರೆ"

(ರೋಮಾ 3:23). ಕ್ರಿಸ್ತನ ಮೂಲಕವಾಗಿ ತೋರಿ ಬಂದ ದೇವರ ಕೃಪೆಯಿಂದ ಮಾತ್ರವೇ ಮನುಷ್ಯರು ನೀತಿವಂತರಾಗಿ ಮಾಡಲ್ಪಡಬಲ್ಲರು (ರೋಮಾ 3:24-26).

ಪ್ರಕಟನೆ ಪುಸ್ತಕವು ದೇವರ ಮತ್ತು ಕ್ರಿಸ್ತನನ್ನು ಎಲ್ಲಾ ಪ್ರಭಾವಕ್ಕೆ ಯೋಗ್ಯವೆಂದು ಚಿತ್ರಿಸುತ್ತದೆ. 4ನೇ ಅಧ್ಯಾಯದಲ್ಲಿ ತಂದೆಯಾದ ದೇವರು ಘನಗಂಭೀರವಾಗಿ ಪರಲೋಕದಲ್ಲಿ ಸಿಂಹಾನದಲ್ಲಿ ಆಸೀನನಾಗಿರುವನೆಂದು ಬಣ್ಣಿಸಲ್ಪಟ್ಟಿರುತ್ತಾನೆ. ಸಿಂಹಾಸನದ ಸುತ್ತಲು ಇದ್ದವರು ಆತನನ್ನು ಸ್ತುತಿಸುತ್ತಾ, ಹೀಗೆ ಹೇಳುತ್ತಿದ್ದರು, “ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ; ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು” (ಪ್ರಕಟನೆ 4:11).

ಪ್ರಕಟನೆ 5ರಲ್ಲಿ, ಯೇಸುವನ್ನು ಸಹ ಎಲ್ಲಾ ಪ್ರಭಾವಕ್ಕೆ ಯೋಗ್ಯನೆಂದು ಸ್ತುತಿಸಲಾಗಿರುತ್ತದೆ. ದೇವರ ರಹಸ್ಯಗಳನ್ನೊಳಗೊಂಡ ಪುಸ್ತಕದ ಏಳು ಮುದ್ರೆಗಳನ್ನು ಒಡೆಯುವ ಮೂಲಕ ಅದನ್ನು ತೆರೆಯುವದಕ್ಕೆ ಯಾರು ಯೋಗ್ಯರು ಎಂಬುದಾಗಿ ಪರಲೋಕದ ಜೀವಿಗಳ ಮಧ್ಯದಲ್ಲಿ ಒಂದು ಪ್ರಶ್ನೆಯು ಉದ್ಭವವಾಗುತ್ತದೆ. ಒಬ್ಬನೇ ಒಬ್ಬನು ಮಾತ್ರವೇ ಸಿಕ್ಕುತ್ತಾನೆ, ಯಾರೆಂದರೆ, “ಕುರಿ ಕೊಯ್ಯಲ್ಪಟ್ಟದ್ದಾಗಿ” ಕಂಡವನು (ಪ್ರಕಟನೆ 5:6). ಆ ಹಂತದಲ್ಲಿ, ಪರಲೋಕದ ಗಾನವೃಂದವು ಒಂದು ಹೊಸ ಹಾಡನ್ನು ಹಾಡಲಾರಂಭಿಸುತ್ತದೆ,

> ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವದಕ್ಕೆ ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ (ಪ್ರಕಟನೆ 5:9).

“ಕುರಿ”ಯು ಯೇಸು ಕ್ರಿಸ್ತನೇ ಆಗಿದ್ದು, ಆತನನ್ನು ಕುರಿತು ದೇವದೂತರು ಹಾಗೂ ಇತರ ಪರಲೋಕ ಜೀವಿಗಳ ಬೃಹತ್ ಸಮೂಹವು ಈ ಕೂಗು ಹಾಕುತ್ತಾರೆ:

> ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ ಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು (ಪ್ರಕಟನೆ 5:12).

ಈ ಹಂತದಲ್ಲಿ, ತಂದೆ ಮತ್ತು ಮಗ ಇಬ್ಬರೂ ಘನಪಡಿಸಲ್ಪಡುತ್ತಿದ್ದಾರೆ:

> ಇದಲ್ಲದೆ ಆಕಾಶದಲ್ಲಿಯೂ ಭೂಮಿಯ ಮೇಲೆಯೂ ಭೂಮಿಯ ಕೆಳಗೆಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶಸಮುದ್ರಗಳೊಳಗೆ ಇರುವದೆಲ್ಲವೂ -
>
> ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ
>
> ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ
>
> ಎಂದು ಹೇಳುವದನ್ನು ಕೇಳಿದೆನು. ಆಗ ನಾಲ್ಕು ಜೀವಿಗಳು ಆಮೆನ್ ಅಂದವು; ಮತ್ತು ಹಿರಿಯರು ಅಡ್ಡಬಿದ್ದು ನಮಸ್ಕಾರ ಮಾಡಿದರು (ಪ್ರಕಟನೆ 5:13, 14).

ನಿಶ್ಚಯವಾಗಿಯೂ, ಯೋಹಾನನು ಕಂಡ ದರ್ಶನವನ್ನು ನಾವು ನೋಡಲು ಸಾಧ್ಯವಿದ್ದರೆ, ಸದಾಕಾಲಕ್ಕೂ ನಮ್ಮ ಅಮೂಲ್ಯಕರ್ತನಾದ ಯೇಸು ಕ್ರಿಸ್ತನಿಗೆ ಸೇರಿದ ಮಹಿಮೆಯಿಂದ ನಮ್ಮನ್ನು ಘನಪಡಿಸಿಕೊಳ್ಳಬೇಕೆಂಬ ಯಾವದೇ ಪ್ರವೃತ್ತಿಯನ್ನು ಅದು ಸಂಪೂರ್ಣ ನಾಶಗೊಳಿಸುವದು. ಅಂತೂ, ನಾವು ಆತನ ಮಹಿಮೆಯಲ್ಲಿ ಪಾಲುಗಾರರಬೇಕೆಂಬುದಕ್ಕಾಗಿಯೇ ಆತನು ನಮಗೋಸ್ಕರ ತನ್ನ ಪ್ರಾಣವನ್ನು

ಅರ್ಪಿಸಿಕೊಂಡನು. ಪೌಲನು ತನ್ನ ಗರ್ವಭರಿತ ಕೊರಿಂಥದ ಸಹೋದರರಿಗೆ ಬರೆಯುವ ವೇಳೆ, ಆತನು ಪ್ರವಾದಿಯಾದ ಯೆರೆಮೀಯನ ಪುಸ್ತಕದಿಂದ ಉಲ್ಲೇಖಿಸುತ್ತಾನೆ, "ಹೆಚ್ಚಳಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ" (1 ಕೊರಿಂಥ 1:31; ನೋಡಿರಿ ಯೆರೆಮೀಯ 9:24). ದೇವರ ಎಲ್ಲಾ ಮಕ್ಕಳು ಗಲಾತ್ಯ 1:5ರಲ್ಲಿ ಪೌಲನು ಮಾಡುವ ಕ್ಲುಪ್ತ ಪ್ರಾರ್ಥನೆಯೊಂದಿಗೆ ಘನಗಂಭೀರವಾದ ಸಹಮತದಲ್ಲಿ, ಒಂದು ದೀನವಾದ ಹಾಗೂ ಭಕ್ತಿಯುಳ್ಳ "ಆಮೆನ್" ಎಂದು ಹೇಳುವವರಾಗು ಜೊತೆಗೂಡಿಕೊಳ್ಳಲಿ. ಖಂಡಿತವಾಗಿಯೂ ಹಾಗೆಯೇ ಆಗಲಿ!

### "ಆಶ್ಚರ್ಯಪಡುತ್ತೇನೆ" (1:6)

ನಾವು ಕೆಲವು ಸಾರಿ ಒಂದು ಸಂಕೀರ್ತನೆಯನ್ನು ಹಾಡುವವರಾಗಿದ್ದು ಅದು ಹೀಗಿರುತ್ತದೆ, "ನಾನು ನಜರೇತಿನ ಯೇಸುವಿನ ಸಮ್ಮುಖದಲ್ಲಿ ಆಶ್ಚರ್ಯಪಟ್ಟು ನಿಲ್ಲುತ್ತೇನೆ."[60] ಯಾವನಾದರೂ ಈ ದೇವರು-ಮನುಷ್ಯನಾದವನನ್ನು ತಿಳಿದುಕೊಳ್ಳುವವರಾದರೆ ಆಶ್ಚರ್ಯಗೊಳ್ಳುವರು. ಯೇಸುವು ಜಗದುತ್ಪತ್ತಿಗೆ ಮುನ್ನ ಇದ್ದ ದೇವರ ಮಹಿಮೆಯಲ್ಲಿ ಪಾಲುಗಾರನಾಗಿರುತ್ತಾನೆ, ಮತ್ತು ಆತನ ಮುಖಾಂತರವೇ ಜಗತ್ತುಗಳು ಸೃಷ್ಟಿಸಲ್ಪಟ್ಟವು. ಆತನು ಪವಿತ್ರಾತ್ಮನನ್ನು ಮತ್ತು ಭಕ್ತಿಯುಳ್ಳ ಒಬ್ಬ ಯೆಹೂದಿ ಕನ್ಯೆಯನ್ನು ಸಾಧನವಾಗಿ ಬಳಸಿಕೊಳ್ಳುವ ಮೂಲಕ ಶರೀರಧಾರಿಯಾಗಿ ಮಾಡಲ್ಪಟ್ಟನು. ಇದು ಮೆಡಿಟೆರ್ರೇನಿಯನ್ ಸಮುದ್ರದ ಪೂರ್ವಾತ್ಯದ ದಡದಲ್ಲಿರುವ ಒಂದು ಅಷ್ಟೇನೂ ಮಹತ್ವಪೂರ್ಣವಾಗಿಲ್ಲದ ದೇಶವೊಂದರಲ್ಲಿ, ದೀನ ಪರಿಸ್ಥಿತಿಗಳಲ್ಲಿ ಸಂಭವಿಸಿತ್ತು. ಯೇಸುವು ತನ್ನ ತಂದೆಯ ಬಡಗಿಯ ಅಂಗಡಿಯಲ್ಲಿ ಕೆಲಸಗಾರನಾಗಿ ಬೆಳೆದನು. ಆತನು ಆಗ ಆತನು ಅಸ್ತಿತ್ವದಲ್ಲಿದ್ದ ಇತರೆ ವಿಶ್ವ ಧರ್ಮಗಳಿಗಿಂತಲೂ ಉನ್ನತವಾದದ್ದೆಂದು ಹೋಲಿಕೆ ಮಾಡುವ ವಿಶ್ವದಾದ್ಯಂಥ ಇದ್ದ ಧರ್ಮವಾದಿಗಳು ಒಪ್ಪಿಕೊಂಡಿದ್ದ ನೀತಿ ಹಾಗೂ ಜ್ಞಾನವೊಂದನ್ನು ಬೋಧಿಸುವದರಲ್ಲಿ ನಿರತನಾಗಿದ್ದನು. ಆತನು ತಾನು ಬೋಧಿಸಿದ ಪ್ರಕಾರವೇ ಸದಾ ಸಾಮಂಜಸ್ಯದಿಂದ ಬದುಕುವ ಮೂಲಕ ತನ್ನ ಬೋಧನೆಗೆ ವಿಶ್ವಾಸರ್ಹತೆಯನ್ನು ಒದಗಿಸಿದನು; ಇದು ಆತನ ಬಗ್ಗೆ ಅತ್ಯುತ್ತಮ ಪರಿಚಯ ಹೊಂದಿದ್ದವರ ಮೇಲೆ ಅಳಿಸಲಾಗದ ಛಾಪು ಮೂಡಿಸಿತ್ತು. ಅವರು ಆತನ ವಿಷಯವಾಗಿ ಆತನು ಮರಣಿಸಿದನು ಮತ್ತು ನಿಜಕ್ಕೂ ಜೀವಿತನಾಗಿ ಎದ್ದನು ಎಂಬುದಾಗಿ ಸಾಕ್ಷಿ ಹೇಳಿದರು. ಈ ಸಾಕ್ಷಿಯು ಮನುಷ್ಯರ ಹೃದಯಗಳನ್ನು ಮತ್ತು ಮನಸ್ಸುಗಳನ್ನು ನಿರಂತರವಾಗಿ ಹಿಡಿದಿಟ್ಟುಕೊಳ್ಳುತ್ತಾ ಬಂದಿದೆ. ಅದರ ಶಕ್ತಿಯು ವಿಶ್ವದಾತ್ಯಂಥ ಇರುವ ಜನರನ್ನು ಅದರ ನಂಬಿಕೆಯ ವಲಯದೊಳಗೆ ಸೆಳೆದುಕೊಳ್ಳುತ್ತದೆ ಮತ್ತು ಅವರ ಜೀವಿತಗಳನ್ನು ರೂಪಾಂತರಗೊಳಿಸುತ್ತದೆ.

ಪೌಲನು ನಜರೇತಿನ ಯೇಸುವನ್ನು ಬಲ್ಲವನಾಗಿದ್ದನು. ಆತನನ್ನು ಕಂಡಿದ್ದನು ಮತ್ತು ಆತನ ಸ್ವರವನ್ನು ಕೇಳಿಸಿಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 9:4-6; 22:7, 8; 1 ಕೊರಿಂಥ 9:1), ಆತನು ಯೇಸುವನ್ನು ದಮಸ್ಕದ ದಾರಿಯಲ್ಲಿ ಉಂಟಾದ ಮಹಿಮೆಕರವಾದ ದರ್ಶನದಲ್ಲಿ ಮಾತ್ರವೇ ಅಲ್ಲ, ಆದರೆ ಅನಂತರದ ಸಂದರ್ಭಗಳಲ್ಲಿ ಸಹ ಕಂಡಿದ್ದನು (ಅಪೊಸ್ತಲರ ಕೃತ್ಯಗಳು 18:9, 10). ಆತನಿಗಾದರೋ, ತಾನು ನಡೆದ ನೆಲ ಅಥವಾ ರೋಮನ್ ಸಾಮ್ರಾಜ್ಯದ ರಸ್ತೆಗಳುದ್ದಕ್ಕೂ ಎಡೆಬಿಡದೆ ಪ್ರಯಾಣಗಳನ್ನು ಮಾಡುತ್ತಿದ್ದ ಮಧ್ಯದಲ್ಲಿ ಎದುರಾಗುತ್ತಿದ್ದ ಸೆರೆವಾಸಗಳ ಗೋಡೆಗಳಿಗಿಂತಲೂ ಯೇಸುವು ಬಹಳ ನಿಜವಾಗಿದ್ದನು ಮತ್ತು ವಾಸ್ತವಿಕವಾಗಿದ್ದನು. ಈ ಗೋಡೆಗಳು ಸಹ ಆತನು ಸಾರಿದ ಸುವಾರ್ತೆಯ ಪ್ರಗತಿಯನ್ನು ತಡೆಯುವದಕ್ಕೆ ಶಕ್ತವಾಗಿರಲಿಲ್ಲ (2 ತಿಮೊಥೆ 2:9).

ಪೌಲನು ಯೇಸು ಕ್ರಿಸ್ತನನ್ನು ಕಂಡು ಆಶ್ಚರ್ಯದಿಂದ ನಿಂತುಕೊಂಡಿದ್ದರೆ, ಆತನು ಗಲಾತ್ಯದಲ್ಲಿದ್ದ ಕ್ರೈಸ್ತರ ವಿಷಯದಲ್ಲಿ ಸಹ ಆಶ್ಚರ್ಯಗೊಂಡಿದ್ದನು (1:6). ಹೇಗೂ, ಈ ಎರಡನೆಯ ಆಶ್ಚರ್ಯವು ನಕಾರಾತ್ಮಕ ಕಾರಣಗಳಿಗಾಗಿ ಆಗಿತ್ತು. (1) ಅವರು ಕ್ರಿಸ್ತನು ಅದ್ಭುತವಾದ ಕೃಪೆಯನ್ನು ಕೆಡಿಸಿದ್ದರು. (2) ಅವರು ಬೇಗನೆ ಬಿಟ್ಟು ಹೋಗಿದ್ದರು. (3) ಅವರು ಧರ್ಮಶಾಸ್ತ್ರ-ಕೈಕೊಂಡು ನಡೆಯುವ ಶೂನ್ಯ ಸುವಾರ್ತೆಯನ್ನು ಹಿಂದೆ ಹೋಗುವದಕ್ಕಾಗಿ ಬಿಟ್ಟು ಹೋಗಿದ್ದರು. ಅಪೊಸ್ತಲನ ಮಾತುಗಳು ಈ ಲೋಕವು ಕೊಡಬಹುದಾದ ಯಾವದಕ್ಕೋಸ್ಕರವೂ ಕ್ರಿಸ್ತನ ಅಮೂಲ್ಯ ನಿಕ್ಷೇಪವನ್ನು ವಿನಿಮಯ ಮಾಡಿಕೊಳ್ಳಬಾರದೆಂದು ಕ್ರೈಸ್ತರನ್ನು ಎಚ್ಚರಿಸುತ್ತಾನೆ.

## ಗಲಾತ್ಯದವರಿಗೆ ಬರೆದ ಪತ್ರಿಕೆಯನ್ನು ಅನ್ವಯಿಸಿಕೊಳ್ಳುವದರಲ್ಲಿ ಎಚ್ಚರಿಕೆ (1:6)

ನಾವು ಗಲಾತ್ಯದವರಿಗೆ ಬರೆದ ಪತ್ರಿಕೆಯನ್ನು ಪೌಲನ "ಕ್ರೈಸ್ತ ಸ್ವಾತಂತ್ರ್ಯದ ಶಾಸನ ಪತ್ರ"[61] ಎಂದು ಖಂಡಿತವಾಗಿಯೂ ಹೇಳಬಹುದಾದರೂ, ನಾವು ದೇವರ ಕೇಳುವ ವಿಧೇಯತೆಯ ಕಡೆಗೆ ಅಸಡ್ಡೆಯ ಮನೋಭಾವವನ್ನು ಉತ್ತೇಜಿಸುವದಕ್ಕೆ ಈ ಬೋಧನೆಯನ್ನು ಬಳಸಿಕೊಳ್ಳಕೂಡದು. ಅಷ್ಟುಮಾತ್ರವಲ್ಲದೆ, ನಮ್ಮ ಸಹೋದರರ ಮೇಲೆ ನೇಮನಿಷ್ಠೆಯವರು ಅಥವಾ ಪ್ರೀತಿಯಿಲ್ಲದವರೆಂದು ಆರೋಪಿಸುವದಕ್ಕೆ ಅದರ ಉಪದೇಶವನ್ನು ಬಳಸಬಾರದು. ನಾವು ಭಾಷ್ಯವನ್ನು (ಶಾಸ್ತ್ರಗಳಿಂದ ನಿಜವಾದ ಅರ್ಥವನ್ನು ಕಂಡುಕೊಳ್ಳುವ ಪ್ರಕ್ರಿಯೆ) ಸ್ವಭಾಷ್ಯವಾಗಿ (ಶಾಸ್ತ್ರಗಳೊಳಗೆ ನಿಮ್ಮ ಸ್ವಂತ ಅಭಿಪ್ರಾಯಗಳನ್ನು ಹಾಕುವದು) ಮಾರ್ಪಡಲು ಎಂದಿಗೂ ಅವಕಾಶ ಕೊಡಬಾರದು.

## ದೇವರನ್ನು ಮೆಚ್ಚಿಸುವಿರೋ ಅಥವಾ ಮನುಷ್ಯರನ್ನೋ? (1:10)

1:10ರಲ್ಲಿ ಪೌಲನು ಹೀಗೆ ಹೇಳಿದನು, "ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ." ಈ ಮಾತುಗಳು, ಹೆಚ್ಚುಕಡಿಮೆ ಎರಡು ಸಾವಿರ ವರ್ಷಗಳ ಹಿಂದೆ ಬರೆಲ್ಪಟ್ಟಿದ್ದರೂ, ಇಂದು ಸುವಾರ್ತೆಯನ್ನು ಸಾರುವ ಪ್ರತಿಯೊಬ್ಬರ ಗಮನವನ್ನು ಸೆಳೆಯತಕ್ಕದ್ದು; ಅವುಗಳು ಆ ಕಾಲದಲ್ಲಿ ಎಷ್ಟು ಸತ್ಯವಾಗಿದ್ದವೋ ಇಂದು ಸಹ ಅಷ್ಟೇ ಸತ್ಯವಾಗಿವೆ. ಸುವಾರ್ತೆಯ ಯಾವದೇ ಬೋಧಕ ಅಥವಾ ಉಪದೇಶಕನು ಶ್ರೋತೃಗಳು ಕೇಳಿಸಿಕೊಳ್ಳಲಿಚ್ಛೆಸುವದನ್ನು ಹೇಳುವ ಉದ್ದೇಶವಿಟ್ಟುಕೊಂಡಿರುವದಾದರೆ ದೇವರ ಚಿತ್ತವನ್ನು ಹುಡುಕುವನಲ್ಲ ಆದರೆ ಸ್ವಂತ ಚಿತ್ತವನ್ನೇ ಹುಡುಕುವವನಾಗಿದ್ದಾನೆ - ಮತ್ತು ಆತನಿಗೆ ನಿಶ್ಚಯವಾಗಿಯೂ ಲೆಕ್ಕವನ್ನು ಕೇಳಲಾಗುವದು. ಮೊದಲನೆಯದಾಗಿ, ಆತನು ದೈವಿಕ ಸೇವೆಯ ವೇಷ ಹಾಕಿಕೊಂಡು ಸ್ವಾರ್ಥ ಸೇವೆಯ ಭ್ರಷ್ಟ ಉದ್ದೇಶಕ್ಕಾಗಿ ಉತ್ತರಿಸಬೇಕು. ಎರಡನೆಯದಾಗಿ, ಆತನು ಸಂದೇಶದಿಂದ ಯಾರಿಗೂ ಬೇಸರವುಂಟಾಗಬಾರದು ಮತ್ತು ಜನಪ್ರಿಯತೆಗೋಸ್ಕರ ಸಂದೇಶವನ್ನು ಮೃದುಗೊಳಿಸುವ ಮೂಲಕ ಅದನ್ನು ಕೇಡಿಸಿರುವನೋ ಎಂಬುದಕ್ಕೆ ಉತ್ತರಿಸುವನು (2 ತಿಮೊಥೆ 4:3, 4). ನಾವು ದೇವರನ್ನು ಮತ್ತು ಐಶ್ವರ್ಯ ಎರಡನ್ನೂ ಸೇವಿಸಲಾರಿರಿ (ಮತ್ತಾಯ 6:24), ಅದೇ ರೀತಿಯಲ್ಲಿ ನಾವು ಏಕಕಾಲದಲ್ಲಿ ಸ್ವಾರ್ಥದ ಹಾಗೂ ಕರ್ತನಾದ ಯೇಸು ಕ್ರಿಸ್ತನ ಸೇವೆಯನ್ನು ಮಾಡಲಿ ಸಾಧ್ಯವಿಲ್ಲ. ನಾವು ಕ್ರಿಸ್ತನ "ದಾಸರು" ಆಗಿರುವದಾದರೆ, ನಾವು ಆತನಿಗೆ ನಿಷ್ಠೆ ತೋರಿಸುವ ಕಡ್ಡಾಯದಲ್ಲಿದ್ದೇವೆ ಹಾಗೂ ನಾವು ಆತನಿಗೆ ಹೊಂದಿರುವ ಭಕ್ತಿಯನ್ನು ರಾಜಿ ಮಾಡಿಕೊಳ್ಳುವಂತೆ ನಡಿಸುವ ಯಾವದನ್ನಾಗಲಿ ತ್ಯಜಿಸಿ ಬಿಡುವೆವು.

## ದೇವರಿಂದ ಬಂದ ಪ್ರಕಟನೆ (1:12)

"ಪ್ರಕಟನೆ" ಎಂದರೆ ಅದರಲ್ಲಿ ದೇವರು ಒಬ್ಬ ಮಾನವ ಮಧ್ಯವರ್ತಿಗೆ ಒಂದು ಸಂದೇಶ ಕೊಡುವದು (ಅಥವಾ ಕೆಲವು ಸಾರಿ ಒಂದು ದರ್ಶನವನ್ನು) ಕೊಡುವದು ಸೇರಿರುತ್ತದೆ. ಮಾನವ ಮಧ್ಯವರ್ತಿಯು ದೇವರಿಂದ ಬಂದ ಸಂದೇಶವನ್ನು ತಿಳಿಯಪಡಿಸಲು ತನ್ನ ಬಾಯನ್ನು ತೆರೆಯುವ ವೇಳೆ, ಆತನು ಒಬ್ಬ "ಪ್ರವಾದಿ," ದೇವರ ವಕ್ತಾರನು ಎಂದು ಕರೆಯಲ್ಪಡುವನು, ಮತ್ತು ಆತನು ಮಾತಾಡುವ ಸಂಗತಿಯನ್ನು "ಪ್ರವಾದನೆ" ಎಂದು ಕರೆಯಲ್ಪಡುವದು.[62] ಪ್ರವಾದನೆಯೆಂದರೆ ಯಾವಾಗಲೂ ಭವಿಷ್ಯದ ಕುರಿತಾಗಿ ಪ್ರಕಟನೆಗಳನ್ನು ಒಳಗೊಂಡಿರುವದಿಲ್ಲ. ಅದು ತಿಳಯದ ಗತಕಾಲದ ಕುರಿತ ಪ್ರೇರಿತ ಮಾತುಗಳಾಗಿರಬಹುದು. ಉದಾಹರಣೆಗೆ, ದೇವರು ಮೋಶೆಗೆ ಸೃಷ್ಟಿಯ ಕುರಿತು ಕೆಲವೊಂದು ವಾಸ್ತವಾಂಶಗಳನ್ನು ಪ್ರಕಟಗೊಳಿಸಿದ್ದು ಅವುಗಳನ್ನು ಆತನು ಆದಿಕಾಂಡದಲ್ಲಿ ಬರೆದನು. ಪ್ರವಾದನೆಯು ವರ್ತಮಾನದಲ್ಲಿ ತಿಳಿಯದ ಅಥವಾ ತಿಳಿಯಲಾಗದ ಸಂಗತಿಗೆ ಸಹ ಸಂಬಂಧಪಟ್ಟಿರುತ್ತದೆ. ಇದು ಯೇಸುವು ಸಮಾರ್ಯದ ಸ್ತ್ರೀಯನ್ನು ಭೇಟಿಯಾದದ್ದರಲ್ಲಿ ದೃಷ್ಟಾಂತಪಡಿಸಲ್ಪಟ್ಟಿದೆ. ಆತನು ಆ ಸ್ತ್ರೀಯ ಗತಕಾಲದ ಮಲಿನ ಜೀವಿತದ ಚರಿತ್ರೆಯ ವಿಷಯದಲ್ಲಿ ಪ್ರಕಟಗೊಳಿಸಿದ್ದು ಮಾತ್ರವಲ್ಲ ಆದರೆ ಆಕೆಯ ವರ್ತಮಾನ ಜೀವಿತದ ವೈಶಿಷ್ಟವಾಗಿದ್ದ ಪಾಪವನ್ನು ಕುರಿತು ಸಹ ಪ್ರಕಟಿಸಿದನು. ಆಕೆಯ ನೋವುಭರಿತ ಪ್ರತಿಕ್ರಿಯೆಯು ಹೀಗಿತ್ತು, "ಅಯ್ಯಾ, ನೀನು ಪ್ರವಾದಿಯೆಂದು ನನಗೆ ಕಾಣುತ್ತದೆ" (ಯೋಹಾನ 4:16-19). "ಪ್ರವಾದನೆ" ಎಂಬುದಕ್ಕೆ ಇರುವ ಗ್ರೀಕ್ ಪದದ (προφητεύω, *prophēteuō*) ಅರ್ಥವು "ಮುಂತಿಳಿಸು" ಎಂದಾಗಿರುವದಿಲ್ಲ, ಆದರೆ "ಪರವಾಗಿ ಮಾತಾಡು" ಎಂದಾಗಿರುತ್ತದೆ. ಒಬ್ಬ ಪ್ರವಾದಿಯು ಕೇವಲ ದೇವರ ಅಥವಾ ದೇವರ ಪರವಾಗಿ ವಕ್ತಾರನಾಗಿರುತ್ತಾನಷ್ಟೆ.

## ಸಂಪ್ರದಾಯ (1:14)

"ಸಂಪ್ರದಾಯ" (παράδοσις, *paradosis*) ಎಂಬ ಪದವು ಅವಶ್ಯಕವಾಗಿ ಕೆಟ್ಟದ್ದೊಂದನ್ನು ಸೂಚಿಸುವದಿಲ್ಲ. ಅದರ ಅರ್ಥವು "ಹಿಂದಿನವರಿಂದ ಕಲಿಸಲ್ಪಟ್ಟದ್ದು" ಎಂದಾಗಿರುತ್ತದಷ್ಟೆ. ಸಂಪ್ರದಾಯವು ಯಾವ ಮೂಲದಿಂದ ಬಂದಿರುತ್ತದೆಂಬುದೇ ಅದರ ಮೌಲ್ಯವನ್ನು ನಿರ್ಧರಿಸುತ್ತದೆ.

ಪೌಲನು ಥೆಸಲೋನಿಕದವರಿಗೆ "ಸಹೋದರರೇ, ದೃಢವಾಗಿ ನಿಲ್ಲಿರಿ. ನಾವು ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಂಡಿರ್ರಿ" ಎಂದು ಬುದ್ಧಿವಾದ ಹೇಳುವ ವೇಳೆ ಇದೇ ಪದವನ್ನು ಬಳಕೆ ಮಾಡುತ್ತಾನೆ (2 ಥೆಸಲೋನಿಕ 2:15; ನೋಡಿರಿ 3:6). ಅಪೊಸ್ತಲ ಹಾಗೂ ಆತನ ಜೊತೆಗೆಲಸದವರು ಈ ಯುವ ಕ್ರೈಸ್ತರಿಗೆ ಅವರನ್ನು ನಂಬಿಕೆಯಲ್ಲಿ ದೃಢಪಡಿಸುವದಕ್ಕೆ *ದೈವಿಕ* ಸಂಪ್ರದಾಯವನ್ನು ಕಲಿಸಿ ಕೊಟ್ಟಿದ್ದರು. ಅದೇ ರೀತಿಯಲ್ಲಿಯೇ, ಪೌಲನು ಕೊರಿಂಥದವರಿಗೆ ಹೀಗೆ ಬರೆದನು, "ನೀವು ಎಲ್ಲಾದರಲ್ಲಿಯೂ ನನ್ನನ್ನು ಜ್ಞಾಪಕಮಾಡಿಕೊಂಡು ನಾನು ನಿಮಗೆ ತಿಳಿಸಿಕೊಟ್ಟ ಕಟ್ಟಳೆಗಳನ್ನು ಅನುಸರಿಸಿ ನಡಿಯುತ್ತೀರೆಂದು ನಿಮ್ಮನ್ನು ಹೊಗಳುತ್ತೇನೆ" (1 ಕೊರಿಂಥ 11:2).

ಹೇಗೂ, *ಮನುಷ್ಯರ* ಸಂಪ್ರದಾಯಗಳು ದೇವರ ವಾಕ್ಯವೆಂಬಂತೆ ವೇಷ ಹಾಕಿಕೊಳ್ಳುವಾಗ ಮತ್ತು ಅದಕ್ಕೆ ಹೆಚ್ಚಿನದನ್ನು ಕೂಡಿಸುವಾಗ ಪಾಪಭರಿತವಾಗಬಲ್ಲವು (ಮತ್ತಾಯ 15:1-9). ಇವುಗಳು ದೀರ್ಘಕಾಲದಿಂದ ನಂಬಿರುವಂಥ ಕಲ್ಪನೆಗಳ ಮೇಲೆ ಆಧಾರವಾಗಿರುವ ಹಳೇ ಮಾನವ ಸಂಪ್ರದಾಯಗಳಾಗಿರಬಹುದು ಅಥವಾ ಹೊಸತಾದ ದೈವಶಾಸ್ತ್ರಗಳನ್ನು ಆಧರಿಸಿರುವ ನೂತನ ಸಂಪ್ರಯಾಗಗಳು ಆಗಿರಬಹುದು.

ಎಲ್ಲಾ ಸಂಪ್ರದಾಯಗಳನ್ನು ನಾವು ಮೌಲ್ಯಮಾಪನ ಮಾಡಬೇಕಾದದ್ದು ತುರ್ತಾಗಿರುತ್ತದೆ. ಶಾಸ್ತ್ರಗಳಲ್ಲಿ ಕಲಿಸಲ್ಪಟ್ಟಿರುವ ದೈವಿಕ ಸಂಪ್ರದಾಯಗಳನ್ನು ಹಿಡಿದುಕೊಂಡವರಾಗಿ ಅದೇ ವೇಳೆಯಲ್ಲಿ ಮನುಷ್ಯರ ಸುಳ್ಳು ಉಪದೇಶಗಳನ್ನು ತಿರಸ್ಕರಿಸೋಣ. ಖಂಡಿತವಾಗಿಯೂ, ಅಪೊಸ್ತಲರ ಸಂಪ್ರದಾಯಗಳು ಮತ್ತು ದೇವರ ವಾಕ್ಯವು ನಮಗೆ ಆಶೀರ್ವಾದವುಂಟು ಮಾಡುವವು.

## ದೇವರ ಸಾರ್ವಭೌಮತೆ (1:15)

ಪೌಲನು 1:15ರಲ್ಲಿ ದೇವರು "ತಾಯಿಯ ಗರ್ಭದಲ್ಲಿದ್ದಾಗಲೇ [ಆತನನ್ನು] ಪ್ರತ್ಯೇಕಿಸಿದ್ದನು" ಎಂದು ಬರೆದನು. ಈ ವಿಚಾರದಲ್ಲಿ ಆತನಿಗೆ ಯಾವ ಆಯ್ಕೆಯೂ ಇರಲಿಲ್ಲವೋ? ಒಬ್ಬ ವ್ಯಕ್ತಿಯು ದೇವರ ಮನಸ್ಸಿನಲ್ಲಿ ನಿಷ್ಕರ್ಷೆ ಮಾಡಿಕೊಳ್ಳಲ್ಪಟ್ಟದ್ದನ್ನು ಮಾಡದಿರುವದಕ್ಕೆ ನಿರ್ಧರಿಸಿಕೊಳ್ಳಬಲ್ಲನೋ? ದೇವರು ಮನುಷ್ಯನನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯದಿಂದ ವಂಚಿತನಾಗುವಂತೆ ಮಾಡಿದನೋ? ರೋಮಾ 9:19ರಲ್ಲಿರುವ ಪೌಲನ ತಾರ್ಕಿಕವಾದ ಮಾತುಗಳಲ್ಲಿ ಹೇಳುವದಾದರೆ, "ದೇವರ ಇಷ್ಟವನ್ನು ಎದುರಿಸುವವರು ಇಲ್ಲದಿರುವಲ್ಲಿ ಆತನು ತಪ್ಪುಹಿಡಿಯುವದು ಹೇಗೆ ಎಂದು ನನ್ನನ್ನು ಕೇಳುವಿ" (NRSV). ಅನೇಕರು ದೇವರ ಪೂರ್ವಜ್ಞಾನ, ಪೂರ್ವನಿಶ್ಚಯ ಮತ್ತು ದೈವಿಕವಿಧಿಯಂತಹ ಬುದ್ಧಿಗೆ ಸಂಬಂಧಿಸಿದ ಸಮಸ್ಯೆಗಳೊಂದಿಗೆ ಹೋರಾಟ ಮಾಡಿರುತ್ತಾರೆ (ನೋಡಿರಿ 3:8; ಅಪೊಸ್ತಲರ ಕೃತ್ಯಗಳು 2:31; ರೋಮಾ 8:29, 30; 9:18; ಎಫೆಸ 1:5, 11). ಪೌಲನು ಅಂಥ ಪ್ರಶ್ನೆಗಳೊಂದಿಗೆ ಗುದ್ದಾಡುವದಕ್ಕಾಗಿ ಸಮಯವನ್ನು ತೆಗೆದುಕೊಳ್ಳಲಿಲ್ಲ. ಆತನು ರೋಮಾ 9:20ರಲ್ಲಿ "ಎಲೋ ಮನುಷ್ಯನೇ, ಹಾಗನ್ನಬೇಡ; ದೇವರಿಗೆ ಎದುರುಮಾತಾಡುವದಕ್ಕೆ ನೀನು ಎಷ್ಟರವನು? ರೂಪಿಸಲ್ಪಟ್ಟದ್ದು ರೂಪಿಸಿದವನಿಗೆ - ನನ್ನನ್ನು ಹೀಗೇಕೆ ಮಾಡಿದೆ ಎಂದು ಕೇಳುವದುಂಟೇ?" ಎಂದಷ್ಟೆ ಉತ್ತರಿಸಿದನು. ಒಟ್ಟಾರೆಯಾಗಿ, ಪೌಲನ ತಾತ್ಪರ್ಯವು ಹೀಗಿತ್ತು, "ದೇವರು ದೇವರಾಗಿಯೇ ಇರಲಿ!" ದೇವರ ಮಿತಿಯುಳ್ಳ ಜೀವಿಗಳಾಗಿ, ನಾವು "ಸಾರ್ವಭೌಮ ಕರ್ತನು" ಎಂಬ ಪದದ ಆಲೋಚನೆಯನ್ನು ಮಾಡಿಕೊಳ್ಳಬೇಕು.

ದೇವರಿಗೆ ಭವಿಷ್ಯವು ಗೊತ್ತಿರಲಿಲ್ಲವಾದರೆ, ಪ್ರವಾದನೆ ಎಂಬುದೇ ಇರುತ್ತಿರಲಿಲ್ಲ, ಆ ಪ್ರವಾದನೆಯು ನಮ್ಮನ್ನು "ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವದಕ್ಕೆ" ಶಕ್ತರಾಗುವಂತೆ ಮಾಡುವ ಅಮೂಲ್ಯವಾದ ವಾಗ್ದಾನಗಳನ್ನು ಒದಗಿಸುತ್ತದೆ (2 ಪೇತ್ರ 1:4). ದೇವರ ಕುರಿತಾದ ನಮ್ಮ ಆತ್ಮೀಕ ತಿಳುವಳಿಕೆಯಲ್ಲಿ ಯಾವ ಪ್ರಮಾಣದಲ್ಲಿ ಮುಂದುವರೆದರೂ ಸರಿಯೇ, ನಮಗೆ ಉತ್ತರಿಸಲು ಆಗದಂತಹ ಪ್ರಶ್ನೆಗಳು ಯಾವಾಗಲೂ ಇದ್ದೇ ಇರುತ್ತವೆ. ನಾವು ಆತನಿಗಾಗಿನ ಹುಡುಕಾಟವನ್ನು ಮುಂದುರೆಯತಕ್ಕದ್ದಾದರೂ, ಆತನು ನಿಜಕ್ಕೂ ದೇವರೇ ಎಂಬುದನ್ನು ಮತ್ತ ಆತನ ಆಲೋಚನೆಗಳನ್ನು ಮತ್ತು ದಾರಿಗಳನ್ನು ಎಂದಿಗೂ ಪೂರ್ಣವಾಗಿ ಗ್ರಹಿಸುವದಕ್ಕಾಗುವದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳತಕ್ಕದ್ದು (ಯೆಶಾಯ 55:8, 9). ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಾವು ರಕ್ಷಣೆ ಹೊಂದಿಕೊಳ್ಳಬೇಕೆಂದು ಬಯಸುತ್ತಾನೆಂಬುದನ್ನು ನಾವು ಸಂದೇಹ ಪಡಲು ಸಾಧ್ಯವಿಲ್ಲ. ಯಾವನಾದರೂ ನಾಶವಾಗುವದು ಆತನ ಚಿತ್ತವಲ್ಲ, ಆದರೆ ಎಲ್ಲರೂ ಮಾನಸಾಂತರ ಪಡಬೇಕೆಂಬುದು ಆತನ ಬಯಕೆಯಾಗಿದೆ ಎಂದು ಬಲ್ಲೆವು (2 ಪೇತ್ರ 3:9). ಆತನು ಈ ಬಯಕೆಯನ್ನು ದೋಷಾತೀತವಾಗಿ ಶಿಲುಬೆಯ ಮೇಲೆ ತೋರ್ಪಡಿಸಿರುತ್ತಾನೆ. ಮುಕ್ತವಾಗಿರುವ ಒಂದೇ ಪ್ರಶ್ನೆಯು ಏನೆಂದರೆ ನಾವು ಆತನ ಪ್ರೀತಿಗೆ ಪ್ರತಿಕ್ರಿಯಿಸಿ ದೀನರಾಗಿ ಒಪ್ಪಿಸಿಕೊಳ್ಳುವ

ಮೂಲಕ ಆತನ ಕ್ರಿಸ್ತನ ಆಳ್ವಿಕೆಯ ಮುಂದೆ ನಮ್ಮ ಮೊಣಕಾಲೂರುತ್ತೇವೋ ಅಥವಾ ಇಲ್ಲವೋ ಎಂಬುದೆ. ಅದನ್ನು ನಾವು ಎಷ್ಟೇ ಹೆಚ್ಚಾಗಿ ಅಥವಾ ಕಡಿಮೆಯಾಗಿ ಗ್ರಹಿಸಿಕೊಂಡರೂ ಸರಿಯೇ, ಆತನ ಅಪರಿಮಿತವಾದ ಮತ್ತು ಗ್ರಹಿಸಲಸಾಧ್ಯವಾದ ಜ್ಞಾನವನ್ನು ಘನಪಡಿಸೋಣ.

## ದೇವರಿಂದ ಪ್ರತ್ಯೇಕಿಸಲ್ಪಟ್ಟ ಪೌಲನು (1:15, 16)

ಪೌಲನು - ಸಭೆಯ ಮತ್ತು ಸ್ವತಃ ಕ್ರಿಸ್ತನ ಹಿಂಸಕನು ಆಗಿದ್ದವನು (ಅಪೊಸ್ತಲರ ಕೃತ್ಯಗಳು 9:3, 4) - ತಾಯಿಯ ಗರ್ಭದಲ್ಲಿರುವಾಗಲೇ ಅನ್ಯಜನರಿಗೆ ವಿಶೇಷ ರಾಯಭಾರಿಯಾಗುವಂತೆ ದೇವರಿಂದ ಆರಿಸಿಕೊಳ್ಳಲ್ಪಟ್ಟಿದ್ದನು. ಏಕೆ? ಪೌಲನ ಪ್ರಕಾರವಾಗಿ, ಈ ಆಯ್ಕೆಯು ಒಂದು ಅಗಾಧ ಪ್ರಮಾಣದಲ್ಲಿ ತೋರಲ್ಪಟ್ಟ ಕೃಪೆಯಾಗಿತ್ತು (1:15) ಒಂದು ಉಪಶಮನಕಾರಿ ಕಾರಣಾಂಶವೆಂದರೆ ಆತನು ಕ್ರೈಸ್ತರನ್ನು ಹಿಂಸಿಸುವ ವೇಳೆ "ಅವಿಶ್ವಾಸಿಯಾಗಿ ತಿಳಿಯದೆ ಹಾಗೆ ಮಾಡಿದ್ದನು" (1 ತಿಮೊಥೆ 1:13). ಇನ್ನೊಂದು ಅಂಶವೇನೆಂದರೆ, ಪಾಪಿಗಳಲ್ಲಿ ಮುಖ್ಯನಾದ ಆತನಲ್ಲಿ "ಇನ್ನು ಮುಂದೆ ನಿತ್ಯಜೀವಕ್ಕಾಗಿ ತನ್ನ ಮೇಲೆ ನಂಬಿಕೆಯಿಡುವವರಿಗೆ ತನ್ನ ದೀರ್ಘಶಾಂತಿಯ ದೃಷ್ಟಾಂತವಿರಬೇಕೆಂದು" ಆಗಿತ್ತು (1 ತಿಮೊಥೆ 1:15, 16). ಆತನು - ಅತಿ ಕೆಟ್ಟವನು - ನಂಬಿಕೆಯ ಮೂಲಕ ರಕ್ಷಿಸಲ್ಪಡುವದಕ್ಕೆ ಸಾಧ್ಯವಾಗಿದ್ದರೆ, ಬೇರೆ ಯಾರೇ ಆಗಲಿ ಸಹ ರಕ್ಷಿಸಲ್ಪಡಬಲ್ಲರು.

ವಿಶ್ವ ಸುವಾರ್ತಾಸೇವೆಯಲ್ಲಿ ಒಂದು ಪ್ರಾಮುಖ್ಯವಾದ ಪಾತ್ರವನ್ನು ನಿರ್ವಹಿಸುವಂತೆ ಪೌಲನು ಕರೆಯಲ್ಪಟ್ಟನು. ದೇವರು ಬೇರೆ ಯಾರನ್ನೂ ಅಲ್ಲದೆ ಆತನನ್ನೇ ಏಕೆ ಪ್ರತ್ಯೇಕಿಸಿದನು? ದೇವರ ಸೇವೆಯಲ್ಲಿ ಈ ವಿಶೇಷ ಬದುಕಿಗಾಗಿ ಏಕೆ ಆರಿಸಿಕೊಳ್ಳಲ್ಪಟ್ಟನು?

*ಆತನ ಹಿನ್ನಲೆ ಮತ್ತು ಸಿದ್ಧತೆ.* ಆತನು ತಾರ್ಸದಲ್ಲಿ ಹುಟ್ಟಿ ಬೆಳೆದಿದ್ದನು, ಅದು ಅಲ್ಲಿದ್ದ ಶಿಕ್ಷಣ ಸದವಕಾಶಗಳ ಕಾರಣದಿಂದ "ಪ್ರಖ್ಯಾತವಾದ ಪಟ್ಟಣ" ಆಗಿತ್ತು (ಅಪೊಸ್ತಲರ ಕೃತ್ಯಗಳು 21:39). ಅದು ಆತನಿಗೆ ವ್ಯವಹಾರಿಕ ಭಾಷೆಯಾದ ಗ್ರೀಕ್, ಚದುರಿಹೋಗಿದ್ದ ಯೆಹೂದ್ಯರ ಮತ್ತು ವಿದ್ಯಾವಂತ ಗ್ರೀಕರು ಹಾಗೂ ರೋಮನ್ನರ ಸಹ ಮಾತಾಡುತ್ತಿದ್ದ ಸಾಮಾನ್ಯ ಗ್ರೀಕ್ ಭಾಷೆಯಲ್ಲಿ ಪರಿಣಿತಿಯನ್ನು ಹೊಂದುವದಕ್ಕೆ ಸದವಕಾಶವನ್ನು ಒದಗಿಸಿತ್ತು. ಈ ಹಿನ್ನಲೆಯು ಆತನು "ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ [ಯೇಸುವಿನ] ಹೆಸರನ್ನು ತಿಳಿಸುವದಕ್ಕಾಗಿ" ಸನ್ನದ್ಧುಗೊಳಿಸಿತ್ತು (ಅಪೊಸ್ತಲರ ಕೃತ್ಯಗಳು 9:15).

ಪೌಲನು ಸ್ವಾಭಾವಿಕ-ಹುಟ್ಟಿನಿಂದ ರೋಮನ್ ಪೌರತ್ವವನ್ನು ಹೊಂದಿದ್ದ ನಾಗರೀಕನಾಗಿದ್ದನು, ಈಗಾಗಲೇ ಅತ್ಯಂಥ ಪ್ರಯೋಜನಕಾರಿಯಾದ ರೋಮನ್ ಪ್ರವಾಸಾಧಿಕಾರಪತ್ರದ ಆಶೀರ್ವಾದ ಹೊಂದಿದವನಾಗಿದ್ದನು. ಆತನು ತಾನು ಇಷ್ಟಪಡುವಾಗಲೆಲ್ಲಾ ಎಲ್ಲಾ ವಿಧವಾದ ಶಾರೀರಿಕ ಬಾಧೆಗಳಿಂದ ರಕ್ಷಿಸಿಕೊಳ್ಳಲು ಅದನ್ನು ಬಳಸಿಕೊಳ್ಳಬಹುದಿತ್ತು, ಅಪೊಸ್ತಲರ ಕೃತ್ಯಗಳು 22:24-29ರಲ್ಲಿ ಅದರ ಉದಾಹರಣೆಯನ್ನು ಕಾಣುತ್ತೇವೆ.

ಆ ಕಾಲದ ಅತ್ಯಂಥ ಗೌರವಾನ್ವಿತ ರಬ್ಬಿಯಾದ ಗಮಲಿಯೇಲನ ಪಾದಗಳ ಬಳಿಯಲ್ಲಿ ಶಿಕ್ಷಣವನ್ನು ಹೊಂದಿದವನಾಗಿದ್ದು, ಪೌಲನು ಹಳೆಯ ಒಡಂಬಡಿಕೆಯ ಮೂಲ ಇಬ್ರಿಯ ವಾಕ್ಯದಲ್ಲಿ ಸಹ ಪಾಂಡಿತ್ಯ ಹೊಂದಿದ್ದನು. ಅಷ್ಟುಮಾತ್ರವಲ್ಲದೆ, ಆತನು ಆರಾಮಿಕ್ ಭಾಷೆಯನ್ನು ಮಾತಾಡಲು ಶಕ್ತನಾಗಿದ್ದನು, ಅದು ಫಿಲಿಷ್ಟಿಯದಲ್ಲಿನ ಸಭಾಮಂದಿರಗಳಲ್ಲಿ ಬಳಸುತ್ತಿದ್ದ ಆರಾಧನೆಯ ಭಾಷೆಯಾಗಿದ್ದು ಮಾತ್ರವಲ್ಲದೆ ತಮ್ಮ ತರಗತಿಗಳಲ್ಲಿ ಕಲಿಸುವದಕ್ಕೆ ರಬ್ಬಿಗಳು ಬಳಸುತ್ತಿದ್ದ ಸಂಪ್ರದಾಯಿಕ ಭಾಷೆಯೂ ಆಗಿತ್ತು (ಅಪೊಸ್ತಲರ ಕೃತ್ಯಗಳು 22:2, 3).

*ಆತನ ಪ್ರಕೃತಿ ಮತ್ತು ಆತ್ಮೀಕತೆ.* ಆತನು ತನ್ನ ನಂಬಿಕೆಗಳ ವಿಷಯದಲ್ಲಿ

ಸ್ವಾಭಾವಿಕವಾದ ನಿರ್ಣಾಯಕತೆಯನ್ನು ಹೊಂದಿದ್ದನು. ಕ್ರೈಸ್ತರನ್ನು ಹಿಂಸಿಸುವಂತೆ ಆತನನ್ನು ನಡಿಸಿದ ಉರಿಯುವ ಅಭಿಮಾನವು ಕ್ರಿಸ್ತನನ್ನು ಸಾರುವದರ ಕಡೆಗೆ ಬದಲಾವಣೆಗೊಳ್ಳುವದಕ್ಕೆ ಸಾಧ್ಯವಾಗಿತ್ತು. ಎಲ್ಲಾ ಹಿಂಸೆಗಳನ್ನು, ಸೆರೆವಾಸಗಳನ್ನು, ಹೊಡೆತಗಳನ್ನು, ಹಡಗು ಒಡೆಯುವಿಕೆಗಳನ್ನು, ಮತ್ತು ತಿರಸ್ಕಾರ ಇವುಗಳನ್ನು ಬೇರೆ ಯಾರು ಸಹಿಸಿಕೊಂಡಿರುವದಕ್ಕೆ ಸಾಧ್ಯವಾಗುತ್ತಿತ್ತು? (ನೋಡಿರಿ 2 ಕೊರಿಂಥ 11:23-27.)

ಅಲ್ಲದೆ ಪೌಲನು, ಸಭೆಯ ವಿರುದ್ಧದ ಹಿಂಸೆಯನ್ನು ನಡಿಸುವ ವೇಳೆಯಲ್ಲಿ ಸಹ ಮೃದುವಾದ ಮನಸ್ಸಾಕ್ಷಿಯನ್ನು ಹೊಂದಿದ್ದನು (ನೋಡಿರಿ ಅಪೊಸ್ತಲರ ಕೃತ್ಯಗಳು 7:58-60; 8:3; 22:20; 26:9-14). ತಾನು ದೇವರ ವಿರುದ್ಧ ಪಾಪ ಮಾಡುತ್ತಿದ್ದೇನೆ ಮತ್ತು "ಮುಳ್ಳುಗೋಲನ್ನು ಒದೆಯು[ತ್ತಿದ್ದೇನೆ]" (ಅಪೊಸ್ತಲರ ಕೃತ್ಯಗಳು 26:14) ಎಂಬುದು ಪೌಲನಿಗೆ ಸ್ಪಷ್ಟವಾಗುವ ವೇಳೆ, ಆತನು ಪೂರ್ಣ ಹೃದಯದಿಂದ ಪಶ್ಚಾತ್ತಾಪ ಪಟ್ಟನು.

ಅಪೊಸ್ತಲನಿಗೆ ಪ್ರೀತಿಸುವದಕ್ಕೂ ಕ್ಷಮಿಸುವದಕ್ಕೂ ಸಾಮರ್ಥ್ಯವಿತ್ತು. ಇದು ವಿಶೇಷವಾಗಿ ಆತನ ಜೊತೆಯ ಯೆಹೂದ್ಯರ ವಿಷಯದಲ್ಲಿ ಸತ್ಯವಾಗಿತ್ತು, ಅವರನ್ನು ಆತನು ಅನೇಕ ಸಾರಿ "ಸಹೋದರರು" ಎಂದು ಕರೆದನು. ಸತ್ಯವನ್ನು ಪ್ರೀತಿಸುವ ವ್ಯಕ್ತಿಯಾಗಿ, ಆತನು ಯೆಹೂದ್ಯ ಜನರಿಗೆ ಬೇಸರವುಂಟು ಮಾಡಬಹುದಾದಂಥ ಹೇಳಿಕೆಗಳನ್ನು ನೀಡುವ ಒತ್ತಾಯಕ್ಕೊಳಗಾದನು. ಅವರು ಹಲವಾರು ಸಂದರ್ಭಗಳಲ್ಲಿ ಆತನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದರಾದರೂ, ಆತನು ಆಗಲೂ ಅವರನ್ನು ಕ್ರಿಸ್ತನ ಸುವಾರ್ತೆಯೊಂದಿಗೆ ಸಂಧಿಸಲು ಪ್ರಯತ್ನ ಮಾಡಿದನು (ಅಪೊಸ್ತಲರ ಕೃತ್ಯಗಳು 28:17-29; ರೋಮಾ 9:1-5; 10:1-4). ಆತನಿಗಿದ್ದ ಕೋಮಲ ಸ್ವಭಾವವು ಆತನು ಸ್ಥಾಪಿಸಿದ್ದ ಸಭೆಗಳಿಗೋಸ್ಕರ ಆಳವಾದ ಕಳಕಳಿಯನ್ನು ವ್ಯಕ್ತಪಡಿಸುವಂತೆ ಮತ್ತು ನಂಬಿಕೆಯಲ್ಲಿ ಪೋಷಣೆ ಮಾಡುವಂತೆ ಶಕ್ತಗೊಳಿಸಿತ್ತು (2 ಕೊರಿಂಥ 11:28; ಫಿಲಿಪ್ಪಿ 1:8; 1 ಥೆಸಲೋನಿಕ 2:7, 8).

*ಮುಕ್ತಾಯ.* ಕರ್ತನು ಪೌಲನಲ್ಲಿ ತಾನು "ಸಾಧನವಾಗಿ ಆದುಕೊಳ್ಳಲು" ಶ್ರೇಷ್ಠತೆಯ ಕಚ್ಚಾ ಸಾಮಗ್ರಿಯು ಇರುವದನ್ನು ಕಂಡನು (ಅಪೊಸ್ತಲರ ಕೃತ್ಯಗಳು 9:15). ಸಭೆಯ ವಿರುದ್ಧ ಆತನು ಮಾಡಿದ ದೊಡ್ಡ ಹಿಂಸೆಯ ಕಾರಣದಿಂದಾಗಿ, ಆದಿ ಕ್ರೈಸ್ತರು ಪೌಲನನ್ನು ಭಯ ಪಡಬೇಕಾದ ಅತ್ಯಂಥ ಘೋರವಾದ ದುಷ್ಟ ವ್ಯಕ್ತಿಯೆಂದು ಕಂಡರು (ಅಪೊಸ್ತಲರ ಕೃತ್ಯಗಳು 8:1-3; 9:1, 2, 13, 14, 26). ಹೇಗೂ, ಮನುಷ್ಯರ ಹೃದಯಗಳನ್ನು ತಿಳಿದಿರುವ ಕರ್ತನು, ಅಂತರಂಗದಲ್ಲಿ ಆತನು ಒಂದು ವಿರಳವಾದ ಮುತ್ತು ಆಗಿರುತ್ತಾನೆಂದು ಗ್ರಹಿಸಿದ್ದನು. ಆತನು ತಪ್ಪು ದಾರಿಗೆ ನಡಿಸಲ್ಪಟ್ಟಿರುತ್ತಾನೆ ಮತ್ತು ಆತನ ಪಿಳೀಗೆಯ ಪ್ರಮುಖ ಸುವಾರ್ತಿಕವಾಗುವದಕ್ಕೋಸ್ಕರ ಆತನಿಗೆ ಪುನಃ ಸತ್ಯದಲ್ಲಿ ತಿಳುವಳಿಕೆಯನ್ನು ನೀಡುವ ಅಗತ್ಯವಿತ್ತು.

ಕರ್ತನಿಗೆ ಅಪೊಸ್ತಲ ಪೌಲನಾಗಿ ಮಾರ್ಪಟ್ಟ ವ್ಯಕ್ತಿಯಲ್ಲಿ ಇರಬಹುದಾಗಿದ್ದ ಒಳ್ಳೇತನದ ಬಗ್ಗೆ ಗೊತ್ತಿತ್ತು ಎಂಬುದಕ್ಕಾಗಿ ಸ್ತೋತ್ರ ಮಾಡೋಣ. ಈ ವ್ಯಕ್ತಿಯು ತುರ್ಕಿ, ಗ್ರೀಸ್, ಮಕೆದೋನ್ಯ, ರೋಮಾಪುರ, ಮತ್ತು ಬಹುಶಃ ಸ್ಪೇನ್ ದೇಶದ ಅನ್ಯಜನಾಂಗಗಳ ಸಮೂಹಗಳಿಗೆ ಸುವಾರ್ತೆಯನ್ನು ಹರಡಿಸುವದಕ್ಕೆ ಬಳಸಿಕೊಳ್ಳಲ್ಪಟ್ಟನು. ಪೌಲನ ಮುಖಾಂತರವಾಗಿ, ನಮಗೆ ಸುವಾರ್ತೆಯನ್ನು, ಕ್ರಿಸ್ತನ ಸಭೆಯ ಸ್ವಭಾವವನ್ನು, ಮತ್ತು ಕ್ರೈಸ್ತರಾಗಿ ಹೇಗೆ ಜೀವಿಸಬೇಕು ಎಂಬುದನ್ನು ಕಲಿಸುವಂಥ ಅನೇಕ ಪ್ರೇರಿತ ಪತ್ರಿಕೆಗಳಿಂದ ಆಶೀರ್ವದಿಸಲ್ಪಟ್ಟಿದ್ದೇವೆ.

## ಕುಪ್ರಿಯರ ಪಾತ್ರ (1:21)

ಅಪೊಸ್ತಲರ ಕೃತ್ಯಗಳು 10ರಲ್ಲಿ ಕೋರ್ನೇಲ್ಯನು ಮತ್ತು ಆತನ ಮನೆಯವರು ಪರಿವರ್ತನೆಗೊಂಡ ನಂತರದಲ್ಲಿ, ಅನ್ಯಜನಾಂಗದ ಸುವಾರ್ತಾಸೇವೆ ಆರಂಭದಲ್ಲಿ ಕುಪ್ರಿಯರು (ಕುಪ್ರ ದ್ವೀಪದ ಜನರು) ನಿರ್ವಹಿಸಿದ ಪಾತ್ರವು ಮಹತ್ವಪೂರ್ಣವಾದದ್ದು. ಬಾರ್ನಬನು ಒಬ್ಬ ಕುಪ್ರದ್ವೀಪದ ವ್ಯಕ್ತಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 4:36); ಮತ್ತು ಕುಪ್ರಿಯರು ಹಾಗೂ ಕುರೇನ್ಯಿಯರೇ ಅಂತಿಯೋಕ್ಯದಲ್ಲಿನ "ಗ್ರೀಕರಿಗೆ" ಅಥವಾ ಹೆಲ್ಲೇನಿಯರಿಗೆ (ಗ್ರೀಕ್ ಪದ್ಧತಿಗಳು ಹಾಗು ಸಂಸ್ಕೃತಿಯ ಅನುಗುಣವಾಗಿ ಜೀವಿಸುತ್ತಿದ್ದ ಜನರು) ಸುವಾರ್ತೆಯನ್ನು ಸಾರಿದ ಮೊದಲಿಗರಾಗಿದ್ದರು (ಅಪೊಸ್ತಲರ ಕೃತ್ಯಗಳು 11:20, 21). ಯೆರೂಸಲೇಮಿನಲ್ಲಿದ್ದ ಸಭೆಯು ಈ ಬೆಳವಣಿಗೆಯನ್ನು ಕುರಿತು ಕೇಳಿಸಿಕೊಂಡಾಗ, ಪರಿಸ್ಥಿತಿಯನ್ನು ವಿಚಾರಿಕೊಂಡು ಬರುವಂತೆ ಅವರು ಕುಪ್ರ ದ್ವೀಪದವನಾದ ಬಾರ್ನಬನನ್ನು ಕಳುಹಿಸಿ ಕೊಟ್ಟರು (ಅಪೊಸ್ತಲರ ಕೃತ್ಯಗಳು 11:22). ಆತನು ಅಂತಿಯೋಕ್ಯದಲ್ಲಿ ಶಿಷ್ಯರ ಸಂಖ್ಯೆಯು ಅಧಿಕಗೊಳ್ಳುತ್ತಲೇ ಇರುವದನ್ನು ಮತ್ತು ಅವರಿಗೆ ಉಪದೇಶಿಸುವ ಅಗತ್ಯವಿದೆ ಎಂಬುದನ್ನು ಅರಿತುಕೊಂಡಾಗ (ಅಪೊಸ್ತಲರ ಕೃತ್ಯಗಳು 11:23, 24), ಆತನು ತಾರ್ಸಗೆ ಹೋಗಿ ಆ ಕೆಲಸದಲ್ಲಿ ಸಹಾಯ ಮಾಡುವಂತೆ ಸೌಲನನ್ನು (ಪೌಲ) ನೇಮಿಸಿಕೊಂಡನು (ಅಪೊಸ್ತಲರ ಕೃತ್ಯಗಳು 11:25, 26). ಇದು ಒಂದು ಇಡೀ ವರ್ಷದ ತನಕ ಮುಂದುವರೆಯಿತು ಮತ್ತು ಇದರ ಫಲಿತವಾಗಿ ಪ್ರಥಮ ಶತಮಾನದ ಮೊದಲ ಯೆಹೂದಿ-ಅನ್ಯಜನಾಂಗದ ಏಕೀಕೃತ ಸಭೆಯು ಸ್ಥಾಪನೆಗೊಂಡಿತ್ತು, ಮಾತ್ರವಲ್ಲದೆ ಅದರ ಸದಸ್ಯರು ಮೊದಲ ಬಾರಿಗೆ "ಕ್ರೈಸ್ತರು" ಎಂಬ ಹೆಸರನ್ನು ಪಡೆದುಕೊಂಡಂಥ ಸಭೆಯೂ ಆಗಿತ್ತು (ಅಪೊಸ್ತಲರ ಕೃತ್ಯಗಳು 11:26). ಬಾರ್ನಬ ಮತ್ತು ಸೌಲರು ಅನ್ಯಜನಾಂಗಕ್ಕೆ ಸುವಾರ್ತಾಸೇವೆಯನ್ನು ಮಾಡುವದಕ್ಕೋಸ್ಕರ ಪವಿತ್ರಾತ್ಮನಿಂದ ಪ್ರತ್ಯೇಕವಾದ ಕರೆಯನ್ನು ಸ್ವೀಕರಿಸಿಕೊಂಡದ್ದು ಅಂತಿಯೋಕ್ಯದಲ್ಲಿಯೇ ಆಗಿತ್ತು (ಅಪೊಸ್ತಲರ ಕೃತ್ಯಗಳು 13:1, 2). ಅಂತಿಯೋಕ್ಯದಿಂದ ಕಳುಹಿಸಲ್ಪಟ್ಟವರಾಗಿ, ಕುಪ್ರಿಯನಾದ ಬಾರ್ನಬ ಹಾಗೂ ಆತನ ಜೊತೆಗೆಲಸದವನಾದ ಸೌಲರು ಸೆಲ್ಯೂಕ್ಯದ ಮಾರ್ಗವಾಗಿ ಪ್ರಥಮ ಸುವಾರ್ತಾ ಪ್ರಯಾಣವನ್ನು ಮಾಡಿದ ಬಳಿಕ ಕುಪ್ರದ್ವೀಪವನ್ನು ಪ್ರಥಮ ನಿಲುಗಡೆಯನ್ನಾಗಿ ಮಾಡಿಕೊಂಡಿದ್ದರು (ಅಪೊಸ್ತಲರ ಕೃತ್ಯಗಳು 13:4).

## ಮಿಶನರಿಗಳಾಗಿ ಜೀವಿಸುವದು (1:21)

ಯೆರೂಸಲೇಮಿಗೆ ಭೇಟಿ ಕೊಟ್ಟು ಸಭಾಮಂದಿರಗಳಲ್ಲಿ ಬೋಧಿಸಿದ ಬಳಿಕ, ಪೌಲನು "ಸಿರಿಯ ಮತ್ತು ಕಿಲಿಕ್ಯ ಪ್ರಾಂತ್ಯಗಳಿಗೆ ಹೋದನು" (1:21). ಅಪೊಸ್ತಲರ ಕೃತ್ಯಗಳು 9:29, 30ರಲ್ಲಿ, ಗ್ರೀಕ್ ಹಿನ್ನಲೆಯ ಯೆಹೂದ್ಯರು "ಅವನನ್ನು ಕೊಲ್ಲುವದಕ್ಕೆ ಪ್ರಯತ್ನ ಮಾಡಿದರು," ಆ ಕಾರಣದಿಂದ ಸಹೋದರರು "ಅವನನ್ನು ಕೈಸರೈಯಕ್ಕೆ ಕರಕೊಂಡು ಹೋಗಿ ಅಲ್ಲಿಂದ ತಾರ್ಸಕ್ಕೆ ಕಳುಹಿಸಿದರು" ಎಂದು ಲೂಕನು ವಿವರಿಸುತ್ತಾನೆ, ಆ ತಾರ್ಸವು ಕಿಲಿಕ್ಯದಲ್ಲಿತ್ತು. ಪೌಲನ ಚಲನವಲನಗಳಿಂದ ಮಿಶನರಿಗಳು ಯಾವ ಪಾಠಗಳನ್ನು ಕಲಿತುಕೊಳ್ಳಬಹುದು?

*ಒಂದು ಸುವಾರ್ತಾ ಕ್ಷೇತ್ರಕ್ಕೆ ಹೋಗುವದಕ್ಕೆ ಮತ್ತು ಅದನ್ನು ತೊರೆದು ಹೋಗುವದಕ್ಕೆ ಸಹ ಒಂದು ಸಮಯವುಂಟು.* ಪೌಲನು ಅನೇಕ ವಿಧಗಳಲ್ಲಿ ವಿವಿಧ ಕ್ಷೇತ್ರಗಳಿಗೆ ಕರೆಯಲ್ಪಟ್ಟನು. ಆತನು ಅನ್ಯಜನಾಂಗಗಳ ಮಧ್ಯದಲ್ಲಿ ಒಂದು ಸಾಮಾನ್ಯ ಕೆಲಸಕ್ಕೋಸ್ಕರ ಒಂದು ಪ್ರವಾದನಾತ್ಮಕ "ಆದೇಶ" ಮೂಲಕ ಕರೆಯಲ್ಪಟ್ಟು ಹೊರಡುವದನ್ನು (ಅಪೊಸ್ತಲರ ಕೃತ್ಯಗಳು 13:1-3) ಮತ್ತು ಕೆಲವು ಪ್ರಾಂತ್ಯಗಳಿಗೆ, ವಿಶೇಷವಾಗಿ ಮಕೆದೋನ್ಯದ

ಪ್ರಕರಣದಲ್ಲಿರುವ ಪ್ರಕಾರ ಕಳುಹಿಸಲ್ಪಟ್ಟನೆಂಬುದನ್ನು ಕಾಣುತ್ತೇವೆ (ಅಪೊಸ್ತಲರ ಕೃತ್ಯಗಳು 16:9, 10). ಕೆಲವೊಂದು ಸಂದರ್ಭಗಳಲ್ಲಿ, ಆತನು ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದ ಯೋಜನೆಯಂತೆ ನಡೆಯಬಾರದೆಂದು ಪವಿತ್ರಾತ್ಮನು ಆತನನ್ನು ನಿಷೇಧಿಸಿದನು (ನೋಡಿರಿ ಅಪೊಸ್ತಲರ ಕೃತ್ಯಗಳು 16:6, 7). ಪೌಲನು ಯೆರೂಸಲೇಮಿನಲ್ಲಿದ್ದಂಥ ಈ ಆರಂಭದ ಸಮಯದಲ್ಲಿ (1:18; ಅಪೊಸ್ತಲರ ಕೃತ್ಯಗಳು 9:29, 30), ಆತನ ಪ್ರಾಣಕ್ಕೆ ಅಪಾಯವಿದ್ದ ಕಾರಣ ಆತನು ಅಲ್ಲಿಂದ ಹೊರಟು ಹೋಗಬೇಕಾಗಿತ್ತು.

*ಕೆಲವು ಸಾರಿ ಸ್ಥಳೀಯ ಸಮಸ್ಯೆಗಳ ಕುರಿತು ಮಿಶನರಿಗಿಂತಲೂ ಸ್ಥಳೀಯ ಸಹೋದರರಿಗೆ ಚೆನ್ನಾಗಿ ತಿಳಿದಿರಬಹುದಾಗಿದೆ.* ಒಬ್ಬ ಪ್ರವಾಸಿಯು, ಪೌಲನಷ್ಟು ಬುದ್ಧಿವಂತ ಮತ್ತು ಅನುಭವಶಾಲಿ ಆಗಿದ್ದವನು ಸಹ ಅಪಾಯವನ್ನು ಮುಂದಾಗಿ ಗ್ರಹಿಸದೆ ಹೋಗಬಹುದು. ಅಪೊಸ್ತಲರ ಕೃತ್ಯಗಳು 9 ರಲ್ಲಿರುವಂಥ ಈ ನಿರ್ದಿಷ್ಟವಾದ ಪ್ರಕರಣದಲ್ಲಿ ಪೌಲನ ಕಡೆಗೆ ಸ್ಥಳೀಯ ಯೆಹೂದ್ಯರು ಆಳವಾಗಿ ಬೇರೂರಿದ್ದ ಹಗೆತನವು ಸೇರಿತ್ತು. ಸಹೋದರರು ಪೌಲನಿಗೆ ಇದು ಎಷ್ಟು ಅಪಾಯಕಾರಿ ಎಂಬುದಾಗಿ ಮಾತ್ರವಲ್ಲ ಆದರೆ ಅದು ಸುವಾರ್ತಾ ಸೇವೆಯನ್ನು ಮಾಡುವದಕ್ಕೆ ಸ್ಥಳೀಯ ಸಭೆಗೆ ಇರುವ ಸಾಮರ್ಥ್ಯಕ್ಕೆ ಎಷ್ಟೊಂದು ವಿಷಕಾರಿ ಆಗಬಲ್ಲದೆಂಬುದನ್ನು ಸಹ ಗ್ರಹಿಸಿಕೊಂಡರು.

*ಒಬ್ಬ ಮಿಶನರಿಯು ಈಗ ತಾನು ಪರಿಶ್ರಮ ಪಡುವ ಕ್ಷೇತ್ರವೊಂದನ್ನು ತೊರೆದು ಹೋಗುವ ವೇಳೆ, ಆತನು ತನ್ನ ಜೀವಿತದಲ್ಲಿ ಸುವಾರ್ತಾಸೇವೆಗೆ ಇಟ್ಟುಕೊಂಡಿರುವ ಸಂಪೂರ್ಣ ಲಕ್ಷ್ಯವನ್ನೇ ಬಿಟ್ಟುಬಿಡತಕ್ಕದ್ದೆಂದು ಅದರ ಅರ್ಥವಾಗುವದಿಲ್ಲ.* ಪೌಲನ ಪ್ರಕರಣದಲ್ಲಿ, ಇದು ವಿಶೇಷವಾಗಿ ಪ್ರಾಮುಖ್ಯವಾಗಿತ್ತು ಯಾಕೆಂದರೆ ಆತನು ಯಾವದೇ ಕ್ಷಣದಲ್ಲಾಗಲಿ ಎಲ್ಲವನ್ನೂ ತ್ಯಜಿಸಿ ಬಿಟ್ಟು, ಸಾಯಬೇಕಾದರೂ ಕರ್ತನನ್ನು ಹಿಂಬಾಲಿಸುವದಕ್ಕೆ ಸಹ ಸಿದ್ಧನಿದ್ದಂಥ - ತನ್ನ ಕರ್ತನಿಗೆ ಸಂಪೂರ್ಣ ಸಮರ್ಪಿತನಾಗಿದ್ದ - ವ್ಯಕ್ತಿಯಾಗಿದ್ದನು.

ಆತನ ಸೇವೆಯಲ್ಲಿ ಬಹಳಷ್ಟು ಕಡೇ ಕಾಲದಲ್ಲಿ, ಪೌಲನು ತನ್ನ ಆಯ್ಕೆಗಳನ್ನು ವಿಶ್ಲೇಷಿಸಿಕೊಂಡನು ಮತ್ತು ಹೀಗೆ ಹೇಳಿದನು, "ಇಲ್ಲಿಂದ ಹೋಗಿಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ" (ಫಿಲಿಪ್ಪಿ 1:23; NIV). ಹೇಗೂ, ಬೇರೆಯವರ ಪ್ರಸ್ತುತಕಾಲದ ಅಗತ್ಯತೆಗಳನ್ನು ಕಂಡವನಾಗಿ ಮನಸ್ಸು ಬದಲಾಯಿಸಿಕೊಂಡನು, "ಆದರೆ ನಾನಿನ್ನೂ ಶರೀರದಲ್ಲಿ ವಾಸಮಾಡಿಕೊಂಡಿರುವದೇ ನಿಮಗೋಸ್ಕರ ಬಹು ಅವಶ್ಯವಾದದ್ದು. ಆದದರಿಂದ ನಿಮಗೆ ಕ್ರಿಸ್ತ ನಂಬಿಕೆಯಲ್ಲಿ ಅಭಿವೃದ್ಧಿಯೂ ಆನಂದವೂ ಉಂಟಾಗುವದಕ್ಕೋಸ್ಕರ ನಾನು ಜೀವದಿಂದುಳಿದು ನಿಮ್ಮೆಲ್ಲರ ಬಳಿಯಲ್ಲಿರುವೆನೆಂದು ದೃಢವಾಗಿ ನಂಬಿದ್ದೇನೆ" (ಫಿಲಿಪ್ಪಿ 1:24, 25). ಪೌಲನು ಹೆಚ್ಚು ಇಷ್ಟಪಡುವದು ಮರಣಿಸಿ ತನ್ನ ಪ್ರಿಯನಾದ ಕರ್ತನು ಹಾಗೂ ಒಡೆಯನಾದ ಯೇಸುವಿನ ಸಂಗಡ ಒಂದಾಗಬೇಕೆಂಬುದೇ ಆಗಿತ್ತು; ಆದರೆ ಆತನು ಸುವಾರ್ತೆಸಾರುವ ಪರಿಶ್ರಮಗಳು ಇನ್ನೂ ಭೂಮಿಯಲ್ಲಿ ಅಗತ್ಯವಾಗಿದ್ದವು.

---

**ಅಡಿಟಿಪ್ಪಣಿಗಳು**

[1]ಕರ್ತನು ಪೌಲನ ಸಂಗಡ ಆತನ ಸೇವೆಯುದ್ದಕ್ಕೂ ನಂತರದ ಸಂದರ್ಭಗಳಲ್ಲಿ ಸಹ ಮಾತಾಡಿದ್ದನು (ಅಪೊಸ್ತಲರ ಕೃತ್ಯಗಳು 18:9, 10; 22:17-21; 23:11). [2]ಸ್ಪಷ್ಟವಾಗಿರುವಂತೆ, ರಬ್ಬಿಗಳು ರಕ್ತಸಂಬಂಧದಿಂದ ಹುಟ್ಟಿದ ಜೊತೆಯ ಇಸ್ರಾಯೇಲ್ಯರನ್ನು "ಸಹೋದರರು" ಎಂದು ಕರೆದರೆ, ಯೆಹೂದ್ಯಮತಕ್ಕೆ ಮತಾಂತರಗೊಂಡವರಿಗೆ "ನೆರೆಯವನು" ಎಂಬುದು ಅನ್ವಯಿಸಲ್ಪಡುತ್ತಿತ್ತು. (Dwight Mallory Pratt and Everett F. Harrison,

"Brother," in *The International Standard Bible Encyclopedia*, rev. ed., ed. Geoffrey W. Bromiley [Grand Rapids, Mich.: Wm. B. Eerdmans Publishing Co., 1979], 1:550.) [3]ಪೌಲನ ಜೊತೆಗೆಲಸದವರಲ್ಲಿ ಸ್ತ್ರೀಯರಿದ್ದರು ಎಂಬುದರ ಉದಾಹರಣೆಗಳೊಳಗೆ ಫೊಯಿಬೆ (ರೋಮಾ 16:1, 2), ಪ್ರಿಸ್ಕಿಲ್ಲ (ಅಪೊಸ್ತಲರ ಕೃತ್ಯಗಳು 18:2, 3; ರೋಮಾ 16:3), ಮತ್ತು ಯುವೊದ್ಯ ಹಾಗೂ ಸಂತುಕೆ ಎಂಬವರು (ಫಿಲಿಪ್ಪಿ 4:2, 3). [4]ಲೂಕನು ಎರಡನೆಯ ಸುವಾರ್ತಾಪ್ರಯಾಣದ ವೇಳೆ ಫಿಲಿಪ್ಪಿಯದಲ್ಲಿ ಉಳಿದುಕೊಂಡಿದ್ದನೆಂದು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿನ "ನಾವು" ಎಂಬುದನ್ನೊಳಗೊಂಡ ವಾಕ್ಯಭಾಗಗಳಲ್ಲಿ ಪ್ರತಿಫಲಿಸಲ್ಪಟ್ಟಿರುತ್ತದೆ. ಆತನು ಫಿಲಿಪ್ಪಿಯದೊಳಗೆ ಪೌಲನ ಸುವಾರ್ತಾ ತಂಡದಲ್ಲಿ ("ನಾವು") ಇದ್ದನು (ಅಪೊಸ್ತಲರ ಕೃತ್ಯಗಳು 16:10-40), ಆದರೆ ಬೇರೆಯವರು ("ಅವರು") ಹೊರಟು ಹೋಗಿದ್ದರು (ಅಪೊಸ್ತಲರ ಕೃತ್ಯಗಳು 16:40). ಲೂಕನು ಅನಂತರದಲ್ಲಿ ಮೂರನೆಯ ಸುವಾರ್ತಾ ಪ್ರಯಾಣದಲ್ಲಿ ("ನಾವು") ಪುನಃ ಸೇರ್ಪಡೆಗೊಂಡನು (ಅಪೊಸ್ತಲರ ಕೃತ್ಯಗಳು 20:6). ಪೌಲನು ನಿರ್ದಿಷ್ಟವಾದ ಸ್ಥಳಗಳಲ್ಲಿ ಸೇವೆಯನ್ನು ಮಾಡುವದಕ್ಕೆ ಬಿಟ್ಟು ಹೋದ ಬೇರೆ ಉದಾಹರಣೆಗಳೆಂದರೆ ಕ್ರೇತದಲ್ಲಿ ತೀತನನ್ನು (ತೀತನಿಗೆ 1:5) ಮತ್ತು ಎಫೆಸದಲ್ಲಿ ತಿಮೊಥೆಯನನ್ನು ಬಿಟ್ಟು ಹೋದನು (1 ತಿಮೊಥೆ 1:3, 4). [5]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 288. [6]Kenneth L. Boles, *Galatians & Ephesians*, The College Press NIV Commentary (Joplin, Mo.: College Press Publishing Co., 1993), 31. [7]ಇಹಲೋಕದ ಜನರನ್ನು ಸೂಚಿಸುವದಕ್ಕೆ, κόσμος (*kosmos*) ಎಂಬ ಪದವು ಬಳಸಲ್ಪಟ್ಟಿದೆ. ಈ ಪದವು ಭೌತಿಕ ಪ್ರಪಂಚವನ್ನಾದರೂ ಸೂಚಿಸಬಹುದು ಅಥವಾ, ವಿಶೇಷವಾಗಿ ಕ್ರೈಸ್ತ ಸನ್ನಿವೇಶವೊಂದರಲ್ಲಿ, ಕ್ರಿಸ್ತನಲ್ಲಿ ಇಲ್ಲದವರನ್ನು ಸೂಚಿಸಬಹುದು ಯೋಹಾನ 3:16ರಲ್ಲಿ ನಾವು ದೇವರು "ಲೋಕದ ಮೇಲೆ" ಪ್ರೀತಿಯಿಟ್ಟಿದ್ದಾನೆಂಬುದನ್ನು ನೋಡುವಾಗ, ಖಂಡಿತವಾಗಿಯೂ ಅಲ್ಲಿ ಜನರು ಎಂದರ್ಥವಾಗಿದೆ. ಯೋಹಾನನು "ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ" (1 ಯೋಹಾನ 2:15) ಹೇಳಿದಾಗ, ಆತನು ಶಾರೀರಿಕ ಮಂಡಲವನ್ನು ಮತ್ತು ಈ ಲೋಕವನ್ನು ದಾಟಿ ಯಾವ ನಿರೀಕ್ಷೆಯನ್ನೂ ಹೊಂದಿರದಂಥ ಹಾಗೂ ನಾಶನಕ್ಕೆ ನೇಮಿಸಲ್ಪಟ್ಟಿರುವಂಥ ಅದರಲ್ಲಿರುವ ನಾಗರೀಕರು ಎಂದರ್ಥವಾಗಿದೆ. [8]F. F. Bruce, *The Epistle to the Galatians*, The New International Greek Testament Commentary (Grand Rapids, Mich.: Wm. B. Eerdmans Publishing Co., 1982), 76. [9]Boles, 31. [10]ಫಿಲಿಪ್ಪಿ 3:9ರಲ್ಲಿ, ಗ್ರೀಕ್ ವಾಕ್ಯದೊಳಗೆ "ಧರ್ಮಶಾಸ್ತ್ರ" ಎಂಬುದರ ಮುಂದೆ ನಿರ್ದಿಷ್ಟ ಗುಣವಾಚಿ "the" ಎಂಬುದು ಕಾಣಿಸಿಕೊಳ್ಳುವದಿಲ್ಲ. NASBಯು ಗುಣವಾಚಿಯನ್ನು ಇಟಾಲಿಕನಲ್ಲಿಡುವ ಮೂಲಕ ಇದನ್ನು ಸೂಚಿಸುತ್ತದೆ: ". . . ನೇಮನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೆ." ಗುಣವಾಚಿಯು ಇಲ್ಲದಿರುವಿಕೆಗೆ ಕಾರಣವು ಪೌಲನು ಅಲ್ಲಿ ಸಾಮಾನ್ಯವಾಗಿರುವ ಕಟ್ಟಳೆಯನ್ನು, ಸುವಾರ್ತೆಗೆ ವಿಧೇಯವಾಗುವ ವಿಷಯದಲ್ಲಿ ನೇಮನಿಷ್ಠೆಯ ದಾರಿಯನ್ನು ಅನುಸರಿಸುವದು ಸೇರಿದಂತೆ ಸಾಮಾನ್ಯ ಕಟ್ಟಳೆಯನ್ನು ಕುರಿತು ಮಾತಾಡುತ್ತಿದ್ದಾನೆ ಎಂಬುದಾಗಿ ಕೆಲವರು ವಾದಿಸುತ್ತಾರೆ. ಹೇಗೂ, ತರ್ಕವು ಮುನ್ನಡೆಯುವದಿಲ್ಲ. ಕ್ರೈಸ್ತರು ಯಾವ ವಿಧದಲ್ಲಿಯೂ ತಮ್ಮ ಸ್ವಕಾರ್ಯಗಳಿಂದ ರಕ್ಷಣೆಗೆ ಯೋಗ್ಯರಾಗುವದಿಲ್ಲ ಎಂಬುದು ಸ್ಪಷ್ಟ, ವಿಶೇಷವಾಗಿ ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯಿಂದ ಸ್ಪಷ್ಟವಾಗಿರುತ್ತದೆ (ಎಫೆಸ 2:8-10; ತೀತನಿಗೆ 3:4-6ನ್ನು ಹೋಲಿಸಿರಿ). ಹಾಗಿದ್ದರೂ, ರೋಮಾಪುರದವರಿಗೆ ಬರೆದ ಪತ್ರಿಕೆಯನ್ನು ಬಳಸುವಾಗ ಸಹ, ಗ್ರೀಕ್ ವಾಕ್ಯದಲ್ಲಿ ಗುಣವಾಚಿಯು ಇಲ್ಲದಿರುವಾಗ "ಧರ್ಮಶಾಸ್ತ್ರ" ಎಂಬ ಪದವನ್ನು ಸಾಮಾನ್ಯವಾಗಿ ಬಳಸುವದಕ್ಕಾಗಿ ಪ್ರಕರಣವನ್ನು ಬೆಳೆಸುವದಂತೆ ಎಚ್ಚರಿಕೆಯಾಗಿರತಕ್ಕದ್ದು; ಯಾಕೆಂದರೆ ಅದು ಇಲ್ಲದೆ ಇರುವದಕ್ಕೆ ಅನೇಕ ಕಾರಣಗಳಿರುತ್ತವೆ (ಅನೇಕ ಸಾರಿ ವ್ಯಾಕರಣಕ್ಕೆ ಸಂಬಂಧಿಸಿದ ಕಾರಣಗಳು). "ಧರ್ಮಶಾಸ್ತ್ರ" ಎಂಬುದು ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುತ್ತದೋ ಅಥವಾ ಇಲ್ಲವೋ ಎಂಬುದರ ಅಂತಿಮ ನಿರ್ಧಾರಕವು ಅದು ಕಾಣಿಸಿಕೊಳ್ಳುವ ವಾಕ್ಯಭಾಗದ ಸನ್ನಿವೇಶವೇ ಆಗಿದೆ.

[11]O. Palmer Robertson, *The Christ of the Covenants* (Phillipsburg, N.J.: Presbyterian and Reformed Publishing Co., 1980), 58. [12]1 ಕೊರಿಂಥ 12:8-10ರಲ್ಲಿ, *ಅಲ್ಲೋಸ* ಆರು ಸಾರಿ ಮತ್ತು *ಹೆಟೆರೊಸ* ಎರಡು ಸಾರಿ ಕಾಣಿಸಿಕೊಳ್ಳುತ್ತದೆ. [13]Bauer, 990. [14]ಈ ಹೇಳಿಕೆಯನ್ನು ಬಾರ್ನಬನ *ವರ್ತನೆ*ಯು ಸ್ವಲ್ಪ ಹೊತ್ತು ಯೆಹೂದಿಕರಣ ಮಾಡುವ ಜನರ ಪ್ರಭಾವಕ್ಕೊಳಗಾಗಿತ್ತು ಅರ್ಹಗೊಳಿಸತಕ್ಕದ್ದು, ಹೀಗೆ ಆತನು "ಅವರ ಕಪಟದ ಸೆಳವಿಗೆ ಬಿದ್ದನು" (2:13). [15]ರೋಮಾ 9:3 ಹೋಲಿಸಿರಿ, ಅದು ಒಂದು ಬಯಕೆಯನ್ನು ಒಳಗೊಂಡಿದೆ. ಹೇಗೂ, ವಾಕ್ಯದಲ್ಲಿ ಧಾತ್ವರ್ಥವಾಚಿ εἶναι (*ಎಯಿನಾಯ್*) ಎಂಬುದನ್ನು ಬಳಸಲಾಗಿದೆ. [16]ಗ್ರೀಕ್ ಭಾಷೆಯ *ಹೆಸ್ಘುಹಾಯೋ* ಎಂಬ ಕ್ರಿಯಾಪದವು ಅಪೊಸ್ತಲರ ಕೃತ್ಯಗಳು 11:18ರಲ್ಲಿ "ಆಕ್ಷೇಪಣೆ ಮಾಡುವದನ್ನು ಬಿಟ್ಟರು" ಎಂದು ಅನುವಾದಿಸಲ್ಪಟ್ಟಿದ್ದು, ಅದು ಯಾವಾಗಲೂ ಸಂಪೂರ್ಣ ಮೌನವನ್ನು ಸೂಚಿಸುವದಿಲ್ಲ. ಕೆಲವು ಸನ್ನಿವೇಶಗಳಲ್ಲಿ, ವಿರೋಧವನ್ನು ಅಥವಾ ವಾಗ್ವಾದ ನಿಲ್ಲಿಸುವದನ್ನು ಸೂಚಿಸುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 21:12-14). ಅಪೊಸ್ತಲರ ಕೃತ್ಯಗಳು 11:18ರಲ್ಲಿ, ಆ ಪದದ ಬಳಿಕ ವಾಸ್ತವಿಕದಲ್ಲಿ ಮಾತಾಡುವದಿರುತ್ತದೆ, ಅಲ್ಲಿ ದೇವರಿಗೆ ಸ್ತೋತ್ರ ಮಾಡಲ್ಪಡುವುದು. F. F. Bruceನು ವಾಕ್ಯಭಾಗದ ಮೇಲೆ ಈ ವ್ಯಾಖ್ಯಾನವನ್ನು ಕೊಟ್ಟನು: "ಅವರ ಟೀಕೆಯು ನಿಂತು ಹೋಯಿತು; ಅವರ ಆರಾಧನೆಯ ಆರಂಭಗೊಂಡಿತ್ತು . . . ಅದೇ ರೀತಿಯೇ, ಪೇತ್ರನ ಕೃತ್ಯಗಳಿಗೆ ಅನುಮೋದನೆಯು

ನೀಡಲ್ಪಟ್ಟಿದ್ದು ಯೆರೂಸಲೇಮಿನ ಸಭೆಯ ವೈರಾಗ್ಯದ ನಾಯಕ ವರ್ಗ ಹಾಗೂ ಪಂಕ್ತಿಯವರಿಗಿಂತಲೂ ಆತನ ಜೊತೆಯ ಅಪೊಸ್ತಲರಿಂದ ಹೆಚ್ಚು ಮನಃಪೂರ್ವಕವಾಗಿತ್ತು" (F. F. Bruce, *Commentary on the Book of Acts*, The New International Commentary on the New Testament [Grand Rapids, Mich.: Wm. B. Eerdmans Publishing Co., 1954], 236). [17]ಸುನ್ನತಿಯ ಕುರಿತಾದ ಈ ಹೊರನೋಟವು ವಿಶೇಷವಾಗಿ ಗ್ರೀಕರ ಮಧ್ಯದಲ್ಲಿ ಚಾಲ್ತಿಯಲ್ಲಿತ್ತು, ಅವರು ಆ ಆಚಾರವನ್ನು ದೇಹದ ಪರಿಪೂರ್ಣತೆಯನ್ನು ಕತ್ತರಿಸಿಕೊಳ್ಳುವದು ಎಂಬುದಾಗಿ ಪರಿಗಣಿಸಿದ್ದರು. [18]5:11ರಲ್ಲಿ ಅದೇ ರೀತಿಯ *ಎಟಿ* ಕಾಣಿಸಿಕೊಳ್ಳುತ್ತದೆ: "ನಾನಾದರೆ ಸಹೋದರರೇ, ಸುನ್ನತಿಯಾಗಬೇಕೆಂದು *ಇನ್ನೂ* ಸಾರುವವನಾಗಿದ್ದರೆ *ಇನ್ನು* ನನಗೆ ಹಿಂಸೆಯಾಗುವದು ಯಾಕೆ?" (ಒತ್ತಿ ಹೇಳಿದ್ದು ನನ್ನದು). [19]ಬೇರೆ ಆವೃತ್ತಿಗಳು ಈ ಅನುವಾದವನ್ನು ಹೊಂದಿವೆ: "ಮನುಷ್ಯನ ಸುವಾರ್ತೆಯಲ್ಲ" (RSV); "ಮನುಷ್ಯ ಮೂಲದಿಂದ ಬಂದದ್ದಲ್ಲ" (NRSV); "ಕೇವಲ ಮನುಷ್ಯ ತರ್ಕದ ಮೇಲೆ ಆಧಾರವಾದದ್ದಲ್ಲ" (NLT); ಮತ್ತು "ಯಾವ ಮನುಷ್ಯನ ಆವಿಷ್ಕಾರವೂ ಅಲ್ಲ" (Phillips). [20]1 ಕೊರಿಂಥ 11:23ರಲ್ಲಿ ಮತ್ತು 15:3ರಲ್ಲಿ ತಾನು ಪಡೆದುಕೊಂಡಿದ್ದ ಮತ್ತು ಸಭೆಗೆ ಅದನ್ನು ಕಲಿಸಿಕೊಟ್ಟಿದ್ದ ಮಾಹಿತಿಗಾಗಿ ಪೌಲನು *ಪಾರಾಲಂಬಾನೋ* ಎಂಬ ಪದವನ್ನು ಬಳಸುತ್ತಾನೆ. ಮೊದಲ ಸಂದರ್ಭದಲ್ಲಿ, ಆ ಮಾಹಿತಿಯನ್ನು "ಕರ್ತನು ಪ್ರಕಟಿಸಿದನು" ಎಂಬುದನ್ನು ಸ್ಪಷ್ಟಗೊಳಿಸಿದನು. ಕರ್ತನನ್ನು ಎರಡನೆಯ ಸಂದರ್ಭದಲ್ಲಿ ಸಹ ಮೂಲ ಆಗಿದ್ದನೆಂಬುದಾಗಿ ಸಹ ಅರ್ಥಮಾಡಿಕೊಳ್ಳತಕ್ಕದ್ದು.

[21]Boles, 40. [22]Mishnah *Aboth* 2.8. [23]Ἰουδαΐζω (*Ioudaizō*) ಎಂಬ ಕ್ರಿಯಾಪದವು "ಯೆಹೂದಿ ಧಾರ್ಮಿಕ ನಿಯಮಗಳ ಪ್ರಕಾರ ಜೀವಿಸು" ಎಂಬರ್ಥವನ್ನು ಹೊಂದಿದ್ದು, ಅದು ಸಹ ಹೊಸ ಒಡಂಬಡಿಕೆಯಲ್ಲಿ ಒಂದೇ ಒಂದು ಸಾರಿ (2:14); ಮತ್ತು ಅದಕ್ಕೆ ಸಂಬಂಧಿಸಿದ ಗುಣವಾಚಕವಾದ Ἰουδαϊκός (*Ioudaikos*, "ಯೆಹೂದಿ") ಎಂಬುದು, ಇದು ಒಂದೇ ಒಂದು ಸಾರಿ ಕಾಣಿಸಿಕೊಳ್ಳುತ್ತದೆ (ತಿತನಿಗೆ 1:14). ಕ್ರಿಯಾವಿಶೇಷಣವಾದ Ἰουδαϊκῶς (*Ioudaikōs*) ಎಂದಾಗಿದ್ದು, "ಒಬ್ಬ ಯೆಹೂದ್ಯನಂತೆ" ಅಥವಾ "ಒಬ್ಬ ಯೆಹೂದ್ಯನ ರೀತಿಯಂತೆ" ಎಂದರ್ಥವಾಗಿದ್ದು, ಇದು ಸಹ ಅದರಂತೆಯೇ ಒಂದೇ ಸಾರಿ ಕಾಣಿಸಿಕೊಳ್ಳುತ್ತದೆ (2:14). [24]Mishnah *Aboth* 3.12. [25]"ಸಾಧನ" (σκεῦος, *skeuos*) ಎಂಬ ಪದವು KJVಯಲ್ಲಿ "ಪಾತ್ರೆ" ಎಂದು ಅನುವಾದಿಸಲ್ಪಟ್ಟಿದೆ, ಆದರೆ ಈ ಸನ್ನಿವೇಶದಲ್ಲಿ "ಸಾಧನ" ಎಂಬುದು ಉತ್ತಮ ಅನುವಾದವಾಗಿರುತ್ತದೆ. ಈ ಪದವು ಒಂದು ಜಾಡಿ ಅಥವಾ ತಟ್ಟೆ (ಒಂದು ಪಾತ್ರೆ) ಎಂಬುದನ್ನು ಸೂಚಿಸಬಹುದಾದರೂ, ಇಲ್ಲಿ ಅದು ಒಂದು ನಿರ್ದಿಷ್ಟವಾದ ಉದ್ದೇಶಕ್ಕೋಸ್ಕರ (ಒಂದು "ಸಾಧನ") ಉಪಯೋಗಿಸಲ್ಪಡುವ ವ್ಯಕ್ತಿಯನ್ನು ಸೂಚಿಸುತ್ತದೆ. [26]"ಕೃಪೆ ಮತ್ತು ಅಪೊಸ್ತಲತ್ವ" ಎಂಬುದನ್ನು ದ್ವಪದಾಲಂಕಾರ ಎಂದು ಅರ್ಥಮಾಡಿಕೊಳ್ಳತಕ್ಕದ್ದು, ಅದೊಂದು ಸಾಂಕೇತಿಕ ಭಾಷೆಯಾಗಿದ್ದು ಅದರಲ್ಲಿ ಒಂದೇ ವಿಚಾರವನ್ನು ವ್ಯಕ್ತಪಡಿಸುವದಕ್ಕೆ ಬಳಸಲ್ಪಡುವ ಎರಡು ಪದಗಳನ್ನು ಒಂದು ಸಂಬಂದಾವ್ಯಾಯದಿಂದ ಒಂದುಗೂಡಿಸಲಾಗುತ್ತದೆ. ಇನ್ನಷ್ಟು ನಿಖರವಾದ ಅನುವಾದವು ಹೀಗಿರುತ್ತದೆ "ಅಪೊಸ್ತಲತ್ವದ ಕೃಪೆ." [27]3:8ರಲ್ಲಿ, *ಎತ್ನೋಸ್* ಎರಡು ಸಾರಿ ಕಾಣಿಸಿಕೊಳ್ಳುತ್ತದೆ; ಅದನ್ನು "ಅನ್ಯಜನಾಂಗಗಳು" ಮತ್ತು "ದೇಶಗಳು" ಎಂದು ಸಹ ಅನುವಾದಿಸಲಾಗಿರುತ್ತದೆ. [28]ಎಫೆಸ 4:17-6:20ನೇ ವಾಕ್ಯಭಾಗವು "ಕ್ರಿಸ್ತನಿಂದ ಕಲಿತುಕೊಳ್ಳುವ" ಜನರಿಂದ ಎದುರುನೋಡುವಂಥ ವಿಶಿಷ್ಟವಾದ ನೈತಿಕ ನಡವಳಿಕೆಯು ಹೇಗಿರಬೇಕೆಂದು ವಿವರಿಸುತ್ತದೆ. [29]ಸುವಾರ್ತಿಕನಾದ ಫಿಲಿಪ್ಪನು ಅಪೊಸ್ತಲರ ಕೃತ್ಯಗಳು 8:35ರಲ್ಲಿ ಐಥಿಯೋಪ್ಯದ ಗಣ್ಯ ವ್ಯಕ್ತಿಗೆ ಸುವಾರ್ತೆಯನ್ನು ಸಾರಿದನು, ಮತ್ತು ಆ ವ್ಯಕ್ತಿಯು ದೀಕ್ಷಾಸ್ನಾನ ಮಾಡಿಸುವಂತೆ ಕೇಳಿಕೊಂಡನು. [30]ವಿಷಾದಕರವಾಗಿ, ಕೆಲವು ಆವೃತ್ತಿಗಳು "ತಡಮಾಡದೆ" ಎಂಬ ಪದವನ್ನು ಅನುವಾದಿಸುವದಿಲ್ಲ (NRSV; GNT; NCV; CEV), ಅನುವಾದಕರು ಅದನ್ನು ಅನಾವಶ್ಯಕ ಅಥವಾ ಅಗತ್ಯಕ್ಕಿಂತ ಅಧಿಕವಾದದ್ದೆಂದು ಪರಿಗಣಿಸಿದ್ದೇ ಕಾರಣವಾಗಿರುತ್ತದೆಂದು ತೋರುತ್ತದೆ.

[31]ಅರಬಸ್ಥಾನದ ಬಹುಪಾಲು ಪರ್ಯಾಯದ್ವೀಪವು ಮರುಭೂಮಿಯನ್ನು ಒಳಗೊಂಡಿದ್ದರೂ, ನಾವು ಅದನ್ನು ಸಂಪೂರ್ಣವಾಗಿ ಫಲವತ್ತಲ್ಲದ ಅಥವಾ ಸಾಕಷ್ಟು ಪ್ರಮಾಣದ ಜನಸಂಖ್ಯೆಯನ್ನು ಪೋಷಿಸಲು ಅಶಕ್ತವಾದದ್ದೆಂದು ಭಾವಿಸಕೂಡದು. ಅದು ಪಶ್ಚಿಮ (ಸಿರಿಯಾ, ಐಗುಪ್ತ, ಮತ್ತು ಐಥಿಯೋಪ್ಯ) ಹಾಗೂ ಪೂರ್ವ (ಪರ್ಶಿಯ ಮತ್ತು ಭಾರತ) ನಡುವಿನ ಪ್ರಮುಖ ವ್ಯಾಪಾರದ ಮಾರ್ಗದಲ್ಲಿತ್ತಾದ್ದರಿಂದ, ಅದು ಅಲ್ಲಿ ಹಾದು ಹೋಗುವ ವ್ಯಾಪಾರಿಗಳೊಂದಿಗೆ ವಹಿವಾಟು ಮಾಡುವ ಮೂಲಕ ಲಾಭವನ್ನು ಪಡೆದುಕೊಂಡಿತ್ತು ಮತ್ತು ಅದು ಸ್ವಂತ ಮಾರಾಟದ ವಸ್ತುಗಳನ್ನು ಹೊಂದಿತ್ತು, ಅವುಗಳಲ್ಲಿ ಒಣದ್ರಾಕ್ಷಿ, ಸುಗಂಧದ ಕಟ್ಟಿಗೆಗಳು, ಧೂಪ, ಸಾಂಬಾರು ಪದಾರ್ಥಗಳು, ಮತ್ತು ಇತರೆ ಸಾಮಗ್ರಿಗಳು ಸೇರಿದ್ದವು. [32]Robert L. Johnson, *The Letter of Paul to the Galatians*, The Living Word Commentary (Austin, Tex.: R. B. Sweet Co., 1969), 50. [33]Merrill F. Unger, *The New Unger's Bible Dictionary*, ed. R. K. Harrison (Chicago: Moody Press, 1988), 91. [34]ಅರಬಸ್ಥಾನದ ರಾಜನ ವಿಷಯದಲ್ಲಿ ನೋಡುವದಾದರೆ, "ಅರೇತ" ಎಂಬುದು ಸಾಮಾನ್ಯವಾಗಿ ಬಳಸಲಾಗುತ್ತಿದ್ದ ಬಿರುದು ಆಗಿತ್ತು, ಅದೇ ರೀತಿಯಲ್ಲಿಯೇ "ಕಂದಾಕೆ" ಎಂಬುದು (ನೋಡಿರಿ ಅಪೊಸ್ತಲರ ಕೃತ್ಯಗಳು 8:27) ಐಥಿಯೋಪ್ಯದ ವಿವಿಧ ರಾಣಿಯರ ಬಿರುದು ಆಗಿತ್ತು ಮತ್ತು "ಕೈಸರ" ಎಂಬುದು ರೋಮನ್ ಸಾಮ್ರಾಜ್ಯದ ದೊರೆಗಳಿಗೆ ಬಳಸಲಾಗುತ್ತಿದ್ದ ಬಿರುದು. ಅರೇತ IV ಎಂಬವನು ಗಲೀಲಾಯ ಮತ್ತು ಪೆರೀಯದ ಅಧಿಪತಿಯಾಗಿದ್ದ ಅಂತೀಪ ಹೆರೋದನ ಮಾವನಾಗಿದ್ದನು (ಕ್ರಿ.ಪೂ. 4-ಕ್ರಿ.ಶ. 39). ಹೇಗೂ, ಅಂತೀಪನು ಹೆರೋದ್ಯಳನ್ನು ಮದುವೆಯಾಗುವದಕ್ಕಾಗಿ ಅರೇತನ ಮಗಳಿಗೆ ವಿಚ್ಛೇದನ ಕೊಟ್ಟಿದ್ದನು (ನೋಡಿರಿ ಮಾರ್ಕ 6:17). ಈ ಮೋಸದ ಕೃತ್ಯದಿಂದ ಬಹಳ ಬೇಸರಗೊಂಡವನಾಗಿ,

ಅರೇತನು ಅಂತೀಪನ ಮೇಲೆ ದಾಳಿ ಮಾಡಿ ಆತನ ಸೈನ್ಯದ ಹತ್ತರಲ್ಲೊಂದು ಭಾಗವನ್ನು ಹತ್ಯೆಗೈದನು. (Josephus *Antiquities* 18.5.1.) ಅರೇತನು ನಿಜಕ್ಕೂ ಸ್ವಲ್ಪ ಕಾಲದ ವರೆಗೂ ದಮಸ್ಕದ ಮೇಲೆ ನಿಯಂತ್ರಣವನ್ನು ಹೊಂದಿದ್ದನೋ ಅಥವಾ ತನ್ನ ಪ್ರಾಂತಾಧಿಕಾರಿಯ ಮೂಲಕವಾಗಿ ಪಟ್ಟಣದ ಮೇಲೆ ಕೇವಲ ಪ್ರಭಾವನ್ನಷ್ಟೆ ಹೊಂದಿದ್ದನೋ ಎಂಬುದು ವಾಗ್ವಾದ ಮಾಡತಕ್ಕದ್ದಾಗಿದೆ (2 ಕೊರಿಂಥ 11:32, 33). ಕೆಲವರು ರೋಮನ್ ಚಕ್ರವರ್ತಿಯಾದ Caligula (ಕ್ರಿ.ಶ. 37-41) ಎಂಬವನು ದಮಸ್ಕವನ್ನು ಅರೇತನಿಗೆ ಒಂದು ಉಡುಗೋರೆಯಾಗಿ ನೀಡಿದ್ದನೆಂದು ಊಹೆಗಳನ್ನು ಮಾಡಿಕೊಳ್ಳುತ್ತಾರೆ. [35]ಅಪೊಸ್ತಲರ ಕೃತ್ಯಗಳು 9:26-29ರಲ್ಲಿ ಲೂಕನು ಪ್ರಸ್ತಾಪಿಸಿರುವ ಯೆರೂಸಲೇಮಿನ ಭೇಟಿಯ ವಿಷಯದಲ್ಲಿ ಅದು ಗಲಾತ್ಯ 1:18, 19ರಲ್ಲಿನ ಅದೇ ಭೇಟಿಯೇ ಆಗಿರುತ್ತದೆಂದು ಸಾಮಾನ್ಯವಾಗಿ ಒಪ್ಪತವಿರುತ್ತದೆ. [36]Leon Morrisನು ಹೀಗೆ ಬರೆದನು, "ಆರಂಭಿಕ ವಿಶ್ವಾಸಿಗಳನ್ನಾಗಲಿ ಮತ್ತು ಅವರ ನಾಯಕರನ್ನಾಗಲಿ ಭೇಟಿಯಾಗಲಿಲ್ಲ ಎಂಬ ಈ ಘಂಟಾಘೋಷವಾದ ಹಕ್ಕು ನಿರಾಕರಣೆಯು ಸ್ಪಷ್ಟಪಡಿಸುವದೇನೆಂದರೆ ಪೌಲನು ಕ್ರೈಸ್ತ ಸಂದೇಶದ ಕುರಿತು ಪಡೆದುಕೊಂಡ ಜ್ಞಾನವನ್ನು ತನಗಿಂತ ಮುಂಚೆ ಕ್ರೈಸ್ತರಾಗಿದ್ದ ಯಾರೊಬ್ಬರಿಂದಲೂ ಪಡೆದುಕೊಳ್ಳಲಿಲ್ಲ ಎಂಬುದೆ. ವಿಶೇಷವಾಗಿ, ಆತನಿಗಿಂತ ಅಪೊಸ್ತಲರಿಂದ ಆತನು ಕರೆಯಲ್ಪಡಲಿಲ್ಲ ಅಥವಾ ಆದೇಶಿಸಲ್ಪಡಲೂ ಇಲ್ಲ" (Leon Morris, *Galatians: Paul's Charter of Christian Freedom* [Downers Grove, Ill.: InterVarsity Press, 1996], 57). [37]ಈ ವಾಸ್ತವಾಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವದಾದರೆ, ಪೌಲನು ಪೇತ್ರನಾಗಲಿ ಅಥವಾ ಇತರ ಅಪೊಸ್ತಲರಾಗಲಿ ಸಾರುತ್ತಿದ್ದ ಅಂಗೀಕೃತ ಬೋಧನೆಗೆ ತದ್ವಿರುದ್ಧವಾದ ಅಥವಾ ಘರ್ಷಣೆಯನ್ನುಂಟು ಮಾಡಬಹುದಾದ ಯಾವದನ್ನೂ ಬೋಧಿಸುತ್ತಿಲ್ಲ ಎಂದು ಖಚಿತಪಡಿಸಿಕೊಳ್ಳಲು ಪೇತ್ರನೊಂದಿಗೆ (ಕೇಫ) ಮಾತುಕತೆ ನಡಿಸಿದ್ದನು ಎಂದು ಕೆಲವು ವ್ಯಾಖ್ಯಾನಕಾರರು ನಂಬುವದು ಗಮನಾರ್ಹವಾಗಿರುತ್ತದೆ. [38]ಪೌಲನು ಏಕೆ ಕೇವಲ ಹದಿನೈದು ದಿನಗಳ ಮಟ್ಟಿಗೆ ಮಾತ್ರವೇ ಯೆರೂಸಲೇಮಿನಲ್ಲಿದ್ದನು ಎಂಬುದರ ಕುರಿತ ಹೆಚ್ಚಿನ ಚರ್ಚೆಗೆ, 1:20ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ. [39]ಒಂದು ಸಭೆಯ ಸಂಪ್ರದಾಯದ ಪ್ರಕಾರ, ಪೇತ್ರನ ಸಂದೇಶವು ಮಾರ್ಕರು ಬರೆದ ಸುವಾರ್ತೆಗೆ ಒಂದು ತಳಹದಿಯಾಗಿತ್ತು, ಅದು ಯೇಸುವು ಭೂಲೋಕದಲ್ಲಿ ಮಾಡಿದ ಸೇವೆಯನ್ನು ವಿವರಿಸುವದಾಗಿದೆ. (Eusebius *Ecclesiastical History* 2.15; 3.39; 5.8; 6.14, 25; Tertullian *Against Marcion* 4.5.) [40]ಅನೇಕ ಪ್ರಕರಣಗಳಲ್ಲಿ, ಪೌಲನನ್ನು ಗಣ್ಯ ಪ್ರಜೆಗಳು, ರೋಮನ್ ಅಧಿಕಾರಿಗಳು, ಅರಸರು, ಮತ್ತು ಅಂತಿಮವಾಗಿ ಕೈಸರನ ಮುಂದೆ ಸಾಕ್ಷಿಯನ್ನು ಹೇಳುವಂತೆ ಕರೆಯಲ್ಪಟ್ಟನು (ಅಪೊಸ್ತಲರ ಕೃತ್ಯಗಳು 9:15; 13:7; 17:22; 19:31; 23:11; 24:1, 10, 24, 25; 25:9-12, 23; 27:23-25).

[41]J. B. Lightfootನು ಹೀಗೆ ಕೇಳಿದನು, "ಯಾಕೋಬನು ಇಲ್ಲಿ ಅಪೊಸ್ತಲನೆಂದು ಬಿರುದಾಂಕಿತ ಮಾಡಲಾಗಿದೆಯೋ? ನಾವು ಅದನ್ನು 'ನಾನು ಯಾಕೋಬನಲ್ಲದೆ ಬೇರೆ ಯಾವ ಅಪೊಸ್ತಲರನ್ನು ಭೇಟಿಯಾಗಲಿಲ್ಲ,' ಅಥವಾ 'ನಾನು ಬೇರೆ ಯಾವ ಅಪೊಸ್ತಲರನ್ನೂ ಭೇಟಿಯಾಗದೆ ಯಾಕೋಬನನ್ನು ಮಾತ್ರವೇ ಭೇಟಿಯಾದೆನು' ಎಂದು ಅನುವಾದಿಸತಕ್ಕದ್ದೋ?" Lightfootನು ಯಾಕೋಬನ ವಿಷಯದಲ್ಲಿ ಆತನೊಬ್ಬ ಅಪೊಸ್ತಲನೆಂದು ಭಾವಿಸಿದನಾದರೂ, ಬೇರೆ ಸಾಧ್ಯತೆಗಳಿದ್ದವು ಎಂಬುದನ್ನು ಆತನು ಒಪ್ಪಿಕೊಂಡನು ಮತ್ತು ಮುಂದುವರೆದು ಹೀಗೆ ಹೇಳುತ್ತಾನೆ, "ಸಂತ. ಯಾಕೋಬನು ಹನ್ನೆರಡು ಮಂದಿಯಲ್ಲಿ ಒಬ್ಬನಾಗಿದ್ದನೆ ಎಂದಾಗುವದಿಲ್ಲವಾದರೂ, ಇಲ್ಲಿ ಆತನು ಅಪೊಸ್ತಲನೆಂದು ಕರೆಯಲ್ಪಟ್ಟಿರುವಂತೆ ತೋರುತ್ತದೆ" (J. B. Lightfoot, *The Epistle of St. Paul to the Galatians*, Classic Commentary Library [Grand Rapids, Mich.: Zondervan Publishing House, 1957], 84–85). [42]ಹೆಚ್ಚಿನ ಮಾಹಿತಿಗಾಗಿ, ನೋಡಿರಿ *ಅನುಬಂಧ: ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲರ ಸ್ಥಾನ ಹಾಗೂ ಪಾತ್ರ,* ಪುಟಗಳು 250-54. [43]Bruce, *Acts*, 206. [44]David J. Williams, *Acts*, New International Biblical Commentary (Peabody, Mass.: Hendrickson Publishers, 1990), 176. [45]J. W. McGarvey, *A New Commentary on Acts of the Apostles* (Delight, Ark.: Gospel Light Publishing Co., n.d.), 1:189. [46]ಮತ್ತಾಯ 5:33-37 ಮತ್ತು 23:16-22ರಲ್ಲಿ, ಆಣೆಗಳನ್ನು ದುರುಪಯೋಗಪಡಿಸಿಕೊಳ್ಳುವ ವಿಷಯದಲ್ಲಿ ಯೇಸುವ ಖಂಡನೆಯನ್ನು ಮಾಡಿದನು. ಯೆಹೂದ್ಯರು ಅನೇಕ ಸಾರಿ ದೇವರಿಗೆ ನಿಕಟವಾಗಿ ಸಂಬಂಧ ಹೊಂದಿರುವ ಸಂಗತಿಗಳ ಮೇಲೆ ಆಣೆಯನ್ನು ಇಡುತ್ತಿದ್ದರು (ದೇವಾಲಯ, ಯಜ್ಞವೇದಿ, ಮತ್ತು ಪರಲೋಕ) ಮತ್ತು ಬಳಿಕ ಈ ಆಣೆಗಳನ್ನು ಊರ್ಜಿತವಲ್ಲ ಎಂದು ಕಾಣುತ್ತಿದ್ದರು. ಬಹುಶಃ "ಆಣೆಯನ್ನೇ ಇಡಬೇಡ" ಎಂಬ ಆಜ್ಞೆಯಲ್ಲಿ ಸ್ವಲ್ಪ ಮಟ್ಟಿಗೆ ಅತಿಶಯೋಕ್ತಿ ಇದೆಯೆಂದು ಅರ್ಥಮಾಡಿಕೊಳ್ಳಬಹುದಾಗಿದೆ (ಮತ್ತಾಯ 5:34). ಅಂತೂ, ಸತ್ಯಭರಿತ ಆನೆಗಳು ಪೌಲನ ಪತ್ರಿಕೆಗಳೆಲ್ಲೆಲ್ಲಾ ಪ್ರೋಕ್ಷಿಸಲ್ಪಟ್ಟಿರುತ್ತವಷ್ಟೆ (ರೋಮಾ 1:9; 1 ಕೊರಿಂಥ 15:31; 2 ಕೊರಿಂಥ 1:23; ಗಲಾತ್ಯ 1:20; ಫಿಲಿಪ್ಪಿ 1:8; 1 ಥೆಸಲೋನಿಕ 5:27). ಅಷ್ಟುಮಾತ್ರವಲ್ಲದೆ, ತನಗೆ ಆಣೆಯಿಟ್ಟ ಮಹಾ ಯಾಜಕನಿಗೆ ಯೇಸು ಉತ್ತರವನ್ನು ಕೊಟ್ಟನು (ಮತ್ತಾಯ 26:63, 64), ಮತ್ತು ತಂದೆಯಾದ ದೇವರು ಒಂದು ಪ್ರಮಾಣ ಮಾಡುವವನಂತೆ ಚಿತ್ರಿಸಲ್ಪಟ್ಟಿರುತ್ತಾನೆ (ಫಿಲಿ 6:17, 18). [47]ಗಲಾತ್ಯದವರಿಗೆ ಪತ್ರಿಕೆಯು ಆರಂಭದಲ್ಲಿ ಬರೆಯಲ್ಪಟ್ಟಿತ್ತು (c. ಕ್ರಿ.ಶ. 48-49), ಅದು ಹೊಸ ಒಡಂಬಡಿಕೆಯ ಪುಸ್ತಕಗಳೊಳಗೆ ಮೊಟ್ಟಮೊದಲು ಬರೆಯಲ್ಪಟ್ಟದ್ದಾಗಿರಬಹುದು. ಆದದರಿಂದ ಆ ಸಮಯದಲ್ಲಿ ಲಭ್ಯವಿದ್ದ ಶಾಸ್ತ್ರಗಳು ಹಳೆಯ ಒಡಂಬಡಿಕೆಯ ಪುಸ್ತಕಗಳನ್ನೊಳಗೊಂಡಿತ್ತು. [48]Steven Barabas, "Seal," in *The New International Dictionary of the Bible*, pictorial ed., ed. J. D. Douglas and

Merrill C. Tenney (Grand Rapids, Mich.: Zondervan Publishing House, 1987), 909–11. ಮುದ್ರೆಗಳನ್ನು ಬಳಸುವ ಪದ್ಧತಿಯನ್ನು ಕುರಿತು ಬೈಬಲಿನಲ್ಲಿ ಉತ್ತಮವಾಗಿ ಪ್ರಮಾಣೀಕರಿಸಲಾಗಿರುತ್ತದೆ (1 ಅರಸು 21:8; ನೆಹಮೀಯ 9:38; 10:1; ಎಸ್ತೇರಳು 3:12; 8:8; ಯೆರೆಮೀಯ 32:11-14; ದಾನಿಯೇಲ 6:17; ಮತ್ತಾಯ 27:66; ಪ್ರಕಟನೆ 5:1). ಮುದ್ರೆಯ ಸಾದೃಶ್ಯವು ಸುರಕ್ಷಿತ, ಭದ್ರವಾಗಿ, ಅಥವಾ ಅನುಮೋದಿಸಲ್ಪಟ್ಟದ್ದಾಗಿ ಇರುವ ಒಂದು ಸಂಗತಿಯನ್ನು ಸೂಚಿಸುವದಾಗಿದೆ (ರೋಮಾ 15:25-28; 1 ಕೊರಿಂಥ 9:1, 2; ಎಫೆಸ 1:13, 14; 4:30; ಪ್ರಕಟನೆ 7:2-4). [49]John McRay, *Paul: His Life and Teaching* (Grand Rapids, Mich.: Baker Academic, 2003), 73–74, 94. [50]ಇಲ್ಲಿ ಬಳಸಲ್ಪಟ್ಟಿರುವ ಪ್ರಕಾರ, ಒಬ್ಬ Ἑλληνιστής (*Hellēnistēs*)ನು, ಗ್ರೀಕ್ ಭಾಷೆಯನ್ನು ಅಳವಡಿಸಿಕೊಂಡಿದ್ದು ಮಾತ್ರವಲ್ಲ ಆದರೆ ಗ್ರೀಕರ ಜೀವನ ಶೈಲಿಯ ಬಹಳಷ್ಟು ಭಾಗವನ್ನು ಅಳವಡಿಸಿಕೊಂಡ ಯೆಹೂದ್ಯನಾಗಿದ್ದನು. ಇದು ಚದುರಿ ಹೋಗುವಿಕೆಯ ಕಾಲದಲ್ಲಿದ್ದ ಬಹಳಷ್ಟು ಸಂಖ್ಯೆಯ ಯೆಹೂದ್ಯರಿಗೆ ವಿಶೇಷವಾಗಿ ಅನ್ವಯವಾಗುವದಾಗಿತ್ತು. ಇವರಲ್ಲಿ ಅನೇಕರು ಫಿಲಿಷ್ಟಿಯದ ಸ್ಥಳೀಯ ಭಾಷೆ ಮತ್ತು ಸ್ವತಃ ಕರ್ತನು ಮಾತಾಡುತ್ತಿದ್ದ ಭಾಷೆಯಾಗಿದ್ದ ಅರಾಮಿಕ್ ಭಾಷೆಯಲ್ಲಿ ಈಗ ನಿರರ್ಗಳತೆಯನ್ನು ಹೊಂದಿರಲಿಲ್ಲ.

[51]ಚಿಕ್ಕ ಊರಾದ ನಜರೇತನ್ನು ತಾತ್ಸಾರದಿಂದ ಕಾಣಲ್ಪಡುತ್ತಿತ್ತು (ಯೋಹಾನ 1:46). "ನಜರೇಯ" ಎಂಬ ಪದವು ಕೆಲವು ಸಾರಿ ಯೇಸುವು ನಜರೇತಿನಲ್ಲಿ ಹುಟ್ಟಿದವನೆಂದಷ್ಟೆ ಸೂಚಿಸುವದಾಗಿದ್ದರೂ (ಅಪೊಸ್ತಲರ ಕೃತ್ಯಗಳು 2:22), ಕ್ರೈಸ್ತರನ್ನು "ಒಂದು ತುಚ್ಛೀಕರಣದ ನಾಮಧೇಯ" ಎಂಬಂತೆ "ನಜರೇಯರು" ಎಂದು ಕರೆದಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 24:5) ಯಾಕೆಂದರೆ ಅವರು "ಯೇಸುವನ್ನು ಹಿಂಬಾಲಿಸುವವರಾಗಿದ್ದರು, ಆತನು ನಜರೇತಿನಿಂದ ಬಂದವನೆಂಬ ಕಲ್ಪನೆಯು ಆತನನ್ನು ಒಬ್ಬ ಸುಳ್ಳು ಪ್ರವಾದಿ ಎಂದು ಗುರುತಿಸಲ್ಪಡುವಂತೆ ಮಾಡಿತ್ತು" (Unger, 906-7). [52]ಅಪೊಸ್ತಲರ ಕೃತ್ಯಗಳು 9:31ರಲ್ಲಿ "ಹೆಚ್ಚುತ್ತಾ ಬಂದವು" ಎಂಬುದರ ಬದಲಾಗಿ ಗ್ರೀಕ್ ಪದ πορεύομαι (*poreuomai*) ಎಂಬುದು "ನಡೆಯುತ್ತಾ" (KJV; NKJV) ಅಥವಾ "ಜೀವಿಸುತ್ತಾ" (NRSV; NIV) ಎಂದು ಅನುವಾದಿಸಲ್ಪಟ್ಟಿದೆ. ಕ್ರಿಯಾಪದವು "ಬರುತ್ತಾ" "ಹೋಗುತ್ತಾ," ವಿಶೇಷವಾಗಿ ಕಾಲುಗಳಿಂದ ನಡೆದು ಬರುವಮ ಹೋಗುವ ಎಂಬ ವಿಚಾರವನ್ನೊಳಗೊಂಡಿದೆ, ಇಲ್ಲಿ ಅದು ಒಬ್ಬನ ನಡವಳಿಕೆ ಅಥವಾ ಜೀವನ ರೀತಿಯನ್ನು ಸೂಚಿಸುವ ಒಂದು ಗಾದೆಯಾಗಿ ಬಳಸಲ್ಪಟ್ಟಿದೆ. [53]Machteld J. Mellink, "Cilicia," in *The Interpreter's Dictionary of the Bible*, ed. George Arthur Buttrick (Nashville: Abingdon Press, 1962), 1:627–28. [54]Bruce, *Galatians*, 103. [55]Richard N. Longenecker, *Galatians*, Word Biblical Commentary, vol. 41 (Nashville: Thomas Nelson Publishers, 1990), 42. [56]ಆರಂಭಿಕ ಹಸ್ತಪ್ರತಿಗಳಲ್ಲಿ ಲೂಕ 22:43, 44 ವಚನಗಳು ಇರುವದಿಲ್ಲವಾದರೂ, ಅನುವಾದಕರು ಈ ವಚನಗಳನ್ನು NKJV, NIV, ಮತ್ತು NASBಯಲ್ಲಿ ಸೇರ್ಪಡೆಗೊಳಿಸುವದು ಯುಕ್ತವೆಂದು ಕಂಡರು. ಮತ್ತಾಯ 26:37, 38ರಿಂದ, ಯೇಸುವು ಆತ್ಮದಲ್ಲಿ ಅತಿ ಘೋರವಾಗ ವೇದನೆಯನ್ನು ಅನುಭವಿಸಿದನೆಂಬುದು ಸ್ಪಷ್ಟವಾಗುತ್ತದೆ. ನಾವು ಇಬ್ರಿಯ 5:7ರಲ್ಲಿನ ಮಾತುಗಳನ್ನು ಹೋಲಿಸಿ ನೋಡಬಹುದು: "ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು." [57]ಯೇಸುವಿನ ಯಜ್ಞದಲ್ಲಿದ್ದ ಇನ್ನೊಂದು ಭಾವನೆಯು "ಶಮನಗೊಳಿಸುವಿಕೆ" (ἱλαστήριον, *hilastērion*) ಎಂಬುದು, ಪಾಪವನ್ನು ದ್ವೇಷಿಸುವ ಕಾರಣ ದೇವರಿಗಿರುವ ಕೋಪವನ್ನು ಶಮನ ಮಾಡುವ ಪ್ರಕ್ರಿಯೆ ಇದಾಗಿದೆ. ಇದಕ್ಕೆ ಸಂಬಂಧಿಸಿದ ಪದವೆಂದರೆ "ಪ್ರಾಯಶ್ಚಿತ್ತ" (ἱλασμός, *hilasmos*) ಮಾನವ ಪಾಪಪರಿಹಾರಕ್ಕೆ ಕಾರಣವಾದದ್ದು. ಮೊದಲ ಪದವು ದೇವರಿಗೆ ಸಂಬಂಧ ಪಟ್ಟಂತೆ ಇರುತ್ತದೆ, ಮತ್ತು ಎರಡನೆಯದ್ದು ಮಾನವ ಪಾಪದ ಕುರಿತಾಗಿರುತ್ತದೆ. ಯೇಸುವಿನ ಮರಣವು ನಾವು ಯಾವ ಪಾಪದ ಮೂಲಕ ಆತ್ಮೀಕವಾಗಿ ಸತ್ತವರಾಗಿದ್ದೆವೋ ಆ ನಮ್ಮ ಪಾಪ ಸಮಸ್ಯೆಯನ್ನು ಬಗೆಹರಿಸಲು ಸಂಭವಿಸಿತ್ತು (ಎಫೆಸ 2:1-7). ಈಗ ನಾವು, ವಿಧೇಯತೆಯುಳ್ಳ ನಂಬಿಕೆಯ ಮೂಲಕ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದು ಮತ್ತು "ಹೊಸಬರಾಗಿ ನಡೆದುಕೊಳ್ಳಲು" ಜೀವಿತರಾಗಿ ಎಬ್ಬಿಸಲ್ಪಡಬಹುದು (ರೋಮಾ 6:1-4). [58]Isaac Watts, "O God, Our Help in Ages Past," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [59]ಈ ಪರಿಭಾಷೆಯು KJV ಮತ್ತು NIV ತರ್ಜುಮೆಗಳಲ್ಲಿ ಸೈತಾನನಿಗೆ ಬಳಸಲ್ಪಟ್ಟಿದೆ (ನೋಡಿರಿ ಯೋಹಾನ 12:31; 14:30; 16:11). [60]Charles H. Gabriel, "I Stand Amazed," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994).

[61]Merrill C. Tenney, *Galatians, The Charter of Christian Liberty* (Grand Rapids, Mich.: Wm. B. Eerdmans Publishing Co., 1957). [62]ನೋಡಿರಿ ವಿಮೋಚನಕಾಂಡ 4:10-16; ಯೆರೆಮೀಯ 1:4-9; ಮಾರ್ಕ 13:11; ಯೋಹಾನ 11:49-51; 1 ಕೊರಿಂಥ 14:29, 30; 1 ಪೇತ್ರ 1:10-12; 2 ಪೇತ್ರ 1:19-21; ಪ್ರಕಟನೆ 1:1-3.